ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 11 | ಸಂಚಿಕೆ 39 | ಪುಟ 16 | ಸೆಪ್ಟೆಂಬರ್ 18-24, 2017 | ರೂ. 10/-

web: www.janashakthi.co.in e-mail : js_weekly@yahoo.com



ಟ್ರಾಲ್ ಸೇನಾನಿಗಳು

ವಿಶ್ವೇಶ್ವರ ಭಟ್ಟ

ಸುರೇಶ್ ಕುಮಾರ್

ಈ ಬಾರಿ ನುಡಿದಂತೆ ನಡೆಯುವಿರಾ?





ಸೆ.12

ಫ್ಯಾಸಿಸ್ಟ್ ವಿರೋಧಿ ಮಹಾಸಂಗಮ



ಸೆ. 14

40 ಸಾವಿರ ಕಾರ್ಮಿಕರ ಮಹಾನಡೆ



ರಾಜಸ್ತಾನ್:

ಚಾರಿತ್ರಿಕ ಕಿಸಾನ್ ವಿಜಯ

ಲಿಂಗಾಯತ ಧರ್ಮ ಮತ್ತು ಎಡಪಂಥ

ಬ್ಯಾಂಕ್ ಸುಸ್ತಿ ಸಾಲ ಏಕೆ ಏರುತ್ತಿದೆ?

ಡೇರಾ ಸಚ್ಚಾ ಸೌದಾ : ಧಾರ್ಮಿಕ ಯಜಮಾನಿಕೆಗೆ ಪ್ರತಿರೋಧದ ಆಯಾಮ

ಬೃಹತ್ ಜನಾಂದೋಲನವಾದ ರಾಜಸ್ತಾನದ ರೈತರ ದೃಢ ಹೋರಾಟಕ್ಕೆ ಜಯ
ದೇಶಾದ್ಯಂತ ರೈತರಲ್ಲಿ ಆತ್ಮ ವಿಶ್ವಾಸ ತುಂಬಿರುವ ವಿಜಯ





ರಾಜಸ್ತಾನದ ರೈತರಿಗೆ, ಜನತೆಗೆ ಎಐಕೆಎಸ್ ಅಭಿನಂದನೆ

ರಾಜಸ್ತಾನದ ರೈತಾಪಿ ಜನಗಳು ಕಿಸಾನ್ ಸಭಾದ ಬಾವುಟದಡಿಯಲ್ಲಿ ಎಲ್ಲ ಜನವಿಭಾಗಗಳ ಬೆಂಬಲದೊಂದಿಗೆ ನಡೆಸಿದ 13 ದಿನಗಳ ಅವಿರತ ಹೋರಾಟದ ನಂತರ ಒಂದು ಮಹತ್ವದ ವಿಜಯ ಗಳಿಸಿದ್ದಾರೆ.

ಸಪ್ಟಂಬರ್ 1 ರಿಂದ ಜಿಲ್ಲಾ ಮುಖ್ಯಾಲಯಗಳಲ್ಲಿ 'ಮಹಾಪಡಾವ್' (ಮಹಾಧರಣಿ)ನಡೆಸಬೇಕೆಂಬ ರಾಜಸ್ತಾನ ಕಿಸಾನ್ ಸಭಾದ ಕರೆಗೆ ಓಗೊಟ್ಟ ಸಾವಿರ-ಸಾವಿರ ರೈತರು ಬೀದಿಗಿಳಿದರು. ಮೂರು ದಿನಗಳ ಕಾಲ ರಾಜ್ಯಾದ್ಯಂತ ರಾಸ್ತಾರೋಕೋ ನಡೆಯಿತು. ಅಂಬುಲೆನ್ಸ್‌ಗಳು ಮತ್ತು ಅಗತ್ಯ ಸೇವೆಗಳು ಬಿಟ್ಟು ಬೇರೆಲ್ಲ ಸಂಚಾರಗಳೂ ಸ್ಥಗಿತಗೊಂಡವು.

ಈ ರೈತ ಚಳುವಳಿಗೆ ಎಲ್ಲ ಜನವಿಭಾಗಗಳಿಂದ ಅಭೂತಪೂರ್ವ ಬೆಂಬಲ ದೊರೆತು ಅದು ನಿಜವಾಗಿಯೂ ಅದು ಜನಾಂದೋಲನವಾಗಿ ಮಾರ್ಪಟ್ಟಿತು. ಕಾರ್ಮಿಕರು ಮತ್ತು ಕಾರ್ಮಿಕ ಸಂಘಗಳು, ವರ್ತಕರು, ವ್ಯಾಪಾರಿಗಳು, ವಿದ್ಯಾರ್ಥಿಗಳು, ಯುವಜನರು, ಮಹಿಳೆಯರು ಎಲ್ಲರೂ ಈ ಬೃಹತ್ ಹೋರಾಟದಲ್ಲಿ ಭಾಗವಹಿಸಿದರು. ಸಾವಿರಾರು ಮಹಿಳೆಯರು ಮಹಾಪಡಾವ್‌ನಲ್ಲಿ ಮಾತ್ರವಲ್ಲ, ಹಗಲು ರಾತ್ರಿ ರಾಸ್ತಾ ರೋಕೋಗಳಲ್ಲಿ ಭಾಗವಹಿಸಿದರು. 13 ದಿನಗಳ ಸತತ ಹೋರಾಟದ ನಂತರ ಸಂವೇದನಾಶೂನ್ಯವಾಗಿದ್ದ ವಸುಂಧರಾ ರಾಜೇ ನೇತೃತ್ವದ ಬಿಜೆಪಿ ಸರಕಾರ ಕೊನೆಗೂ ಕಿಸಾನ್ ಸಭಾದ ಮುಖಂಡರೊಂದಿಗೆ ಮಾತುಕತೆ ನಡೆಸಲೇ ಬೇಕಾಗಿ ಬಂತು. ಸಪ್ಟಂಬರ್ 12 ರ ಮದ್ಯಾಹ್ನ 1ಗಂಟೆಯಿಂದ ಸಪ್ಟಂಬರ್ 14ರ ಮುಂಜಾವಿನ 1 ಗಂಟೆಯ ವರೆಗೆ ನಾಲ್ಕು ಹಂತಗಳ ಮಾತುಕತೆಗಳ ನಂತರ ಅದು ತಲೆವಾಗಿ ರೈತರ ಹಲವು ಬೇಡಿಕೆಗಳನ್ನು ಒಪ್ಪಬೇಕಾಗಿ ಬಂದಿದೆ.

ಬಿಜೆಪಿ ಸರಕಾರ 50,000ರೂ.ವರೆಗಿನ ಸಾಲಮನ್ನಾ ಮಾಡಲು ಒಪ್ಪುವಂತೆ ಮಾಡಲಾಗಿದೆ. ಇದರಿಂದ 8 ಲಕ್ಷ ರೈತರಿಗೆ ಪ್ರಯೋಜನವಾಗುವ ನಿರೀಕ್ಷೆ ಇದೆ. ಇದಲ್ಲದೆ ಸರಕಾರ ಒಪ್ಪಿಕೊಂಡ ಇತರ ಬೇಡಿಕೆಗಳು ಹೀಗಿವೆ:

* ನಿರ್ದಿಷ್ಟ ಸಮಯ ಚೌಕಟ್ಟಿನಲ್ಲಿ ಎಲ್ಲ ವಿಧಿ-ವಿಧಾನಗಳನ್ನು ರೂಪಿಸಿ ಸ್ವಾಮಿನಾಥನ್ ಆಯೋಗದ ಕನಿಷ್ಟ ಬೆಂಬಲ ಬೆಲೆ ಕುರಿತಾದ ಶಿಫಾರಸನ್ನು ಜಾರಿಗೆ ತರುವಂತೆ ಕೇಂದ್ರ ಸರಕಾರ-ಕ್ಕೆ ಬರೆಯುವುದಾಗಿ ರಾಜ್ಯ ಸರಕಾರ ಭರವಸೆ ಕೊಟ್ಟಿದೆ;
* ಜಿಲ್ಲಾ ಮುಖ್ಯಾಲಯಗಳಲ್ಲಿ 7 ದಿನಗಳೊಳಗೆ ನೆಲಗಡಲೆ, ಹೆಸರು ಬೇಳೆ ಮತ್ತು ಉದ್ದು ಇವನ್ನು ಕನಿಷ್ಟ ಬೆಂಬಲ ಬೆಲೆಯಲ್ಲಿ ಖರೀದಿಸಲಾಗುವುದು;
* ಹನಿ ನೀರಾವರಿಗೆ ವಿದ್ಯುತ್ ದರಗಳಲ್ಲಿ ಮಾಡಿರುವ ಏರಿಕೆಯನ್ನು ಹಿಂತೆಗೆದುಕೊಳ್ಳಲಾಗುತ್ತದೆ;
* ಪರಿಶಿಷ್ಟ ಜಾತಿಗಳು/ಬುಡಕಟ್ಟುಗಳು/ಇತರ ಹಿಂದುಳಿವ ವರ್ಗಗಳ ವಿದ್ಯಾರ್ಥಿವೇತನಗಳನ್ನು ಹಿಂದಿನ ಬಾಕಿ ಸಮೇತ ತಕ್ಷಣ ತೆರಲಾಗುವುದು;
* ಜಾನುವಾರು ಮಾರಾಟದ ಮೇಲಿನ ಹತೋಟಿಗಳನ್ನು ತಕ್ಷಣ ಸಡಿಲಿಸಲಾಗುವುದು, ದಿಕ್ಕಿಲ್ಲದ ಜಾನುವಾರುಗಳು ಮತ್ತು ಕಾಡು ಪ್ರಾಣಿಗಳಿಂದ ಬೆಳೆಗಳಿಗೆ ರಕ್ಷಣೆ ನೀಡಲಾಗುವುದು;
* ಮಾಸಿಕ ಪೆನ್ಶನನ್ನು 2000ರೂ.ಗೇರಿಸಲು ತತ್ವಶಃ ಒಪ್ಪಿಗೆ;
* ಕಾಲುವೆ ನೀರಾವರಿಯ ವಿಫಲತೆಗೆ ವಿಮಾ ದಾವೆ ಇತ್ಯರ್ಥ ಮಾಡಲಾಗುವುದು ಮತ್ತು
* ವ್ಯಾಪಾರಿಗಳು ಹಾಗೂ ರೈತರಿಗೆ ಪೋಲಿಸರಿಂದ ಕಿರುಕುಳವನ್ನು ನಿಲ್ಲಿಸಲಾಗುವುದು'

ಈ ವಿಷಯಗಳ ಮೇಲೆ ಮತ್ತು ಅವುಗಳನ್ನು ಜಾರಿ ಮಾಡುವ ವ್ಯವಸ್ಥೆಗಳ ಬಗ್ಗೆ ಒಪ್ಪಂದಕ್ಕೆ ಬಂದ ಮೇಲೆ ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಅಧ್ಯಕ್ಷ ಆಮ್ರ ರಾಮ್ ಅವರು ಮಹಾಪಡಾವ್ ಚಳುವಳಿಯನ್ನು ಹಿಂತೆಗೆದುಕೊಳ್ಳುವ ಮತ್ತು ಕಳೆದ ಮೂರುದಿನಗಳಿಂದ ಮುಚ್ಚಿದ್ದ ರಸ್ತೆಗಳನ್ನು ತೆರೆಯುವ ಪ್ರಕಟಣೆಯನ್ನು ಮಾಡಿದರು. ರಾಜ್ಯಾದ್ಯಂತ ರೈತರು ಈ ವಿಜಯವನ್ನು ಘೋಷಣೆಗಳು, ಹಾಡುಗಳು, ಕುಣಿತಗಳ ಮೂಲಕ ಆಚರಿಸಿದ್ದಾರೆ.

ಇದೊಂದು ಹೆಮ್ಮೆಯ ವಿಜಯ, ಈ ಚಾರಿತ್ರಿಕ ಹೋರಾಟದಲ್ಲಿ ದೃಢ ನಿರ್ಧಾರದಿಂದ ಭಾಗವಹಿಸಿರುವ ಧೀರ ರೈತ ಕಾರ್ಯಕರ್ತರು ಮತ್ತು ಎಲ್ಲ ಜನವಿಭಾಗಗಳ ಜನರನ್ನು ಎಐಕೆಎಸ್ ಅಭಿನಂದಿಸಿದೆ.

ಈ ಸ್ಫೂರ್ತಿದಾಯಕ ವಿಜಯ ದೇಶಾದ್ಯಂತ ಇಂತಹ ಹೋರಾಟಗಳಿಗೆ ಸ್ಫೂರ್ತಿ ತುಂಬುತ್ತದೆ, ಸಂವೇದನಾಶೂನ್ಯ ಕೇಂದ್ರ ಮತ್ತು ರಾಜ್ಯ ಸರಕಾರಗಳಿಂದಾಗಿ, ತೀವ್ರ ಕರ್ಷಕ ಬಿಕ್ಕಟ್ಟಿನಿಂದ ಅವರ್ಣನೀಯ ಆರ್ಥಿಕ ಬಿಕ್ಕಟ್ಟು ಮತ್ತು ಸಂಕಟಗಳನ್ನು ಅನುಭವಿಸುತ್ತಿರುವ ರೈತಾಪಿ ಜನಗಳಲ್ಲಿ ಇದು ಆತ್ಮವಿಶ್ವಾಸವನ್ನು ತುಂಬುತ್ತದೆ ಎಂದು ಹೇಳಿರುವ ಎಐಕೆಎಸ್ ರೈತರ ಚಳುವಳಿಯ ಬೆಂಬಲಕ್ಕೆ ನಿಂತ ರಾಜಸ್ತಾನದ ಕಾರ್ಮಿಕರು, ವ್ಯಾಪಾರಿಗಳು, ವಿದ್ಯಾರ್ಥಿಗಳು ಮತ್ತು ಮಹಿಳೆಯರಿಗೆ ಕೃತಜ್ಞತೆ ಸಲ್ಲಿಸಿದೆ.

ಕಿವಿಗೆ ಎಣ್ಣೆ ಹಾಕಿಕೊಂಡು, ಕಣ್ಣಿಗೆ ಪಟ್ಟಿ ಕಟ್ಟಿಕೊಂಡು ಕೂತಿದ್ದ ಸರಕಾರ ತಲೆಬಾಗುವಂತೆ ಮಾಡಿದ ರೈತರ

3 ತಿಂಗಳ ಹೋರಾಟ, 13 ದಿನಗಳ 'ಮಹಾಪಡಾವ್' 3 ದಿನಗಳ 'ಚಕ್ಕಾಜಾಮ್'

ಇದು 13 ದಿನಗಳ ಮಹಾಪಡಾವ್ ಮತ್ತು ಮೂರು ದಿನಗಳ 'ಚಕ್ಕಾಜಾಮ್'ನ್ನು ಹಿಂತೆಗೆದುಕೊಳ್ಳುವ ಪ್ರಕಟಣೆ ಮಾಡುತ್ತ ಎಐಕೆಎಸ್ ಅಧ್ಯಕ್ಷ ಮತ್ತು ಈ ಹೋರಾಟದ ಮುಂದಾಳು ಆಮ್ರ ರಾಮ್ ಅವರು ವರ್ಣಿಸಿದ ಪರಿ.

'ರಾಷ್ಟ್ರೀಯ' ಎಂದುಕೊಳ್ಳುವ ಮಾಧ್ಯಮಗಳು ಈ ಹೋರಾಟವನ್ನು ನಿರ್ಲಕ್ಷಿಸಲು ಪ್ರಯತ್ನಿಸಿದರೂ ರಾಜಸ್ತಾನದ ಮಾಧ್ಯಮಗಳಿಗೆ ಹಾಗೆ ಮಾಡುವುದು ಸಾಧ್ಯವಾಗಲಿಲ್ಲ. ರಾಜಸ್ತಾನ, ಅದರಲ್ಲೂ ಈ ಹೋರಾಟದ ಕೇಂದ್ರವಾಗಿದ್ದ ಸಿಕಾರ್ ಹಲವು ಸಾಮೂಹಿಕ ಆಂದೋಲನಗಳನ್ನು ಕಂಡಿದೆ. ಆದರೆ ಈ ಬಾರಿಯ ರೈತ ಹೋರಾಟದಂತದ್ದನ್ನು ಎಂದೂ ಕಂಡಿಲ್ಲ ಎಂದೊಬ್ಬ ಪತ್ರಕರ್ತರು ಹೇಳಿದ್ದಾರೆ. ಮಧ್ಯಮ ವರ್ಗದ ಜನರು ಯಾವುದೇ ಸಾಮೂಹಿಕ ಚಳುವಳಿ ನಡೆದಾಗ ಗೊಣಗಾಟ ಆರಂಭಿಸುತ್ತದೆ. ಆದರೆ 11 ಬೇಡಿಕೆಗಳನ್ನು ಮುಂದಿಟ್ಟು ರಾಜಸ್ತಾನದ ರೈತರು ಆರಂಭಿಸಿದ ರೈತರ ಈ ಬಾರಿಯ ಚಳುವಳಿಯಲ್ಲಿ ಹಾಗಾಗಲಿಲ್ಲ. ಅದು ಈ ಪ್ರದೇಶದ ಜನರಿಂದ ಮತ್ತು ಮಾಧ್ಯಮಗಳಿಂದಲೂ ಅಪಾರ ಬೆಂಬಲವನ್ನು ಗಳಿಸಿತು.

ಇದು ಕೇವಲ ರೈತರ ಹೋರಾಟವಾಗಿ ಉಳಿಯಲಿಲ್ಲ, ರೈತರಿಗಾಗಿ ಜನಾಂದೋಲನವಾಯಿತು ಎಂಬ ಆಮ್ರರಾಮ್ ಅವರ ಮಾತು ಅತಿಶಯೋಕ್ತಿಯೇನಲ್ಲ ಎಂದು ಇಲ್ಲಿನ ಮಾಧ್ಯಮಗಳವರೂ ಒಪ್ಪಿಕೊಂಡಿದ್ದಾರೆ.

ಈ ಚಳುವಳಿಯ ಕೇಂದ್ರವಾದ ಸಿಕಾರ್‌ನಲ್ಲಿ ಈ ಸ್ಫೂರ್ತಿದಾಯಕ, ಶಾಂತಿಯುತ ಚಳುವಳಿಯ ಒಂದು ಚಿತ್ರ ಇಲ್ಲಿದೆ:

ಪುಟ 14 ನೋಡಿ

ಜೆಎನ್‌ಯು ವಿದ್ಯಾರ್ಥಿ ಸಂಘದ ಚುನಾವಣೆಯಲ್ಲಿ ಎಡ ಪಂಥೀಯರ ಜಯಭೇರಿ

ಕಳೆದ ಎರಡು ವರ್ಷಗಳಿಂದ ಸಂಘ ಪರಿವಾರದ ನೇರ ದಾಳಿಗೆ ಒಳಗಾಗಿರುವ ದಿಲ್ಲಿಯ ಜವಹರಲಾಲ್ ನೆಹರೂ ವಿಶ್ವವಿದ್ಯಾಲಯ ವಿದ್ಯಾರ್ಥಿ ಸಂಘದ ಚುನಾವಣೆಗಳಲ್ಲಿ ಎಐಎಸ್‌ಎ, ಎಸ್‌ಎಫ್‌ಐ ಮತ್ತು ಡಿಎಸ್‌ಎಫ್‌ನ ಯುನೈಟೆಡ್ ಲೆಫ್ಟ್(ಸಂಯುಕ್ತ ಎಡಪಂಥ) ರಂಗ ನಾಲ್ಕೂ ಪದಾಧಿಕಾರಿಗಳ ಸ್ಥಾನಗಳಲ್ಲಿ ಜಯಗಳಿಸಿದೆ. ಹಾಗೂ ವಿದ್ಯಾರ್ಥಿ ಸಂಘದ ಕೌನ್ಸಿಲ್‌ನಲ್ಲಿ ಬಹುಮತವನ್ನು ಗಳಿಸಿದೆ.

ಎಐಎಸ್‌ಎ ನ ಗೀತಾಕುಮಾರಿ 464 ಮತಗಳಿಂದ ಅಧ್ಯಕ್ಷ ಸ್ಥಾನವನ್ನು, ಸಿಮೋನ್ ಝೊಯಾ ಖಾನ್ ಉಪಾಧ್ಯಕ್ಷ ಸ್ಥಾನವನ್ನು 848 ಮತಗಳಿಂದ, ಎಸ್‌ಎಫ್‌ಐನ ದುಗ್ಗಿರಾಲ ಶ್ರೀಕೃಷ್ಣ 1107 ಮತಗಳಿಂದ ಪ್ರಧಾನ ಕಾರ್ಯದರ್ಶಿ ಸ್ಥಾನವನ್ನು ಮತ್ತು ಡಿಎಸ್‌ಎಫ್‌ನ ಶುಭಾಂಶು ಸಿಂಗ್ ಜಂಟಿ ಕಾರ್ಯದರ್ಶಿ ಸ್ಥಾನವನ್ನು ಸಿಂಗ್ 835 ಮತಗಳಿಂದ ಗೆದ್ದುಕೊಂಡಿದ್ದಾರೆ. ಎಬಿವಿಪಿ ಎಲ್ಲ ನಾಲ್ಕು ಸ್ಥಾನಗಳಲ್ಲಿ ಎರಡನೇ ಸ್ಥಾನ ಪಡೆದಿದೆ. ಕಳೆದ ವರ್ಷ ಎರಡನೇ ಸ್ಥಾನದಲ್ಲಿದ್ದ ಬಿರ್ಸ ಅಂಬೇಡ್ಕರ್ ಫುಲೆ ವಿದ್ಯಾರ್ಥಿ ಸಂಘ ಈ ಬಾರಿ ಮೂರನೇ ಸ್ಥಾನಕ್ಕೆ ಇಳಿದಿದೆ. ಎನ್‌ಎಸ್‌ಯುಐನ ಎಲ್ಲ ಅಭ್ಯರ್ಥಿಗಳು (ನೋಟ- ಅಂದರೆ ಇವರಲ್ಲಿ ಯಾರೂ ಬೇಡ ಎಂಬ) ಮತಗಳಿಗಿಂತ ಕಡಿಮೆ ಪಡೆದಿದ್ದಾರೆ.



ವಿಜ್ಞಾನ ವಿಭಾಗಗಳಲ್ಲಿ ಸ್ವತಂತ್ರ ಅಭ್ಯರ್ಥಿಗಳು ಕೌನ್ಸಿಲರ್‌ಗಳಾಗಿ ಆಯ್ಕೆಯಾಗಿದ್ದಾರೆ. ಆದರೆ ದೊಡ್ಡ ವಿಭಾಗಗಳಾದ ಅಂತರ‍್ರಾಷ್ಟ್ರೀಯ ಅಧ್ಯಯನಗಳು, ಸಾಮಾಜಿಕ ವಿಜ್ಞಾನಗಳ ಅಧ್ಯಯನಗಳಲ್ಲಿ ಎಡರಂಗ ಭಾರಿ ಗೆಲುವು ಪಡೆದಿದೆ.

ಎಬಿವಿಪಿ ಒಮ್ಮೆ ಮಾತ್ರ, 1996-97ರಲ್ಲಿ ಬಹುಮತ ಪಡೆದಿತ್ತು, ಉಪಾಧ್ಯಕ್ಷ, ಪ್ರಧಾನ ಕಾರ್ಯದರ್ಶಿ ಮತ್ತು ಜಂಟಿ ಕಾರ್ಯದರ್ಶಿ ಸ್ಥಾನ ದೊರೆತಿತ್ತು. 2000-01ರಲ್ಲಿ ಕೇವಲ ಒಂದು ಮತದಿಂದ ಅಧ್ಯಕ್ಷ ಸ್ಥಾನವನ್ನು ಪಡೆದಿತ್ತು. ಆಗ ವಾಜಪೆಯಿ ನೇತೃತ್ವದ ಎನ್‌ಡಿಎ ಸರಕಾರ ಇತ್ತು. ಆದರೆ ಮರುವರ್ಷವೇ ಎಸ್‌ಎಫ್‌ಐ-ಎಐಎಸ್‌ಎಫ್ ಮೈತ್ರಿಕೂಟದ ಎದುರು ಭಾರೀ ಪರಾಭವವನ್ನು ಎದುರಿಸಿತು. ನಂತರ 2015-16ರಲ್ಲಷ್ಟೇ ಒಂದು ಪದಾಧಿಕಾರಿ ಸ್ಥಾನವನ್ನು ಪಡೆಯಲು ಅದಕ್ಕೆ ಸಾಧ್ಯವಾಗಿತ್ತು. ಆಗ ಅಧ್ಯಕ್ಷರಾಗಿ ಚುನಾಯಿತರಾದ ಎಐಎಸ್‌ಎಫ್‌ನ ಕನ್ಹೈಯ ಕುಮಾರ್ ಮೇಲೆ ರಾಜದ್ರೋಹದ ಆಪಾದನೆ ಹಾಕಿಸಿದ ನಂತರ

ಪುಟ 7 ನೋಡಿ

ಸಂಪಾದಕೀಯ

ಈ ಬಾರಿ ನುಡಿದಂತೆ ನಡೆಯುವಿರಾ?

ಈ ವಾರ ಬಹುಶಃ ಚಾರಿತ್ರಿಕ ಚಳುವಳಿಗಳ, ಪ್ರತಿರೋಧಗಳ ಮತ್ತು ವಿಜಯಿ ಚಳುವಳಿಗಳ ವಾರ. ಕರ್ನಾಟಕದಲ್ಲಿ ಅದೂ ಬೆಂಗಳೂರಲ್ಲಿ ಎರಡು ಚಾರಿತ್ರಿಕ ಹೋರಾಟಗಳು ಅಭೂತಪೂರ್ವ ರೀತಿಯಲ್ಲಿ ನಡೆದಿವೆ ಮತ್ತು ಒಂದು ಹಂತದ ಯಶಸ್ಸು ಕಂಡಿವೆ. ಸೆಪ್ಟೆಂಬರ್ 12ರಂದು "ಗೌರಿ ಲಂಕೇಶ್ ಹತ್ಯಾ ವಿರೋಧಿ ವೇದಿಕೆ" ಏರ್ಪಡಿಸಿದ "ಖಂಡನೆ-ಪ್ರತಿರೋಧ ಸಮಾವೇಶ" ಒಂದು. ಸೆಪ್ಟೆಂಬರ್ 14 ರಂದು ಕರ್ನಾಟಕ ಸಿಐಟಿಯು ರಾಜ್ಯ ಘಟಕ ಸಂಘಟಿಸಿದ್ದ ಕಾರ್ಮಿಕರ ಮಹಾನಡೆ ಇನ್ನೊಂದು. ಕಾಕತಾಳೀಯವೋ ಎಂಬಂತೆ ರಾಜಸ್ತಾನದಲ್ಲಿ ಸಾಲ ಮನ್ನಾ, ಬೆಂಬಲ ಬೆಲೆಗೆ ಸಂಬಂಧ ಪಟ್ಟ ಪ್ರಮುಖ ಹಕ್ಕೊತ್ತಾಯಗಳನ್ನು ಬಿಜೆಪಿಯ ಕುಖ್ಯಾತ ದಮನಕಾರಿ ಸರಕಾರ ಒಪ್ಪಿಕೊಳ್ಳುವಂತೆ ಮಾಡುವಲ್ಲಿ ಹಲವು ವಿಶಿಷ್ಟತೆಗಳಿದ್ದ 13ದಿನಗಳ ಸತತ ಕಿಸಾನ್ ಚಳುವಳಿ ಯಶಸ್ವಿಯಾಗಿದೆ. ಜೆ.ಎನ್.ಯು.ನಲ್ಲಿ ಮತ್ತೆ ಐಕ್ಯ ಎಡ ಕೂಟ ಎಬಿವಿಪಿಯನ್ನು ಪರಾಭವಗೊಳಿಸಿದೆ. ಇನ್ನೂ ಆಶ್ಚರ್ಯಕರ ರೀತಿಯಲ್ಲಿ ಎಬಿವಿಪಿ ತನ್ನ ಭದ್ರಕೋಟೆಯಾದ ದೆಹಲಿ ವಿವಿಯಲ್ಲಿ ಪ್ರಮುಖ ಎರಡು ಪದಾಧಿಕಾರಿ ಸ್ಥಾನಗಳಲ್ಲಿ ಸೋತಿದೆ.

ಬೆಂಗಳೂರಿನಲ್ಲಿ ಸೆಪ್ಟೆಂಬರ್ 12ರಂದು ಕೆಲವೇ ದಿನಗಳ ತಯಾರಿಯಲ್ಲಿ ಏರ್ಪಡಿಸಿದ "ಖಂಡನೆ-ಪ್ರತಿರೋಧ ಸಮಾವೇಶ"ಕ್ಕೆ ಸಿಕ್ಕಿದ ಸ್ಪಂದನ ಅಭೂತಪೂರ್ವ. ಇಷ್ಟು ಕಡಿಮೆ ಸಮಯದಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಜನ ರಾಜ್ಯದ ವಿವಿಧ ಭಾಗಗಳಿಂದ ಬಂದು ಭಾಗವಹಿಸಿದ್ದು ಅತ್ಯಂತ ಸ್ಫೂರ್ತಿದಾಯಕ. ಇದು ಪತ್ರಕರ್ತರ, ಸಾಹಿತಿ-ಕಲಾವಿದರ, ವಿದ್ಯಾರ್ಥಿಗಳ, ಸಾಮಾಜಿಕ ಹೋರಾಟಗಾರರ, ಚಿಂತಕರ, ಪ್ರಗತಿಪರರ, ಸಾಮಾಜಿಕ ಚಳುವಳಿಗಳ, ಎಡಪಂಥೀಯ ವ್ಯಕ್ತಿಗಳ ಸಂಘಟನೆಗಳ ಪಕ್ಷಗಳ ಮಹಾಸಂಗಮವಾದ್ದರಿಂದ ಮಾತ್ರ ಸಾಧ್ಯವಾಗಿದೆ. ಒಂದೇ ಶಬ್ದದಲ್ಲಿ ಹೇಳುವುದಾದರೆ ಎಲ್ಲಾ ಫ್ಯಾಸಿಸ್ಟ್-ವಿರೋಧಿ ವ್ಯಕ್ತಿಗಳು ಶಕ್ತಿಗಳು ಸಂಘಟನೆಗಳು ತೋರಿದ ಐಕ್ಯತೆ ಅಭೂತಪೂರ್ವ. ಇದು ರಾಜ್ಯದಲ್ಲಿ ಎಲ್ಲಾ ಫ್ಯಾಸಿಸ್ಟ್-ವಿರೋಧಿ ವ್ಯಕ್ತಿಗಳು ಶಕ್ತಿಗಳು ಮುಂದೆ ಹಲವು ಸಂಬಂಧಿತ ವಿಷಯಗಳಲ್ಲಿ ಐಕ್ಯ ಕಾರ್ಯಾಚರಣೆಯಲ್ಲಿ ತೊಡಗುವ ಸಾಧ್ಯತೆಗಳಿಗೆ ತೆರೆದುಕೊಂಡಿದೆ. ಇದು ಮುಂದುವರೆಯಬೇಕು. ಇತ್ತೀಚೆಗೆ ನಡೆದ ಸೌಹಾರ್ದ ಕರ್ನಾಟಕ ಸಮಾವೇಶ ನೀಡಿದ ಜನವರಿ 30ರ ಮಾನವ ಸರಪಣಿಯನ್ನು ಯಶಸ್ವಿ ಮಾಡುವತ್ತ ಈ ಎಲ್ಲಾ ಶಕ್ತಿಗಳು ಕೈಜೋಡಿಸಬೇಕು. ಮಾತ್ರವಲ್ಲ ದೆಹಲಿಯಲ್ಲಿ ಮತ್ತು ಎಲ್ಲಾ ರಾಜ್ಯಗಳ ರಾಜಧಾನಿಗಳಲ್ಲಿ ಇಂತಹ ಸಮಾವೇಶಗಳನ್ನು ನಡೆಸಲು ನಿರ್ಧರಿಸಲಾಗಿದ್ದು, ಇದರಿಂದ ಬಹುಶಃ ಅಖಿಲ ಭಾರತ ಫ್ಯಾಸಿಸ್ಟ್-ವಿರೋಧಿ ವೇದಿಕೆಯ ರಚನೆಗೂ ನಾಂದಿ ಹಾಡಿದಂತಾಗಿದೆ. ಇದೊಂದು ಅತ್ಯಂತ ಚಾರಿತ್ರಿಕ ಸಕಾರಾತ್ಮಕ ಬೆಳವಣಿಗೆ.



ಇಂತಹ ಹೊಮ್ಮುತ್ತಿರುವ ಫ್ಯಾಸಿಸ್ಟ್-ವಿರೋಧಿ ವೇದಿಕೆಯಲ್ಲಿ ಕಾಂಗ್ರೆಸ್ ಎಷ್ಟರ ಮಟ್ಟಿಗೆ ತೊಡಗಿಸಿಕೊಳ್ಳುತ್ತದೆ ಎಂಬುದು ಪ್ರಮುಖ ಪ್ರಶ್ನೆಯಾಗಲಿದೆ. ಹಿಂದೆ ಮಹಾರಾಷ್ಟ್ರದಲ್ಲಿ ಮತ್ತು ಆ ಮೇಲೆ ಕರ್ನಾಟಕದಲ್ಲಿ ಕಲಬುರ್ಗಿಯವರ ಅಮಾನುಷ ಹತ್ಯೆಯಾದಾಗ ಕಾಂಗ್ರೆಸ್ ಸರಕಾರ ಇತ್ತು. ಮುತುವರ್ಜಿಯಿಂದ ಈ ಹತ್ಯೆಗಳ ತನಿಖೆ ನಡೆಸಿ ಹಂತಕರ ಮತ್ತು ಅವರ ಪ್ರಾಯೋಜಕರನ್ನು ಪತ್ತೆ ಹೆಚ್ಚುವುದರಲ್ಲಿ ತೋರಿದ ವೈಫಲ್ಯವೇ ಗೌರಿ ಲಂಕೇಶ್ ಹತ್ಯೆಗೆ ಪ್ರಬಲ ಕಾರಣಗಳಲ್ಲಿ ಒಂದು. ಇದು ಬರಿಯ ನಿರ್ಲಕ್ಷ್ಯ ಅಥವಾ ಅದಕ್ಷತೆಯಲ್ಲ. ರಾಜಕೀಯ ಇಚ್ಛಾಶಕ್ತಿಯ ತೀವ್ರ ಅಭಾವ ಅಥವಾ ಒಂದು ರೀತಿಯ ಸಾಫ್ಟ್ ಹಿಂದುತ್ವದ ಉದ್ದೇಶಿತ ರಾಜಕೀಯ ಧೋರಣೆಯೂ ಇರಬಹುದು. ಗೌರಿ ಲಂಕೇಶ್ ಹಂತಕರ ಮತ್ತು ಅವರ ಪ್ರಾಯೋಜಕರನ್ನು ಶೀಘ್ರದಲ್ಲಿ ಗುರುತಿಸಿ ಆ ಮೂಲಕ ಉಗ್ರ ಬಲಪಂಥೀಯ ಶಕ್ತಿಗಳನ್ನು ಮಟ್ಟ ಹಾಕುವುದರಲ್ಲಿ ಕಾಂಗ್ರೆಸ್ ಸರಕಾರ ಎಷ್ಟು ಗಂಭೀರ ಪ್ರಯತ್ನ ನಡೆಸುತ್ತದೆ? ಕರಾವಳಿ ಮತ್ತು ರಾಜ್ಯದ ಇತರೆಡೆ ಕೋಮು ದಳ್ಳುರಿ ಹರಡುವ ಸಂಘ ಪರಿವಾರದ ಹುನ್ನಾರವನ್ನು ಎಷ್ಟರ ಮಟ್ಟಿಗೆ ವಿಫಲಗೊಳಿಸುತ್ತದೆ? - ಎಂಬುದರ ಮೇಲೆ ಕಾಂಗ್ರೆಸ್ ಒಂದು ನಂಬಲರ್ಹ ಫ್ಯಾಸಿಸ್ಟ್-ವಿರೋಧಿ ಶಕ್ತಿಯಾ ಎಂಬುದನ್ನು ನಿರ್ಣಯಿಸಬೇಕಾಗುತ್ತದೆ. ಕಲಬುರ್ಗಿ ಅವರ ಹಂತಕರನ್ನು ಶೀಘ್ರ ಪತ್ತೆ ಹಚ್ಚುತ್ತೇವೆ, ಎಂದು ಆಶ್ವಾಸನೆ ಕೊಟ್ಟ ಸಿದ್ಧರಾಮಯ್ಯ ಸರಕಾರ "ನುಡಿದಂತೆ ನಡೆ"ದಿಲ್ಲ. ಸರಕಾರದ ಪರವಾಗಿ ಗೌರಿ ಹಂತಕರನ್ನು ಮತ್ತು ಪ್ರಾಯೋಜಕರನ್ನು ಶೀಘ್ರದಲ್ಲಿ ಪತ್ತೆ ಹಚ್ಚಲಾಗುವುದು ಎಂದು ಕಾಂಗ್ರೆಸ್ ರಾಜ್ಯ ಸರಕಾರದ ಪರವಾಗಿ ಸಮಾವೇಶದಲ್ಲಿ ಇನ್ನೊಮ್ಮೆ ಆಶ್ವಾಸನೆ ಕೊಡಲಾಗಿದೆ. "ಈ ಬಾರಿ ನುಡಿದಂತೆ ನಡೆಯುವಿರಾ?" ಎಂದು ಎಲ್ಲಾ ಫ್ಯಾಸಿಸ್ಟ್-ವಿರೋಧಿ ಶಕ್ತಿಗಳು ಸಿದ್ಧರಾಮಯ್ಯ ಸರಕಾರವನ್ನು ಕೇಳಬೇಕಾಗಿದೆ.

ಸೆಪ್ಟೆಂಬರ್ 14ರಂದು ಕರ್ನಾಟಕ ಸಿಐಟಿಯು ರಾಜ್ಯ ಘಟಕ ಸಂಘಟಿಸಿದ್ದ ಕಾರ್ಮಿಕರ ಮಹಾನಡೆ ಇನ್ನೊಂದು ಚಾರಿತ್ರಿಕ ಚಳುವಳಿ. ಯಾವುದೇ ಒಂದು ವಿಭಾಗದ ತಕ್ಷಣದ ಆರ್ಥಿಕ ಬೇಡಿಕೆಗಳಿಗೆ ಅಲ್ಲದೆ ಕಾರ್ಮಿಕ ವರ್ಗದ ಸಾಮಾನ್ಯ ಹಕ್ಕೊತ್ತಾಯಗಳಿಗೆ ಕಾರ್ಮಿಕರನ್ನು ಸಂಘಟಿಸುವುದು ಕಷ್ಟದ ಕೆಲಸವೇ. ಕನಿಷ್ಠ ವೇತನ, ಗುತ್ತಿಗೆ ಪದ್ಧತಿಯ ರದ್ದತಿ, ಕಾರ್ಮಿಕ-ಪರ ಕಾನೂನುಗಳು, ಶಾಶ್ವತ ತ್ರಿಪಕ್ಷೀಯ ವ್ಯವಸ್ಥೆ - ಇಂತಹ ಹಕ್ಕೊತ್ತಾಯಗಳು. ಇಂತಹ ಹಕ್ಕೊತ್ತಾಯಗಳಿಗೆ ಸಿಐಟಿಯು (ಅಥವಾ ಯಾವುದೇ ಕಾರ್ಮಿಕ ಸಂಘಟನೆ) ರಾಜ್ಯದಲ್ಲಿ ಈ ವರೆಗೆ ಸಂಘಟಿಸಿದ ಹೋರಾಟಗಳಲ್ಲಿ ಅತ್ಯಂತ ದೊಡ್ಡ ಹೋರಾಟವಿದು. ಈಗ ಕಾರ್ಮಿಕರ ಪರವಾಗಿ ಸಿಐಟಿಯು ಇಟ್ಟಿರುವ ನಿರ್ದಿಷ್ಟ ಬೇಡಿಕೆಗಳಿಗೆ ಹಲವು ಹೋರಾಟಗಳು ಹಿಂದೆ ನಡೆದಿವೆ. ಇದೇ ವರ್ಷದ ಜನವರಿ ಕೊನೆಯಲ್ಲಿ ನಡೆದ ಅಹೋರಾತ್ರಿ ಧರಣಿಯ ನಂತರವೂ ಹಲವು ಆಶ್ವಾಸನೆಗಳನ್ನು ಸರಕಾರದ ಪರವಾಗಿ ಕೊಡಲಾಗಿತ್ತು. ಒಂದನ್ನೂ ಸರಕಾರ ಈಡೇರಿಸಿಲ್ಲ. ಮಾತ್ರವಲ್ಲ, 40 ಸಾವಿರ ಕಾರ್ಮಿಕರ ಮಹಾನಡೆಯ ನಂತರವೂ ಎರಡೂ ಪ್ರಮುಖ ಹಕ್ಕೊತ್ತಾಯಗಳನ್ನು ಮಾತ್ರ ಈಡೇರಿಸಲಾಗಿದೆ. ಶಾಸನಗಳನ್ನು ತರುವಲ್ಲಿ ಅದಕ್ಕೆ ಮಾಲಕರ ಕೇಂದ್ರ ಸರಕಾರ-ಗವರ್ನರ್ ಗಳ ಪ್ರತಿರೋಧ ನಿವಾರಿಸುವುದರಲ್ಲೂ ರಾಜ್ಯ ಸರಕಾರ ರಾಜಕೀಯ ಇಚ್ಛಾಶಕ್ತಿ ತೋರಿಸಿಲ್ಲ. ಮಾತ್ರವಲ್ಲ ಮಾಲಕರ ಪರ ಸ್ಪಷ್ಟ ಒಲವನ್ನೂ ಪ್ರದರ್ಶಿಸಿದೆ. ಕಾರ್ಮಿಕ-ಪರ ಶಾಸನಗಳ ಜಾರಿ ಮತ್ತು ಇತರ ಹಕ್ಕೊತ್ತಾಯಗಳ ಬಗ್ಗೆ ಇನ್ನೊಮ್ಮೆ ಆಶ್ವಾಸನೆ ಕೊಡಲಾಗಿದೆ. "ಈ ಬಾರಿ ನುಡಿದಂತೆ ನಡೆಯುವಿರಾ?" ಎಂದು ಮಹಾನಡೆಯಲ್ಲಿ ಭಾಗವಹಿಸಿದ 40 ಸಾವಿರ ಕಾರ್ಮಿಕರು ಮತ್ತು ಅವರು ಪ್ರತಿನಿಧಿಸುವ ಮೂರು ಕೋಟಿ ಕಾರ್ಮಿಕರು ಸಿದ್ಧರಾಮಯ್ಯ ಸರಕಾರವನ್ನು ಕೇಳಬೇಕಾಗಿದೆ.

ದುಡಿಯುವ ಜನರ ಹಕ್ಕುಗಳನ್ನು ದಮನ ಮಾಡುವುದಕ್ಕಾಗಿ ಮತ್ತು ಅದಕ್ಕೆ ಅವರು ಸಂಘಟಿತರಾಗಿ ಐಕ್ಯ ಹೋರಾಟ ಮಾಡದಂತೆ ತಡೆಯಲೆಂದೇ ಕೋಮುವಾದಿ ತಂತ್ರಗಳನ್ನು ಆಳುವ ವರ್ಗಗಳು ಹೆಣೆಯುತ್ತವೆ. ಆದ್ದರಿಂದ ಫ್ಯಾಸಿಸ್ಟ್ ಅಂಚಿಗೆ ಬಂದಿರುವ ಕೋಮುವಾದದ ವಿರುದ್ಧ ಮತ್ತು ದುಡಿಯುವ ಜನರ ಆರ್ಥಿಕ ಹೋರಾಟ ಎರಡನ್ನೂ ಬೆಸೆಯುವುದು ಅತ್ಯಗತ್ಯ. ಈ ವಾರ ಬೆಂಗಳೂರಿನಲ್ಲಿ ನಡೆದ ಇವೆರಡೂ ಚಾರಿತ್ರಿಕ ಹೋರಾಟಗಳು ಈ ನಿಟ್ಟಿನಲ್ಲಿ ಆಶಾದಾಯಕ ಮತ್ತು ಸ್ಫೂರ್ತಿದಾಯಕ.

ದುಡಿಯುವ ಜನರ ಆರ್ಥಿಕ ಹೋರಾಟಗಳಲ್ಲೂ ಆಳುವ ವರ್ಗ-ಪರ ನೀತಿಗಳ ವಿರುದ್ಧವೂ ದುಡಿಯುವ ಜನರ ಸಂಘಟನೆಗಳ ವಿಶಾಲ ಐಕ್ಯತೆ ಅತ್ಯಗತ್ಯ. ಇಂತಹ ಐಕ್ಯತೆಯತ್ತವೂ ಪ್ರಯತ್ನಗಳು ನಡೆಯುತ್ತಿದ್ದು ಸೆಪ್ಟೆಂಬರ್ 18ರಂದು ದೆಹಲಿಯಲ್ಲಿ ನಡೆಯಲಿರುವ ಎಲ್ಲಾ ಸಾಮೂಹಿಕ ಸಂಘಟನೆಗಳ ಸಮಾವೇಶ ಹಾಗೂ ಈ ವಾರದ ಹಲವು ಪ್ರಜಾತಾಂತ್ರಿಕ ಶಕ್ತಿಗಳ ಹೋರಾಟಗಳ ವಿಜಯಗಳೂ ಈ ನಿಟ್ಟಿನಲ್ಲಿ ಆಶಾದಾಯಕ ಮತ್ತು ಸ್ಫೂರ್ತಿದಾಯಕ.

ಟ್ರೋಲ್ ಸೇನಾನಿ ವಿಶ್ವೇಶ್ವರ ಭಟ್ಟ ಮತ್ತು ಸುರೇಶ್ ಕುಮಾರ್

(ಕೃಪೆ : ಮಾಧ್ಯಮನೆಟ್)

ಗೌರಿ ಲಂಕೇಶ್ ಹತ್ಯೆ ಹಿನ್ನೆಲೆಯಲ್ಲಿ ನಡೆದ ಪ್ರತಿರೋಧ ಸಮಾವೇಶಕ್ಕೆ ನೆರೆದ ಜನಸಾಗರ ಬಲಪಂಥೀಯ ಸ್ಯಾಡಿಸ್ಟರಿಗೆ ನುಂಗಲಾಗದ ತುತ್ತಾಗಿದೆ. ಹಾಗೆಂದೇ ಎರಡು ದಿನಗಳಿಂದ ಅನಗತ್ಯ ಟ್ರೋಲ್'ಗಳು ಹರಿದಾಡುತ್ತಿವೆ.

ಪತ್ರಿಕೆಯೊಂದರ ಸಂಪಾದಕ ಎನ್ನಿಸಿಕೊಂಡಾತನೇ ಖಾಲಿ ಚೇರ್'ಗಳ ಮಧ್ಯೆ ಕುಳಿತ ವೃದ್ಧೆಯೊಬ್ಬರ ಫೋಟೋ ಹಾಕಿ ವಿಕೃತಿ ಮೆರೆದರೆಂದರೆ ಬಾಕಿ ಹೇಳಬೇಕೇ?

ಅನಕ್ಷರಸ್ಥೆ (ಅಥವಾ ಇಂಗ್ಲಿಶ್ ಬಾರದ) ಮಹಿಳೆಯೊಬ್ಬರು ಪ್ಲೆಕಾರ್ಡ್ ಉಲ್ಟ ಹಿಡಿಯೋದು ಏನನ್ನು ಸೂಚಿಸುತ್ತದೆ ಎಂದು ಯೋಚಿಸುವಷ್ಟು ಸಂವೇದನಾಶೀಲತೆಯೂ ಈ ಬಿಜೆಪಿ ಮನುಷ್ಯನಿಗೆ ಇಲ್ಲವೇ? ಅನ್ನುವ ಪ್ರಶ್ನೆ ಎದ್ದಿತು. ಕುಪಿತ 'ಗೌರಿಬಳಗ' ಸುರೇಶ್ ಕುಮಾರರನ್ನೇ ಈ ನಿಟ್ಟಿನಲ್ಲಿ ಟ್ರಾಲ್ ಮಾಡಿ ಸಿಟ್ಟು ಹೊರಹಾಕಿತು. ಹಲವು ಪ್ರಶ್ನೆಗಳನ್ನೆತ್ತಿ ತರಾಟೆಗೆ ತೆಗೆದುಕೊಂಡಿತು.

ಜನವಾದಿ ಸಂಘಟನೆಯ, ದಿಟ್ಟ ಹೋರಾಟಗಾರ್ತಿ ಕೆ.ನೀಲಾ ಕೂಡಾ ಸುರೇಶ್ ಕುಮಾರರ ಈ ವಿಕೃತಿಗೆ ಸರಿಯಾದ ಇದಿರೇಟು ಕೊಟ್ಟಿದ್ದು, ಅದರ ಆಯ್ದ ಭಾಗಗಳು ಇಲ್ಲಿದೆ:

ಇವರು ಹೋರಾಟಗಾರ್ತಿಯರು..

.. ಜನವಾದಿ ಮಹಿಳೆಯರು.. ..

ಸುರೇಶ್ ಅವರೇ ಈ ತಾಯಂದಿರರ ಪರಿಚಯ ನಿಮಗೆ ಕೊಡಲೇ? ಹಾಗೆ ನೋಡಿದರೆ ಇವರಿಗಿರುವಷ್ಟು ವಿವೇಕ ಸಾಮಾಜಿಕ ಪ್ರಜ್ಞೆ ಖಂಡಿತ ನಿಮಗಿರಲಿಕ್ಕೆ ಸಾಧ್ಯವಿಲ್ಲ. ಇವರು ನನ್ನ ಜಿಲ್ಲೆಯಾದ



ಕಲಬುರಗಿಯವರು. ಕಳೆದ ಹದಿನೆಂಟು ವರ್ಷಗಳಿಂದ ಇವರು ಜನವಾದಿ ಮಹಿಳಾ ಸಂಘಟನೆಯ ಸದಸ್ಯರು. ಜನವಾದಿ ಮಹಿಳಾ ಸಂಘಟನೆಯಲ್ಲಿ ನಾಲ್ಕು ಸಾಮಾನ್ಯ ನಿಯಮಗಳಿವೆ. ಅವುಗಳಲ್ಲಿ ಒಂದು 'ಅಕ್ಷರಸ್ಥರು ಮತ್ತು ಅನಕ್ಷರಸ್ಥರ ನಡುವೆ ಭೇದ ಭಾವ ಮಾಡಬಾರದು' ಎಂಬುದೂ ಇದೆ. ಇದೇ ಹೊತ್ತಿನಲ್ಲಿ ಅಕ್ಷರ ಕಲಿಕೆಗೆ ನಿರಂತರ ಶ್ರಮಿಸಲಾಗುತ್ತಿದೆ.

ಈ ತಾಯಂದಿರು ಹದಿನೆಂಟು ವರ್ಷಗಳಿಂದಲೂ ಸಂಘಟನೆಯನ್ನು ಕಟ್ಟಿಕೊಂಡು ಅಚಲವಾಗಿ ನಿಂತ ಕಾರಣಕ್ಕಾಗಿಯೇ ಈ ಬಾರಿ ನೀಲೂರು ಎಂಬ ಕೆರೆಯಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿಯ ಕಾಯ್ದೆಯಡಿಯಲ್ಲಿ ನೂರಾರು ಜನರು ಕೆಲಸ ಪಡೆಯಲು ಸಾಧ್ಯವಾಗಿದೆ. ಸುರೇಶ್ ಅವರೆ ನಿಮ್ಮದೆ ಕೇಂದ್ರ ಸರಕಾರವು ಮನರೇಗಾಕ್ಕಾಗಿ ಇಡಬೇಕಾದ ಬಜೆಟ್ಟಿನಲ್ಲಿ ಕಡಿತ ಮಾಡಿದ್ದರಿಂದ ಅನೇಕರಿಗೆ ಕೂಲಿ ಪಾವತಿಯಾಗಿಲ್ಲ, ಕೆಲಸ ಸಿಗುತ್ತಿಲ್ಲ ಎಂಬುದು ನಿಮಗೆ ತಿಳಿದಿದೆಯೇ? ಹೋಗಲಿ

ಪುಟ 10 ಕ್ಕೆ

ಜಾತಿ ವೈಷಮ್ಯ ದಲಿತರ ಬಾವಿಗೆ ವಿಷ ಚೆನ್ನೂರಲ್ಲಿ ಪ್ರತಿಭಟನಾ ಪಾದಯಾತ್ರೆ

– ಡಿಹೆಚ್‌ಎಸ್ ನಿಯೋಗ ಭೇಟಿ



ಚೆನ್ನೂರು ಗ್ರಾಮವೂ ಕಲ್ಬುರ್ಗಿ ಜಿಲ್ಲೆಯ ಜೇವರ್ಗಿ ತಾಲೂಕಿನಿಂದ ಕೇವಲ 4 ಕಿ.ಮಿ. ದೂರದಲ್ಲಿದೆ. ಈ ಊರಿನಲ್ಲಿ 500 ಕ್ಕೂ ಹೆಚ್ಚು ಮನೆಗಳಿದ್ದು, 250 ದಲಿತರ ಮನೆಗಳಿವೆ. ಇವರಲ್ಲಿ ಕೇವಲ 3 ಜನ ದಲಿತರು ಮಾತ್ರ ಪದವೀಧರರಾಗಿದ್ದಾರೆ. ಈ ಊರಿನ ದಲಿತರಿಗೆ ಉನ್ನತ ಶಿಕ್ಷಣ ಎಂಬುದು ಕಲ್ಪನೆಗೂ ಸಿಗದ್ದಾಗಿದೆ.

ದಲಿತ ಕುಟುಂಬಕ್ಕೆ ಸೇರಿದ ಜಮೀನಿನಲ್ಲಿ ನೀರಿನ ಬಾವಿಯಿದೆ. ಈ ಬಾವಿಯಲ್ಲಿನ ನೀರನ್ನು ಈ ಊರಿನ ದಲಿತರು ಕುಡಿಯಲು ಉಪಯೋಗಿಸುತ್ತಿದ್ದಾರೆ. ಈ ಜಮೀನನ್ನು ಸವರ್ಣಿಯರೊಬ್ಬರು ದಲಿತನಿಂದ ಕಸಿದುಕೊಳ್ಳಲು ಹುನ್ನಾರ ನಡೆಸಿದ್ದಾರೆ. ಈ ಕಾರಣದಿಂದ ಹಿಂದಿನಿಂದ ಈ ದಲಿತರ ಮೇಲೆ ವೈಷಮ್ಯ ಕಾರುತ್ತಿದ್ದಾರೆ. ಈ ಜಮೀನಿನಲ್ಲಿರುವ ಕುಡಿಯುವ ನೀರಿನ ಬಾವಿಗೆ ಸತ್ತ ನಾಯಿ, ಬೆಕ್ಕು, ಚಪ್ಪಲಿ ಇತ್ಯಾದಿಗಳನ್ನು ಹಾಕಿ ಈ ಬಾವಿ ನೀರನ್ನೂ ಮಲಿನಗೊಳಿಸುವ ಪ್ರಯತ್ನ ಹಿಂದಿನಿಂದಲೂ ಹಲವು ಬಾರಿ ನಡೆಸಿದ್ದಾರೆ. ಈ ಬಗ್ಗೆ ಪೋಲೀಸರಿಗೆ ದೂರು ಸಹ ನೀಡಲಾಗಿದೆ. ಇಲ್ಲಿಗೆ 15 ದಿನಗಳ ಹಿಂದೆ ಈ ಊರಿನ ದಲಿತರಿಗೆ ಮರಣ ಶಾಸನ ಬರೆಯುವ ಕುತಂತ್ರ ಯೋಜನೆ ಹಾಕಿಕೊಂಡು ಅತ್ಯಂತ ವಿಷಕಾರಕ ಮಿಶ್ರಣವನ್ನು ಬಾವಿಗೆ ಸುರಿದಿದ್ದಾರೆ. ಅದೃಷ್ಟವಶಾತ್ ನೀರು ಕುಡಿಯುವ ಮೊದಲೆ ಈ ವಿಷಯ ದಲಿತರಿಗೆ ಗೊತ್ತಾಗಿ ಬದುಕುಳಿದಿದ್ದಾರೆ. ಪೋಲೀಸ ಇಲಾಖೆ ಪರೀಶೀಲಿಸಿದಾಗ ವಿಷ ಹಾಕಿರುವುದು ದೃಢ ಪಟ್ಟಿದೆ. ಈ ಬಗ್ಗೆ ಪೋಲೀಸರಿಗೆ ದೂರು ನೀಡಿದ್ದಾರೆ. ನೀವೇ (ದಲಿತರೇ) ದುರುದ್ದೇಶದಿಂದ ಬಾವಿಗೆ ವಿಷಹಾಕಿದ್ದೀರಿ ಎಂದು ಪೋಲೀಸರು ದಲಿತರನ್ನು ಬೆದರಿಸುತ್ತಿದ್ದಾರೆ.

ಯಾರ ಮೇಲೂ ಕ್ರಮ ತೆಗೆದುಕೊಳ್ಳದೆ ಸವರ್ಣೀಯರ ಪರ ಪೋಲೀಸರು ನಿಂತಿದ್ದಾರೆ. ಪರಿಶಿಷ್ಟ ಜಾತಿ ಪಂಗಡದ ಆಯೋಗ ಅಧ್ಯಕ್ಷರು ಬೇಟಿ ನೀಡಿದ್ದಾರೆ. ಆದರೂ ಯಾವ ಕ್ರಮವನ್ನೂ ಜರುಗಿಸಿರುವುದಿಲ್ಲ.

ಈ ಊರಿಗೆ ದಲಿತ ಹಕ್ಕುಗಳ ಸಮಿತಿ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಹರಳಹಳ್ಳಿ ನೇತೃತ್ವದಲ್ಲಿ ನಿಯೋಗವೊಂದು ಬೇಟಿ ನೀಡಿದ್ದಾರೆ. ಈ ಘಟನೆ ನಡೆದ ಸ್ಥಳಕ್ಕೆ ದಲಿತ ಹಕ್ಕುಗಳ ಸಮಿತಿ ರಾಜ್ಯ ಸಹ ಸಂಚಾಲಕರಾದ ಮಾರುತಿ ಮಾನ್ಪಡೆ, ಜೇವರ್ಗಿ ತಾಲೂಕ್ ಸಂಚಾಲಕರಾದ ಪಾಂಡುರಂಗ ಮಾವಿನಕೆರೆ ಬೇಟಿ ಮಾಡಿ ಹೋರಾಟಕ್ಕೆ ಕರೆ ನೀಡಿದ್ದಾರೆ.

ಡಿಹೆಚ್‌ಎಸ್ ಪಾದಯಾತ್ರೆ 11 ಸೆಪ್ಟೆಂಬರ್ 2017

ಚನ್ನೂರಿನಿಂದ ಅರಂಭವಾದ ಪಾದಯಾತ್ರೆ ದಲಿತರಿಗೆ ಆಗಿರುವ ಅನ್ಯಾಯ ತನಿಖೆಯಾಗಬೇಕು, ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕೆಂದು ಅಸ್ಪೃಶ್ಯತೆ–ಜಾತಿ ತಾರತಮ್ಯ ನೀತಿಗಳ ವಿರುದ್ಧ ಘೋಷಣೆ ಮೊಳಗಿಸುತ್ತ ಜೇವರ್ಗಿ ತಾಲೂಕು ಕಛೇರಿ ತಲುಪಿತು. ಈ ಪ್ರತಿಭಟನಾ ಪಾದಯಾತ್ರೆ ಉದ್ದೇಶಿಸಿ ಡಿಹೆಚ್‌ಎಸ್ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಹರಳಹಳ್ಳಿ ಯವರು ಮಾತನಾಡಿ ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ದಲಿತರ ಮೇಲೆ ದೌರ್ಜನ್ಯ ಹೆಚ್ಚಾಗಿದೆ. ಇದರ ವಿರುದ್ಧ ದಲಿತರು ಸಂಘಟಿತರಾಗಿ ಹೋರಾಟ ನಡೆಸಬೇಕೆಂದು ತಿಳಿಸಿದರು. ಚನ್ನೂರು ಗ್ರಾಮದಲ್ಲಿ ಬಾವಿಗೆ ವಿಷ ಬೆರೆಸಿ ಸಾಮೂಹಿಕವಾಗಿ ಮಾರಣಹೋಮ ನಡೆಸಲೆತ್ನಿಸಿರುವುದು ಅಮಾನವೀಯ ಜಾತಿ ತಾರತಮ್ಯದ ಅತಿರೇಕವಾಗಿದೆ. ಈ ಕೃತ್ಯ ಎಸಗಿದವರನ್ನು ಪತ್ತೆಹಚ್ಚಿ ಶಿಕ್ಷೆಗೊಳಪಡಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು. ಅಲ್ಲದೆ ಈ ಚನ್ನೂರಿನ ದಲಿತರ ಕೇರಿಗೆ ಸಿಮೆಂಟ್ ರಸ್ತೆ, ಕುಡಿಯುವ ನೀರಿನ ವ್ಯವಸ್ಥೆ, ಡಾ॥ ಬಿ.ಆರ್. ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣ ಇತ್ಯಾದಿ ಮೂಲ ಸೌಕರ್ಯ ಒದಗಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು. ಕೊನೆಯಲ್ಲಿ ಜೇವರ್ಗಿ ತಹಶೀಲ್ದಾರ್‌ರವರು ಮನವಿ ಸ್ವೀಕರಿಸಿದರು. ತನಿಖೆ ನಡೆಸುವುದಾಗಿ ತಿಳಿಸಿದರು. ಜಿಲ್ಲಾ ಸಂಚಾಲಕ ಮಾವಿನಕೆರೆ ಭಾಗವಹಿಸಿ ಮಾತನಾಡಿದರು. ಈ ಹೋರಾಟ ಬೆಂಬಲಿಸಿ ಕರ್ನಾಟಕ ಪ್ರಾಂತ ರೈತ ಸಂಘದ (ಕೆಪಿಆರ್‌ಎಸ್) ತಾಲೂಕ್ ಅಧ್ಯಕ್ಷರಾದ ಸುಭಾಷ ಹೊಸಮನಿ ಮಾತನಾಡಿದರು. ತಾಲೂಕ್ ಸಂಚಾಲಕ ಪರಶುರಾಮ ಬಡಿಗೇರ ವಂದಿಸಿದರು.



ಕಾವ್ಯಾ ನಿಗೂಢ ಸಾವಿನ ತನಿಖೆ ಆಗ್ರಹಿಸಿ ಸಮಾನ ಮನಸ್ಕರ ಧರಣಿ



ಮೂಡಬಿದರೆಯ ಆಳ್ವಾಸ್ ವಿದ್ಯಾ ಸಂಸ್ಥೆಯ 10ನೇ ತರಗತಿ ವಿದ್ಯಾರ್ಥಿನಿ ಕಾವ್ಯಾಳ ನಿಗೂಢ ಸಾವು ಸಂಭವಿಸಿ ತಿಂಗಳುಗಳೇ ಕಳೆದಿದ್ದರೂ, ರಾಜ್ಯದ ಪೋಲೀಸ್ ಇಲಾಖೆ ಪ್ರಕರಣವನ್ನು ಭೇದಿಸುವಲ್ಲಿ ವಿಫಲವಾಗಿದೆ. ಈಗಾಗಲೇ ಜಿಲ್ಲಾಧಿಕಾರಿಗಳು ಈ ಸಂಬಂಧ ತನಿಖಾ ಸಮಿತಿಗಳನ್ನು ನೇಮಿಸಿದ್ದರೂ, ಪ್ರಗತಿ ತೃಪ್ತಿಕರವಾಗಿಲ್ಲ. ಈ ಹಿನ್ನೆಲೆಯಲ್ಲಿ ಮಂಗಳೂರಿನಲ್ಲಿ ಸಮಾನ ಮನಸ್ಕ ಸಂಘಟನೆಗಳ ನೇತೃತ್ವದಲ್ಲಿ ದ.ಕ. ಜಿಲ್ಲಾಧಿಕಾರಿ ಕಚೇರಿ ಎದುರು ಪ್ರಕರಣದ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಬೇಕೆಂದು ಆಗ್ರಹಿಸಿ ಸಪ್ಟೆಂಬರ್ 11 ರಂದು ಧರಣಿ ನಡೆಸಲಾಯಿತು.

ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಮುಖಂಡರಾದ ಕೆ.ಎಸ್.ವಿಮಲಾ ಮಾತನಾಡಿ, ಇದೊಂದು ವ್ಯವಸ್ಥಿತ ಕೊಲೆ. ಆದರೆ ಈ ಪ್ರಕರಣವನ್ನು ಮುಚ್ಚಿ ಹಾಕುವ ಪ್ರಯತ್ನಗಳು ನಡೆಯುತ್ತಿವೆ. ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ನಡೆಯುತ್ತಿದ್ದರೂ, ಈ ಬಗ್ಗೆ ರಾಜ್ಯ ಸರ್ಕಾರ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ದೂರಿದರು.

ಪ್ರತಿಭಟನಾ ಧರಣಿಯಲ್ಲಿ ಕಾವ್ಯಾಳ ತಂದೆ ಲೋಕೇಶ್, ತಾಯಿ ಬೇಬಿ, ಖ್ಯಾತ ವಿಚಾರವಾದಿ ಪ್ರೊ.ನರೇಂದ್ರ ನಾಯಕ್, ಡಿವೈಎಫ್‌ಐ ರಾಜ್ಯ ಅಧ್ಯಕ್ಷ ಮುನೀರ್ ಕಾಟಿಪಳ್ಳ, ಸಿಪಿಐ(ಎಂ)ನ ಸುನಿಲ್ ಕುಮಾರ್ ಬಜಾಲ್, ಜಯಂತಿ ಬಿ.ಶೆಟ್ಟಿ, ಸಿಪಿಐ ಪಕ್ಷದ ವಿ.ಕುಕ್ಯಾನ್, ಎಚ್.ವಿ.ರಾವ್, ದಸಂಸ ಮುಖಂಡರಾದ ಎಂ.ದೇವದಾಸ್, ರಘು ಎಕ್ಕಾರು, ಡಿವೈಎಫ್‌ಐನ ದ.ಕ.ಜಿಲ್ಲಾ ಮುಖಂಡರಾದ ದಯಾನಂದ ಶೆಟ್ಟಿ, ಸಂತೋಷ್ ಬಜಾಲ್, ಬಿ.ಕೆ.ಇಮ್ತಿಯಾಜ್, ಹಿರಿಯ ನ್ಯಾಯವಾದಿ ಯಶವಂತ ಮರೋಳಿ, ಸಾಮಾಜಿಕ ಕಾರ್ಯಕರ್ತರಾದ ಆಲಿ ಹಸನ್ ಭಾಗವಹಿಸಿದ್ದರು.

ಉಡುಪಿಯಲ್ಲಿ ಪ್ರತಿಭಟನೆಗೆ ನಿಷೇಧ – ಸಿಪಿಐ(ಎಂ) ಆಕ್ಷೇಪ

ಉಡುಪಿಯ ಕ್ಲಾಕ್ ಟವರ್ ಮತ್ತು ಜಟಕಾ ಸ್ಟ್ಯಾಂಡ್ ಬಳಿ ಪ್ರತಿಭಟನೆಯನ್ನು ನಿಷೇಧಿಸಿದ ಅಪರ ಜಿಲ್ಲಾಧಿಕಾರಿಯವರ ಆದೇಶಕ್ಕೆ ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ಉಡುಪಿ ನಗರ ಸಭೆಯು ಕಾಂಗ್ರೆಸ್ ಆಡಳಿತಕ್ಕೆ ಒಳಪಟ್ಟಿದ್ದು ಜಿಲ್ಲಾ ಕಾಂಗ್ರೆಸ್ ಪಕ್ಷದ ಒತ್ತಡದಿಂದಲೇ ಜಿಲ್ಲಾಡಳಿತ ಈ ರೀತಿಯ ನಿರ್ಧಾರಕ್ಕೆ ಬಂದಿದೆ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ. ಪ್ರತಿಭಟಿಸುವ ಹಕ್ಕನ್ನು ಭಾರತದ ಸಂವಿಧಾನ ಖಾತರಿ ಪಡಿಸಿದೆ. ಪರ್ಯಾಯ ಜಾಗವನ್ನು ಸೂಚಿಸದೆ ಏಕಾಏಕಿ ತೀರ್ಮಾನ ಕೈಗೊಂಡಿರುವುದು ಕಾನೂನು ಬಾಹಿರವಾಗಿದೆ.

ಅಜ್ಜರಕಾಡಿನಲ್ಲಿರುವ ಹುತಾತ್ಮಕಟ್ಟೆ ಬಳಿ ಪ್ರತಿಭಟನೆ ನಡೆಸಲು ಪೋಲೀಸ್ ಇಲಾಖೆ ಮತ್ತು ನಗರಸಭೆ ಸೂಚಿಸಿದೆ. ಜನರಲ್ಲಿ ಜಾಗೃತಿ ಮೂಡಿಸುವುದು ಪ್ರತಿಭಟನೆಯ ಒಂದು ಪ್ರಮುಖ ಉದ್ದೇಶ. ಜನ ಸಂಚಾರವೇ ಇಲ್ಲದ ಪ್ರದೇಶದಲ್ಲಿ ಪ್ರತಿಭಟನೆ ನಡೆಸಿ ಎನ್ನುವುದರ ಉದ್ದೇಶವಾದರೂ ಏನು?

ಕೂಡಲೇ ಎಲ್ಲಾ ರಾಜಕೀಯ ಪಕ್ಷಗಳು ಹಾಗೂ ಸಂಘ–ಸಂಸ್ಥೆಗಳೊಂದಿಗೆ ಚರ್ಚಿಸಿ ಅಂತಿಮ ತೀರ್ಮಾನಕ್ಕೆ ಬರಬೇಕೆಂದು ಹಾಗೂ ಅಲ್ಲಿಯವರೆಗೆ ಕ್ಲಾಕ್ ಟವರ್ ಅಥವಾ ಜಟಕಾ ಸ್ಟ್ಯಾಂಡ್ ಬಳಿ ಪ್ರತಿಭಟನೆಗೆ ಅವಕಾಶ ನೀಡಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

ರಾಜೀವಗಾಂಧಿ ವಿ.ವಿ.:

ಹಾಲ್ ಟಿಕೇಟ್ ನೀಡದದ್ದನ್ನು ಖಂಡಿಸಿ SFI ಪ್ರತಿಭಟನೆ

ರಾಜೀವಗಾಂಧಿ ವಿ.ವಿ. ಯಡವಟ್ಟಿನಿಂದಾಗಿ ಮೆಡಿಕಲ್ ವಿದ್ಯಾರ್ಥಿಗಳು ಹಾಲ್ ಟಿಕೇಟ್ ಇಲ್ಲದೆ ಪರದಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಸರ್ವರ್ ಸಮಸ್ಯೆಯ ನೆಪವೊಡ್ಡಿ ವಿವಿ ಜಾಣ ಮೌನಕ್ಕೆ ಶರಣಾಗಿದೆ. ಹೋರಾಟದ ಪ್ರಯತ್ನದಿಂದಾಗಿ ಹಾಲ್ ಟಿಕೇಟ್ ವಿತರಣೆಯಾದರೂ ಕೆಲವರ ಹೆಸರು, ವಿಷಯದಲ್ಲಿ ಗೊಂದಲವಿದೆ.

ಇದನ್ನು ಖಂಡಿಸಿ ವಿದ್ಯಾರ್ಥಿಗಳು ಧಿಢೀರನೆ BMC (ಬೆಂಗಳೂರು ವೈದ್ಯಕೀಯ ಕಾಲೇಜ್) ಮುಂದೆ ಪ್ರತಿಭಟನೆ ನಡೆಸಿದರು. SFI ಪ್ರತಿಭಟನೆಗೆ ಬೆಂಬಲ ನೀಡಿತ್ತು. ಆಡಳಿತಾಧಿಕಾರಿ ನಟರಾಜ ರವರ ಜೊತೆ ಮಾತನಾಡಿ ಪ್ರವೇಶ ಪತ್ರ ಸಮಸ್ಯೆ ಬಗೆ ಹರಿಸುವುದಾಗಿ ಒಪ್ಪಿಕೊಂಡಿದ್ದಾರೆ. ಕೆಲದೋಷ ಹಾಗೂ ಹಾಲ್ ಟಿಕೇಟ್ ನೀಡದವರಿಗೆ ಮರುದಿನವೇ ಪೂರ್ಣ ಮಾಹಿತಿಯನ್ನು ಕಾಲೇಜು ಸೀಲ್ ನೊಂದಿಗೆ ನೀಡುವುದಾಗಿ ಹೇಳಿದರು.

ರಾಜ್ಯ ಕಾರ್ಯದರ್ಶಿ ಗುರುರಾಜ ದೇಸಾಯಿ, ಕೇಂದ್ರ ಸಮಿತಿ ಸದಸ್ಯ ಬಸವರಾಜ ಪೂಜಾರ, ಬೆಂಗಳೂರು ಜಿಲ್ಲಾಧ್ಯಕ್ಷ ವೇಗಾನಂದ, ಮುಖಂಡರಾದ ಹನಮಂತ ದುರ್ಗದ್, ಸಾಗರ, ಒಮರ್, ಮಾಹಿಲ್ ಇದ್ದರು.

ಮೂಡಬಿದರೆಯಲ್ಲಿ ಸಿಪಿಐ(ಎಂ) 22ನೇ ರಾಜ್ಯ ಸಮ್ಮೇಳನ

ಜನವರಿ 5-8, 2018

ಸಿಪಿಐ(ಎಂ) ಪಕ್ಷದ 22ನೇ ಕರ್ನಾಟಕ ರಾಜ್ಯ ಸಮ್ಮೇಳನವು 2018 ಜನವರಿ 5, 6, 7, 8 ರಂದು ಮೂಡಬಿದರೆಯಲ್ಲಿ ನಡೆಯಲಿದ್ದು, ಈ ಸಂಬಂಧವಾಗಿ ಸಪ್ಟೆಂಬರ್ 10 ರಂದು ಮೂಡಬಿದ್ರೆಯ ಹೋಟೇಲ್ ಪಡಿವಾಳ್ ಸಭಾಂಗಣದಲ್ಲಿ ಸೇರಿದ್ದ ಸಿದ್ಧತಾ ಸಭೆಯಲ್ಲಿ ಸಮ್ಮೇಳನ ಸ್ವಾಗತ ಸಮಿತಿಯನ್ನು ರಚಿಸಲಾಯಿತು. ಸಾವಾಜಿಕ ಚಿಂತಕರೂ ಮಂಗಳೂರು ವಿಶ್ವವಿದ್ಯಾಲಯದ ಕ್ರೈಸ್ತ ಅಧ್ಯಯನ ಪೀಠದ ವಿಶ್ರಾಂತ ಮುಖ್ಯಸ್ಥರೂ ಆದ ಫಾ. ಜಾನ್ ಫೆರ್ನಾಂಡೀಸ್ ಅವರನ್ನು ಸಭೆಯು ಸ್ವಾಗತ ಸಮಿತಿಯ ಗೌರವಾಧ್ಯಕ್ಷರಾಗಿ ಆಯ್ಕೆ ಮಾಡಿದೆ.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜೆ. ಬಾಲಕೃಷ್ಣ ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ಸೇರಿದ್ದ ಸಭೆಯು ಪಕ್ಷದ ಜಿಲ್ಲಾ ಮಟ್ಟದ ಮುಖಂಡರು, ಸ್ಥಳೀಯ ಪಕ್ಷದ ಕಾರ್ಯಕರ್ತರು, ಜಿಲ್ಲೆಯ ಪ್ರಗತಿಪರ ಬುದ್ಧಿಜೀವಿಗಳನ್ನೊಳಗೊಂಡ ಸ್ವಾಗತ ಸಮಿತಿಯನ್ನು ಆಯ್ಕೆ ಮಾಡಿತು. ಫಾ. ಜಾನ್ ಫೆರ್ನಾಂಡೀಸ್ ಗೌರವಾಧ್ಯಕ್ಷರಾಗಿ, ಜಿಲ್ಲೆಯ ಹಿರಿಯ ಕಮ್ಯೂನಿಸ್ಟ್ ನಾಯಕ ಕೆ.ಆರ್.ಶ್ರೀಯಾನ್ ಅಧ್ಯಕ್ಷರಾಗಿ, ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿ ಕಾರ್ಯಾಧ್ಯಕ್ಷರಾಗಿ, ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರಾದ ಯಾದವ ಶೆಟ್ಟಿ ಪ್ರಧಾನ ಕಾರ್ಯದರ್ಶಿಯಾಗಿ, ಜೆ.ಬಾಲಕೃಷ್ಣ ಶೆಟ್ಟಿ ಕೋಶಾಧಿಕಾರಿಯಾಗಿ ಆಯ್ಕೆಯಾಗಿರುತ್ತಾರೆ. ಸಮ್ಮೇಳನದ ಸ್ವಾಗತ ಸಮಿತಿಯು ಅದೇ ವೇಳೆ ವಿವಿಧ ಉಪಸಮಿತಿಗಳನ್ನು ರಚಿಸಿರುತ್ತದೆ.

ಗೌರವಾಧ್ಯಕ್ಷರಾಗಿ ಆಯ್ಕೆಯಾದ ಫಾ. ಜಾನ್ ಫೆರ್ನಾಂಡೀಸ್ ಅವರು ಮಾತನಾಡಿ, ತಾನು ಕ್ರೈಸ್ತ ಧರ್ಮದಲ್ಲಿ ಒಬ್ಬ ಗುರುವಾಗಿದ್ದರೂ, ಕಮ್ಯೂನಿಸ್ಟ್ ಚಳುವಳಿಯಲ್ಲಿ ಧರ್ಮದ ಮೂಲ ಆಶಯಗಳನ್ನು ಗುರುತಿಸಿದ್ದೇನೆ. ದುರ್ಬಲರು ಬಡವರ ಬಗ್ಗೆ ಪ್ರೀತಿ ಮತ್ತು ಕರುಣೆ, ಸಂಪತ್ತಿನಿಂದ ವಂಚಿತರಾದವರನ್ನು ಆರ್ಥಿಕವಾಗಿ ಬಲಿಷ್ಟಗೊಳಿಸುವುದು, ಮುನಷ್ಯ ಮನುಷ್ಯರ ನಡುವೆ ಸಮಾನತೆ ಧರ್ಮದ ಆಶಯಗಳಾಗಿವೆ. ಎಡಪಕ್ಷಗಳು ಮಾತ್ರ ಈ ಆಶಯವನ್ನು ನಿಜಜೀವನದಲ್ಲಿ ಕಾರ್ಯಗತಗೊಳಿಸಲು ಯತ್ನಿಸುತ್ತಿವೆ. ದೇಶದಲ್ಲಿ ಇವತ್ತು ಕಮ್ಯೂನಿಸ್ಟ್ ಚಳುವಳಿಯೊಂದೇ ಜನತೆಗೆ ರಾಜಕೀಯವಾಗಿ ಸಮೀಪದಲ್ಲಿವೆ. ಈ ನಿಟ್ಟಿನಲ್ಲಿ ತಾನು ಧರ್ಮ ಗುರುವಾಗಿದ್ದರೂ, ಕಮ್ಯೂನಿಸ್ಟ್ ಪಕ್ಷದ ಸಮ್ಮೇಳನವೊಂದರ ಸ್ವಾಗತ ಸಮಿತಿಗೆ ಗೌರವಾಧ್ಯಕ್ಷನಾಗಿ ಪಾಲ್ಗೊಳ್ಳಲು ಸಂತೋಷಪಡುತ್ತೇನೆ ಎಂದವರು ತಿಳಿಸಿದರು.

ಭಾರತದಲ್ಲಿ ಇತ್ತೀಚೆಗಿನ ವರ್ಷದಲ್ಲಿ ರಾಜಕೀಯ ನಡೆಗಳು ಹೆಚ್ಚೆಚ್ಚು ಸರ್ವಾಧಿಕಾರಿಯಾಗುತ್ತಿವೆ. ಹಲವು ಭಾಷೆ, ಹಲವು ಧರ್ಮ, ಹಲವು ಸಂಸ್ಕೃತಿ, ಹಲಬಗೆಯ ಆರ್ಥಿಕತೆಯುಳ್ಳ ಭಾತದಂತಹ ದೇಶದ ಮೇಲೆ ಏಕಭಾಷೆ, ಏಕಧರ್ಮ, ಏಕ ಸಂಸ್ಕೃತಿ ಹಾಗೂ ಏಕೈಕ ಆರ್ಥಿಕತೆಯನ್ನು ಹೇರಲು ಪ್ರಭುತ್ವವು ಪ್ರಯತ್ನಿಸುತ್ತಿದೆ. ಬಹುಸಂಸ್ಕೃತಿಯು ಪ್ರಜಾಸತ್ತಾತ್ಮಕ್ವಾಗಿ ರೂಪುಗೊಳ್ಳುತ್ತಿರುವ ಸಮುದಾಯವೊಂದರ ಮೇಲೆ, ಈ ರೀತಿಯಲ್ಲಿ ಏಕಸಂಸ್ಕೃತಿಯ ಹೇರಿಕೆ ನಡೆಸಿರುವುದು, ಜಗತ್ತಿನ ಯಾವ ದೇಶಗಳಲ್ಲೂ ಯಶಸ್ವಿಯಾಗಿಲ್ಲ ಮಾತ್ರವಲ್ಲ, ಆ ದೇಶಗಳು ಅವಸಾನ ಕಂಡಿವೆ. ಏಕಸಂಸ್ಕೃತಿಯ ಹೇರಿಕೆ ಮತ್ತು ದಾಳಿಗಳು ನಿಜವಾಗಿ ಸಮಾಜದ ಅಂಚಿನಲ್ಲಿರುವ ಜನರನ್ನೇ ನಿರ್ನಾಮ ಮಾಡುತ್ತಿವೆ. ಅವು ಸ್ವತಂತ್ರ ಸಮಾಜದ ಪರಿಕಲ್ಪನೆಗಳಾದ ಬಡಜನರ ರಕ್ಷಣೆ, ಸಮಾನತೆ ಪ್ರಜಾಪ್ರಭುತ್ವಕ್ಕೆ ಕುಠಾರಪ್ರಾಯವಾಗಿದೆ. ಸಿಪಿಐ(ಎಂ) ಪಕ್ಷ ಇದರ ವಿರುದ್ಧ ಬಲವಾಗಿ ಧ್ವನಿ ಎತ್ತಿರುವುದು ನಾಗರಿಕರಾದ ನಮಗೆ ಅದರ ಬಗ್ಗೆ ನಿರೀಕ್ಷೆಯನ್ನು ಭರವಸೆಯನ್ನು ಮೂಡಿಸುತ್ತಿದೆ ಎಂಬುದಾಗಿ ಫಾ. ಜಾನ್ ಫೆರ್ನಾಂಡೀಸ್ ವಿವರಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ ಜೆ.ಬಾಲಕೃಷ್ಣ ಶೆಟ್ಟಿ ಮಾತನಾಡಿ, ಸಿಪಿಐ(ಎಂ) ಪಕ್ಷವು ಇ.ಎಂ. ಎಸ್.ನಂಬೂದಿರಿಪಾಡ್, ಎ.ಕೆ.ಗೋಪಾಲನ್, ಹರ್‌ಕಿಶನ್ ಸಿಂಗ್ ಸುರ್ಜಿತ್, ಜ್ಯೋತಿ ಬಸು ಮುಂತಾದ ಸ್ವಾತಂತ್ರ್ಯ ಹೋರಾಟಗಾರರು ಮುಖಂಡರಾಗಿ ಬಂದಿದ್ದ ಪಕ್ಷ. ಸ್ವಾತಂತ್ರ್ಯ ಹೋರಾಟದ ಕೈಗೂಡದ ಆಶಯಗಳನ್ನು ವಿಜಯಗೊಳಿಸಬೇಕೆಂದು ಆ ಮಹಾನ್ ನಾಯಕರ ಪರಂಪರೆಯಲ್ಲಿ ಮುನ್ನಡೆಯುತ್ತಾ ಇದೆ. ಕರ್ನಾಟಕದಲ್ಲೂ ಬಲಿಷ್ಟ ಎಡಚಳುವಳಿಯನ್ನು ಕಟ್ಟುವ ಸವಾಲು ಇದೆ ಎಂದು ಅವರು ಹೇಳಿದರು.

ಯಾದವ ಶೆಟ್ಟಿ ಸ್ವಾಗತಿಸಿದರು. ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಸದಸ್ಯೆ ರಮಣಿ ಮೂಡಬಿದರೆ ಧನ್ಯವಾದವಿತ್ತರು. ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ ಸ್ವಾಗತ ಸಮಿತಿ ರಚನೆಗೆ ಮಾರ್ಗದರ್ಶನ ನೀಡಿದರು.



ಕಿಸಾನ್ ಮುಕ್ತಿ ಜಾಥಾ : ಸೆಪ್ಟಂಬರ್ 22, 23 ರಂದು ಕರ್ನಾಟಕದಲ್ಲಿ

ಅಖಿಲ ಭಾರತ ಕಿಸಾನ್ ಸಭಾ ಮತ್ತು ಇತರೇ ರೈತ – ಕೂಲಿಕಾರರ ಸಂಘಗಳು ಜಂಟಿಯಾಗಿ ಅಖಿಲ ಭಾರತ ರೈತ ಹೋರಾಟ ಸಮನ್ವಯ ಸಮಿತಿ ಯನ್ನು ದೇಶವ್ಯಾಪ್ತಿಯಾಗಿ ರಚಿಸಿಕೊಂಡು, ಮುಖ್ಯವಾಗಿ "ರೈತರ–ಕೂಲಿಕಾರರ ಎಲ್ಲಾ ಸಾಲಗಳನ್ನು ಮನ್ನಾ ಮಾಡಬೇಕು ಮತ್ತು ಡಾ. ಎಂ ಎಸ್ ಸ್ವಾಮಿನಾಥನ್ ಸಲಹೆಯಂತೆ ಬೆಂಬಲ ಬೆಲೆಯನ್ನು ನಿಗದಿಸಿ ಖಾತರಿಯಾಗಿ ದೊರೆಯುವಂತೆ ಅದನ್ನು ಕಾನೂನು ಮತ್ತಿತರೇ ವ್ಯವಸ್ಥೆ ಮಾಡುವುದು." ಎಂಬ ಎರಡು ಹಕ್ಕೊತ್ತಾಯಗಳಿಗೆ ನಡೆಸಲಿರುವ ಅಖಿಲ ಭಾರತ ಕಿಸಾನ್ ಮುಕ್ತಿ ಜಾಥಾವು ಕೇರಳದ ಮೂಲಕ ಸೆಪ್ಟಂಬರ್ 22ರಂದು ಬೆಳಿಗ್ಗೆ ಮೈಸೂರನ್ನು ಪ್ರವೇಶಿಸಲಿದೆ. ಮುಂದೆ ಈ ಜಂಟಿ ಸಮಿತಿ ನವದೆಹಲಿಯಲ್ಲಿ ನವೆಂಬರ್ 20ರಂದು ರೈತರ ಸಂಸತ್ ನಡೆಸಲಿದೆ.

ಈ ಜಾಥಾದ ಯಶಸ್ವಿಗೆ ಕರ್ನಾಟಕದಲ್ಲಿ, ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ, ಕರ್ನಾಟಕ ರಾಜ್ಯ ರೈತ ಸಂಘ ಹಸಿರುಸೇನೆ(ಪುಟ್ಟಣ್ಣಯ್ಯ) ಕರ್ನಾಟಕ ರಾಜ್ಯ ರೈತ ಸಂಘ ಹಸಿರುಸೇನೆ (ಕೋಡಿಹಳ್ಳಿ) ರೈತ–ಕೃಷಿಕಾರ್ಮಿಕರ ಸಂಘಟನೆ, ಕಿಸಾನ್ ಸ್ವರಾಜ್ ಅಭಿಯಾನ, ಸ್ವರಾಜ್ ಅಭಿಯಾನ, ಕರ್ನಾಟಕ ಜನಶಕ್ತಿ ಜನಾಂದೋಳನಗಳ ಮಹಾಮೈತ್ರಿ ಗಳ ಜಂಟಿ ಸಭೆ ನಡೆಸಿ, ಇದರ ಯಶಸ್ವಿಗೆ ಜಂಟಿಯಾಗಿ ಈ ಕೆಳಕಂಡಂತೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಪತ್ರಿಕಾ ಹೇಳಿಕೆಯೊಂದರಲ್ಲಿ ತಿಳಿಸಲಾಗಿದೆ.

ದಿನಾಂಕ	ಸಮಯ	ಸ್ಥಳ	ಕಾರ್ಯಕ್ರಮ
22.09.2017	10.00	ಗುಂಡ್ಲುಪೇಟೆ	ಜಾಥಾ ಸ್ವಾಗತ
	12.30	ಮೈಸೂರು	ಪತ್ರಿಕಾಗೋಷ್ಠಿ
	2.30 ಮಧ್ಯಾಹ್ನ	ಪಾಂಡವಪುರ	ಬಹಿರಂಗ ಸಭೆ
	ರಾತ್ರಿ	ತುಮುಕೂರು	ವಸತಿ
23.09.2017	10.30 – 12.30	ತುಮುಕೂರು	ಬಹಿರಂಗ ಸಭೆ
	3.00 ರಿಂದ 6.00	ಬೆಂಗಳೂರು ಶಿಕ್ಷಕರ ಸದನ	ಸಮಾವೇಶ

ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಬಸ್ ಸೌಲಭ್ಯಕ್ಕೆ ಎಸ್‌ಎಫ್‌ಐ ಪ್ರತಿಭಟನೆ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಹಾವೇರಿ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಸೆ. 13ರಂದು ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯದ ವಿದ್ಯಾರ್ಥಿಗಳು, ಸಮಾಜ ಕಲ್ಯಾಣ ಇಲಾಖೆಯ ಕಛೇರಿ ಎದುರು ಪ್ರತಿಭಟನೆ ನಡೆಸಿ, ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಬಸ್ ಸೌಲಭ್ಯ ಒದಗಿಸುವಂತೆ ಒತ್ತಾಯಿಸಿದರು.

ಎಸ್‌ಎಫ್‌ಐ ಜಿಲ್ಲಾ ಅಧ್ಯಕ್ಷ ಸುಭಾಸ ಎಂ ಮಾತನಾಡಿ, ಹಾವೇರಿ ಜಿಲ್ಲಾ ಕೇಂದ್ರದಿಂದ ಸುಮಾರು 3 ಕೀ.ಮೀ ದೂರದಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯ ನಂ.2ರಲ್ಲಿ ಸುಮಾರು 100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಇದ್ದಾರೆ. ಪ್ರತಿನಿತ್ಯವೂ ಕಾಲೇಜಿಗೆ ತೆರಳಲು ವಿದ್ಯಾರ್ಥಿಗಳಿಗೆ ಬಸ್ ಸೌಲಭ್ಯವಿಲ್ಲದೆ ಖಾಸಗಿ ವಾಹನ ಹಾಗೂ ದ್ವಿಚಕ್ರ ಸವಾರರ ಬಳಿ ಕಾಡಿ ಬೇಡಿ ನಗರದಲ್ಲಿರುವ ಕಾಲೇಜಿಗೆ ಬರುವಂತಾಗಿದೆ. ಕಾಲೇಜು ಅವಧಿ ಮುಗಿದ ನಂತರವೂ ಕೂಡಾ ವಿದ್ಯಾರ್ಥಿಗಳು ಮರಳಿ ಹಾಸ್ಟೆಲ್ ಸೇರಬೇಕೆಂದರೂ ಕೂಡಾ ನಡೆದುಕೊಂಡು ಅಥವಾ ದ್ವಿ ಚಕ್ರ ವಾಹನ ಸವಾರರ ಬಳಿ ಕೇಳಿಕೊಂಡು ಹಾಸ್ಟೆಲ್ ಸೇರುವ ಸ್ಥಿತಿ ನಿರ್ಮಾಣವಾಗಿದೆ. ಹಾವೇರಿ ನಗರದಲ್ಲಿರುವ ವಿವಿಧ ಕಾಲೇಜುಗಳ ಪಿಯುಸಿ ವಿದ್ಯಾರ್ಥಿಗಳು ತರಗತಿಗಳು ಆರಂಭವಾಗುವ ಸಮಯ ಮುಂಜಾನೆ 7:30 ಆಗಿರುವುದರಿಂದ ವಸತಿ ನಿಲಯದ ವಿದ್ಯಾರ್ಥಿಗಳು ಮುಂಜಾನೆಯ ತಿಂಡಿಯನ್ನು ಸಹ ಸರಿಯಾಗಿ ಮಾಡದೆ ಕಾಲೇಜಿಗೆ ತೆರಳುವಂತಾಗಿದೆ. ಈ ಕುರಿತು ಈ ಹಿಂದೆ ಕೂಡಾ ಎಸ್‌ಎಫ್‌ಐ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರೂ ಕೂಡಾ ಅಧಿಕಾರಿಗಳು ಕಿವಿಗೊಡುತ್ತಿಲ್ಲ ಎಂದು ಆರೋಪಿಸಿದರು. ರಾಜ್ಯ ಸರ್ಕಾರ ಎಸ್‌ಸಿ\ಎಸ್‌ಟಿ ವರ್ಗದ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಎಂದು ಆದೇಶ ಮಾಡಿದ್ದರೂ ಕೂಡಾ ಬಸ್ ಪಾಸ್ ಪಡೆದ ವಿದ್ಯಾರ್ಥಿಗಳು ಹಾಸ್ಟೆಲ್‌ನಿಂದ ಕಾಲೇಜಿಗೆ ಬಸ್ ನಲ್ಲಿ ಪ್ರಯಾಣ ಮಾಡಲಾಗುತ್ತಿಲ್ಲ. ಇಂತಹ ಪ್ರಕರಣ ಕಣ್ಣ ಮುಂದೆ ಇದ್ದರೂ ಕೂಡಾ ಜಿಲ್ಲಾಡಳಿತ ಕಣ್ಣುಮುಚ್ಚಿ ಕುಳಿತಿದೆ ಎಂದರು.

ಸರ್ಕಾರಿ ಶಾಲಾ–ಕಾಲೇಜುಗಳು, ಹಾಸ್ಟೆಲ್‌ಗಳು ನಗರದಲ್ಲಿ ಇರಬೇಕು ಆದರೆ ಹಾವೇರಿಯಲ್ಲಿ ಮಾತ್ರ ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯ, ಅಲ್ಪಸಂಖ್ಯಾತರ ಇಲಾಖೆಯ ವಸತಿ ನಿಲಯ, ಬಿಸಿಎಮ್ ಇಲಾಖೆಯ ವಸತಿ ನಿಲಯಗಳು ನಗರದಿಂದ ಹೊರಗೆ ಕಟ್ಟಡ ಕಟ್ಟಿದ್ದು ಇದು ವಿದ್ಯಾರ್ಥಿಗಳಿಗೆ ಅನಾನುಕೂಲವಾದಂತಾಗಿದೆ, ಬೆಳಿಗ್ಗ ಕಾಲೇಜಿಗೆ ತೆರಳಲು, ಕಾಲೇಜಿನಿಂದ ಹಾಸ್ಟೆಲ್‌ಗೆ ಮರಳಲು ವಿದ್ಯಾರ್ಥಿಗಳು ಹರಸಾಹಸ ಪಡುವಂತಾಗಿದೆ ಎಂದರು. ಹಾಸ್ಟೆಲ್‌ಗಳು ನಗರದಿಂದ ದೂರ ಉಳಿಯಲು ಜಿಲ್ಲಾಡಳಿತ ಹಾಗೂ ಸಂಬಂಧಪಟ್ಟ ಇಲಾಖೆಯ ನೇರ ಕಾರಣವಾಗಿರುವುದರಿಂದ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಬಸ್ ಪಾಸ್ ಜೊತೆಗೆ ಬಸ್ ಸೌಲಭ್ಯವನ್ನು ಕಲ್ಪಿಸಿಕೊಡಬೇಕೆಂದು ಆಗ್ರಹಿಸಿದರು.

ಮನವಿ ಪತ್ರ ಸ್ವೀಕರಿಸಿದ ನಂತರ ಸಮಾಜ ಕಲ್ಯಾಣ ಇಲಾಖೆಯ ತಾಲೂಕು ಅಧಿಕಾರಿಗಕಲಾದ ಕೆ.ಪಿ.ಮಹೇಂದ್ರನಾಯಕ್ ಮಾತನಾಡಿ, ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಸೌಲಭ್ಯದ ಕುರಿತು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಒಂದು ವಾರದೊಳಗಾಗಿ ಸಮಸ್ಯೆ ಸರಿ ಮಾಡುತ್ತೇವೆ ಎಂದು ಭರವಸೆ ನೀಡಿದ ನಂತರ ಎಸ್‌ಎಫ್‌ಐ ಕಾರ್ಯಕರ್ತರು ಪ್ರತಿಭಟನೆ ಹಿಂಪಡೆದರು.

ಈ ಸಂದರ್ಭದಲ್ಲಿ ಎಸ್‌ಎಫ್‌ಐ ತಾಲೂಕು ಮುಖಂಡರಾದ ತಮ್ಮಜ್ಜ ಕಾಯಕದ, ಮಹೇಶ ಕುರಿ, ಮಹದೇವ ದಂಡಿನ, ಅರುಣ ಗೂಗಿ, ಗಿರಿಶ್ ಲಮಾಣಿ, ಕಿರಣ, ನಿಂಗರಾಜ, ರಂಗಪ್ಪ ಹರಿಜನ, ರಾಜು ಲಮಾಣಿ, ಸಂತೋಷ ಲಮಾಣಿ. ಪ್ರಕಾಶ ಲಮಾಣಿ ಹಾಗೂ ವಸತಿ ನಿಲಯದ ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಅತಿಥಿ ಅಂಕಣ



ಡಾ. ಟಿ. ಆರ್. ಚಂದ್ರಶೇಖರ

ಲಿಂಗಾಯತ ಧರ್ಮದಲ್ಲಿನ ಎಡಪಂಥೀಯ ಚಿಂತನೆ

ಲಿಂಗಾಯತವು ಹೊಸ ಧರ್ಮವೇನಲ್ಲ. ಅದಕ್ಕೆ ಎಂಟು ನೂರು ವರ್ಷಗಳ ಚರಿತ್ರೆಯಿದೆ. ಇಂದು ಅದಕ್ಕೆ ಅಲ್ಪಸಂಖ್ಯಾತ ಧರ್ಮದ ಸ್ಥಾನಮಾನವನ್ನು ಒತ್ತಾಯಿಸಲಾಗುತ್ತಿದೆ. ಎಡಪಂಥೀಯ ಮೌಲ್ಯವನ್ನು ಒಳಗೊಂಡಿರುವ ಲಿಂಗಾಯತ ಧರ್ಮದ ಚಳುವಳಿಯನ್ನು ನಾವು ಬೆಂಬಲಿಸಬೇಕಾಗಿದೆ. ಈ ಚಳುವಳಿಯ ಮುಂಚೂಣಿಯಲ್ಲಿರುವ ಮುತ್ಸದ್ದಿಗಳಿಗೆ ಆಸೆ-ಆಮಿಷವೊಡ್ಡಿ, ಉನ್ನತ ಹುದ್ದೆ ನೀಡಿ ಚಳುವಳಿಯನ್ನು ದುರ್ಬಲಗೊಳಿಸುವ ಪ್ರಯತ್ನಗಳು ಇಂದು ನಡೆಯುತ್ತಿವೆ. ಕರ್ನಾಟಕದಲ್ಲಿ ಎಡಪಂಥೀಯ ಚಳುವಳಿಯನ್ನು ದಮನ ಮಾಡಲು ನಡೆಯುತ್ತಿರುವ ಪ್ರಯತ್ನದಲ್ಲಿ ವೀರಶೈವ ಪುರೋಹಿತಶಾಹಿ ಮುಂಚೂಣಿಯಲ್ಲಿದೆ. ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಲಿಂಗಾಯತಕ್ಕೆ ಅಲ್ಪಸಂಖ್ಯಾತ ಧರ್ಮದ ಸ್ಥಾನಮಾನವನ್ನು ಒತ್ತಾಯಿಸುವ ಚಳುವಳಿಯೇನಿದೆ ಅದು ಎಡಪಂಥೀಯ ಚಿಂತನೆಯ ಪರವಾಗಿದೆ. ಲಿಂಗಾಯತ-ಕ್ಕೆ ಅಲ್ಪಸಂಖ್ಯಾತ ಧರ್ಮದ ಸ್ಥಾನಮಾನವನ್ನು ನೀಡುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುವ ಹೋರಾಟಕ್ಕೆ ಬೆಂಬಲ ನೀಡೋಣ ಬನ್ನಿ.

ಎಡಪಂಥೀಯ ಚಿಂತನೆಯಲ್ಲಿ ಇದ್ದಂತೆ ಲಿಂಗಾಯತ ಧರ್ಮದಲ್ಲಿ ಕಾಯಕ ಮತ್ತು ಕಾರ್ಮಿಕ ಅಭಿನ್ನ. ಲಿಂಗಾಯತದಲ್ಲಿ ಯಾರಿಗೂ ಕಾಯಕದಿಂದ ವಿನಾಯತಿಯಿಲ್ಲ. ಗುರುಲಿಂಗಜಂಗಮ ಬಂದರೂ ಕಾಯಕವನ್ನು ಬಿಡಲಾಗದು ಎಂದು ಆಯ್ದಕ್ಕಿ ಮಾರಯ್ಯನವರು ಹೇಳಿದರೆ ಗುರುಲಿಂಗಜಂಗಮಕ್ಕೂ ಕಾಯಕ ಕಡ್ಡಾಯ ಎಂದು ನುಲಿಯ ಚಂದಯ್ಯ ಹೇಳುತ್ತಾರೆ. ಜಗತ್ತಿನಲ್ಲಿ ಮೊಟ್ಟಮೊದಲನೆಯ ಕಾರ್ಮಿಕ ಸಂಘಟನೆ ಅನ್ನುವುದು ಯಾವುದಾದರೂ ಇದ್ದರೆ ಅದು ಬಸವಣ್ಣ ಕಟ್ಟಿದ ಕಾಯಕ ಜೀವಿಗಳ ಸಂಘಟನೆಯಾಗಿದೆ. ವಚನಕಾರರು ಜನರ ದೈನಂದಿನ ಸಮಸ್ಯೆಗಳಾದ ಆಹಾರ, ಹಸಿವು, ದುಡಿಮೆ, ಕಾಯಕ, ಕೂಲಿ, ಒಡಲು, ಅಂಬಲಿ ಮುಂತಾದವುಗಳ ಬಗ್ಗೆ ಮಾತನಾಡುತ್ತಾರೆ. ಅವರು ಆರಾಧನೆ ಬಗ್ಗೆ, ಅಭಿಷೇಕದ ಬಗ್ಗೆ, ದಕ್ಷಿಣೆ ಬಗ್ಗೆ ಮಾತನಾಡುವುದಿಲ್ಲ. ಅವರು ಚರ್ಚೆಗೆ ಎತ್ತಿಕೊಳ್ಳುವ ಸಂಗತಿಗಳೆಲ್ಲ ಪದಾರ್ಥವಾದಿ (ಮೆಟೀರಿಯಲಿಸ್ಟ್) ಸಂಗತಿಗಳಾಗಿವೆ. ಗಂಡು-ಹೆಣ್ಣು ಎಂಬ ಲಿಂಗ ಭಿನ್ನತೆಯನ್ನು ಮೀರಿದ ಕಾರ್ಮಿಕ ಸಂಘಟನೆ ಅದಾಗಿತ್ತು. ವಾಸ್ತವವಾಗಿ ಕಾಯಕ ಸಿದ್ಧಾಂತವನ್ನು ಲಿಂಗಾಯತದಲ್ಲಿ ಬದುಕಿದವರು ಆಯ್ದಕ್ಕಿ ಲಕ್ಕಮ್ಮ ಮತ್ತು ಮೋಳಿಗೆ ಮಹಾದೇವಿಯಮ್ಮ. ಲಿಂಗಾಯತದಲ್ಲಿನ ಎಡಪಂಥೀಯ ಚಿಂತನೆಯನ್ನು ಗುರುತಿಸುವುದಕ್ಕೆ ಮತ್ತೇನು ಪುರಾವೆ ಬೇಕು?

ಎರಡನೆಯ ಸಂಗತಿಯೆಂದರೆ ಸಮಾನತೆ ಮೌಲ್ಯ. ಸಮಾನತೆ ಅನ್ನುವುದು ಲಿಂಗಾಯತದಲ್ಲಿ ಬಹುಮುಖಿಯಾದ ಒಂದು ಮೌಲ್ಯವಾಗಿದೆ. ಅದು ಲಿಂಗ ಸಮಾನತೆ, ಸಾಮಾಜಿಕ ಸಮಾನತೆ ಮತ್ತು ಆರ್ಥಿಕ ಸಮಾನತೆಯ ಸಂಗತಿಗಳನ್ನು ಒಳಗೊಂಡಿದೆ. ಜ್ಞಾನ ಅನ್ನುವುದು ಗಂಡೋ ಹೆಣ್ಣೋ ಅನ್ನುವ ಪ್ರಶ್ನೆ ಕೇಳುವ ಗೊಗ್ಗವ್ವೆಯನ್ನು ಸ್ತ್ರೀವಾದಿ ಅನ್ನುವುದಕ್ಕೆ ಹಿಂಜರಿಯಬೇಕಾಗಿಲ್ಲ. ದೇಹಕ್ಕೆ ಮೊಲೆ ಮುಡಿಯಿರುತ್ತದೆ ವಿನಾ ಪ್ರಾಣಕ್ಕೆ ಲಿಂಗ ಬೇಧ ಇರುವುದಿಲ್ಲ ಅನ್ನುವುದು ದಾಸಿಮಯ್ಯಗಳ ಚಿಂತನೆಯಾಗಿದೆ. ಮೇಲು-ಕೀಳು, ಶೌಚ-ಆಚಮನ, ಉಳ್ಳವರು-ಉಳಿದವರು, ಯಜ್ಞೋಪವೀತ-ಹಿಡಿಗೋಲು, ಒಡೆಯರು-ಕಡೆಯವರು ಮುಂತಾದ ಭಿನ್ನತೆಗಳ ಬಗ್ಗೆ ಮಾತನಾಡುವ ಲಿಂಗಾಯತವು ಸಮಾನತೆ ಮೌಲ್ಯದ ಮೇಲೆ ನಿಂತಿದೆ. 'ತಟ್ಟುವ ಮುಟ್ಟುವ ಬೇಧವುಳ್ಳನ್ನಬರ ಶರಣನಲ್ಲ' ಅನ್ನುತ್ತಾನೆ ಸಿದ್ಧರಾಮಣ್ಣ.

ಎಡಪಂಥೀಯ ಚಿಂತನೆಯಂತೆ ಲಿಂಗಾಯತವು ಪದಾರ್ಥವಾದಿ ಸಿದ್ಧಾಂತವೇ ವಿನಾ ಅದು ಪರಮಾರ್ಥ ಬೋಧೆಯಲ್ಲ. 'ಸಂಸಾರವ ಸವೆಯ ಬಳಸುವೆನು' ಅನ್ನುತ್ತಾನೆ ಲಿಂಗಾಯತ ಧರ್ಮದ ಸ್ಥಾಪಕ ಬಸವಣ್ಣ. ಪದಾರ್ಥವಾದಿ ಚಿಂತನೆಯ ಪರಮೋಚ್ಚ ಪ್ರತಿಪಾದಕ ಬಸವಣ್ಣ. 'ಬೆರಳನೆಣಿಸಿ ಪರಮಾರ್ಥ ಹಡೆವಡೆ ಚೋದ್ಯವಲ್ಲವೆ' ಅನ್ನುತ್ತಾನೆ ಬಸವಣ್ಣ. ಲಿಂಗಾಯತವು ಎಡಪಂಥೀಯ ಚಿಂತನೆಯನ್ನು ಒಳಗೊಂಡಿದೆ ಅನ್ನುವುದಕ್ಕೆ ಮತ್ತೇನು ಸಾಕ್ಷಿ ಬೇಕು? ಲಿಂಗಾಯತ ಧರ್ಮವು ವೈದಿಕತೆಯ ಯಜ್ಞ-ಯಾಗಗಳನ್ನು ತಿರಸ್ಕರಿಸಿತು. ಬಸವಣ್ಣನು ಯಜ್ಞದ ಪರಿಭಾಷೆಯಾದ 'ವಿಸರ್ಜನ-ಆಹ್ವಾನ'ಗಳನ್ನು ತಿರಸ್ಕರಿಸಿದ. ಅವನ ಪ್ರಕಾರ 'ಶರಣರ ಪರಿ ಬೇರೆ'. ವೈದಿಕದಲ್ಲಿ ಪರಮಾತ್ಮನು ಪೂಜೆ-ಪುನಸ್ಕಾರಗಳಲ್ಲಿ, ಆರತಿ-ಮಹಾಮಂಗಳಾರತಿಯಲ್ಲಿ, ದಾನ-ದಕ್ಷಿಣೆಯಲ್ಲಿ ಕಂಡುಬಂದರೆ ಮಾದಾರ ಧೂಳಯ್ಯ ಶರಣರಿಗೆ 'ಅಟ್ಟೆಯ ಚುಚ್ಚುವ ಉಳಿಯ ಮೊನೆಯಲ್ಲಿ' ಪರಮೇಶ್ವರ ಪ್ರತ್ಯಕ್ಷನಾಗುತ್ತಾನೆ. ಕಾಯಕವನ್ನು ಪರಮೋಚ್ಚ ಸ್ಥಾನಕ್ಕೇರಿಸಿದ ಕೀರ್ತಿ ಲಿಂಗಾಯತಕ್ಕೆ ಸಲ್ಲಬೇಕು.

ಎಡಪಂಥೀಯ ತತ್ವದಲ್ಲಿನ ಪ್ರಮುಖ ಪ್ರತಿಪಾದನೆ ಸಮಾನತೆ. ಆದರೆ ಅಲ್ಲಿ ಆರ್ಥಿಕ ಸಮಾನತೆಗೆ ಹೆಚ್ಚಿನ ಒತ್ತು ನೀಡಲಾಗುತ್ತದೆ. ಆದರೆ ವಚನಶಾಸ್ತ್ರದಲ್ಲಿ ಸಮಾನತೆಯ ಎಲ್ಲ ಆಯಾಮಗಳಿಗೂ ಮಹತ್ವ ನೀಡಲಾಗಿದೆ. ಎಡಪಂಥೀಯರಂತೆ ವಚನಕಾರರು ಒಡೆತನವನ್ನು ಎಲ್ಲ ಅನ್ಯಾಯಗಳ ಮೂಲವನ್ನಾಗಿ ಗುರುತಿಸಿದ್ದಾರೆ. ದಲಿತ ವಚನಕಾರ್ತಿ ಕಾಳವ್ವೆಯು ಒಡೆಯರನ್ನು 'ತುಡುಗುಣಿಗಳು' ಎಂದು ಕರೆಯುತ್ತಾಳೆ. ಮುಂದುವರಿದು ಅವಳು 'ಊಳಿಗವ ಕೊಂಬಾತ ಭಕ್ತನಲ್ಲ' ಅನ್ನುತ್ತಾಳೆ. ಸಮಾನತೆ ಮತ್ತು ಊಳಿಗತನ ಜೊತೆಯಾಗಿರಲು ಸಾಧ್ಯವಿಲ್ಲ.

ಲಿಂಗಾಯತ ಅನ್ನುವುದು ವೈದಿಕತೆಗೆ ಪ್ರತಿಯಾಗಿ ಕಟ್ಟಿದ ಒಂದು ಸಂಘಟನೆ. ಪ್ರಜ್ಞಾಪೂರ್ವಕವಾಗಿ ಬಸವಣ್ಣನು ತನ್ನ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾನೆ. ಬಸವಣ್ಣನು ವೈದಿಕತೆಯನ್ನು ತಿರಸ್ಕರಿಸಲು ಕಾರಣವನ್ನು ಹೀಗೆ ಕೊಡುತ್ತಾನೆ. ಕೂಡಲಸಂಗಮದೇವರು ಮಾದಾರ ಚನ್ನಯ್ಯನ ಮನೆಗೆ ಊಟಕ್ಕೆ ಹೋದ ಕಾರಣಕ್ಕೆ ವೇದ ನಡುನಡಗುತ್ತಿದೆ. ಏಕೆಂದರೆ ವೇದಗಳು ಕೂಡಲಸಂಗಮ ಮಾದಾರ ಚನ್ನಯ್ಯನ ಮನೆಗೆ ಊಟಕ್ಕೆ ಹೋಗುತ್ತಿರುವುದನ್ನು ಒಪ್ಪಿಕೊಳ್ಳಲು ಸಿದ್ಧವಿಲ್ಲ. ಆದರೆ ಸಮಾನತೆಯನ್ನು ಸರ್ವೋತ್ಕೃಷ್ಟ ಮೌಲ್ಯವನ್ನಾಗಿ ಒಪ್ಪಿಕೊಂಡ ಲಿಂಗಾಯತವು ಮಾದಾರ ಚನ್ನಯ್ಯನನ್ನು 'ಕುಲದಲಿಧಿಕ' ಎಂದು ಪರಿಗಣಿಸಿ ಮಹತ್ವದ ಸ್ಥಾನ ನೀಡಿದೆ.

ಅಲ್ಪಸಂಖ್ಯಾತ ಧರ್ಮವಾಗಿ ಲಿಂಗಾಯತ

ನಮ್ಮ ರಾಷ್ಟ್ರದಲ್ಲಿ ಅಲ್ಪಸಂಖ್ಯಾತ ಸಮುದಾಯಗಳಾದ ಮುಸ್ಲಿಮರು(17.22 ಕೋಟಿ: ಶೇ14.23), ಕ್ರಿಶ್ಚಿಯನ್ನರು(2.30 ಕೋಟಿ: ಶೇ2.30) ಮತ್ತು ಸಿಖ್ ಸಮುದಾಯ(2.08 ಕೋಟಿ: ಶೇ1.72) ನಂತರ ಬರುವ ಅತಿ ದೊಡ್ಡ ಅಲ್ಪಸಂಖ್ಯಾತ ಧರ್ಮ ಲಿಂಗಾಯತ(ಸುಮಾರು ಒಂದು ಕೋಟಿ: ಶೇ0.83). ಇದು ನೂರಕ್ಕೆ ನೂರರಷ್ಟು ವೈದಿಕಕ್ಕೆ ಪ್ರತಿಯಾದುದಾಗಿದೆ. ವೈದಿಕಕ್ಕಿಂತ ಲಿಂಗಾಯತ ಭಿನ್ನ ಎಂದು ಹೇಳುವವರಿದ್ದಾರೆ. ವಾಸ್ತವವಾಗಿ ಅದು ಭಿನ್ನ ಮಾತ್ರವಲ್ಲ, ಅದು ಅದಕ್ಕೆ ಪ್ರತಿಯಾದುದಾಗಿದೆ. ಅದು ವೇದ ಪ್ರಾಮಾಣ್ಯವನ್ನು ತಿರಸ್ಕರಿಸುತ್ತದೆ. ಚಾತುರ್ವರ್ಣಕ್ಕೆ ಅಲ್ಲಿ ಅವಕಾಶವಿಲ್ಲ. ಅಲ್ಲಿ ಪುರೋಹಿತರ ಅವಶ್ಯಕತೆಯಿಲ್ಲ, ತೀರ್ಥಯಾತ್ರೆ-ಲಿಂಗ ದರ್ಶನಗಳು ಬೇಕಾಗಿಲ್ಲ. ಅಸ್ಪೃಶ್ಯತೆಯನ್ನು ಅದು ತಿರಸ್ಕರಿಸಿದೆ. ಮಹಿಳೆಯರಿಗೆ ಇಲ್ಲಿ ಧರ್ಮಕ್ಕೆ ಸಂಬಂಧಿಸಿದಂತೆ ಸಮಾನ ಹಕ್ಕುಗಳನ್ನು ನೀಡಲಾಗಿದೆ. ಲಿಂಗ ಸಂಬಂಧವನ್ನು ಲಿಂಗಾಯತವು ಜೈವಿಕ ನೆಲೆಗೆ ಪ್ರತಿಯಾಗಿ ಸಾಮಾಜಿಕ ನೆಲೆಯಲ್ಲಿ ಪರಿಭಾವಿಸಿಕೊಳ್ಳುತ್ತದೆ. ಸೂತಕ, ಮೈಲಿಗೆ, ಅಸ್ಪೃಶ್ಯತೆಗಳಿಗೆ ಇಲ್ಲಿ ಅವಕಾಶವಿಲ್ಲ.

ಪುರೋಹಿತಶಾಹಿಯ ಆಕ್ರಮಣ

ಇಂದು ಲಿಂಗಾಯತವನ್ನು ಹಿಂದೂ ಧರ್ಮದ ಭಾಗ ಎಂದು ಅದರಲ್ಲಿರುವ ಪುರೋಹಿತಶಾಹಿ ಪ್ರತಿಪಾದಿಸುತ್ತಿದೆ. ಯಾವ ಪುರೋಹಿತಶಾಹಿ ವಿರುದ್ಧ ಬಸವಣ್ಣ ಮತ್ತು ಅವನ ಸಮಕಾಲೀನರು ಹೋರಾಟ ನಡೆಸಿದ್ದರೋ ಅದೇ ಪುರೋಹಿತಶಾಹಿಯು ಇಂದು ಲಿಂಗಾಯತವನ್ನು ಭ್ರಷ್ಟಗೊಳಿಸಲು ಪ್ರಯತ್ನಸುತ್ತಿದೆ. ವಚನಕಾರರು ವೈದಿಕವನ್ನು ಅಜ್ಞಾನದ ತೊಟ್ಟಿಲು ಎಂದು ಕರೆಯುತ್ತಾರೆ. 'ಸಕಲವೇದಶಾಸ್ತ್ರವೆಂಬ ತೊಟ್ಟಿಲ'ನ್ನು ಮುರಿಯಬೇಕು ಎಂದು ಅವರ ಕರೆ ನೀಡುತ್ತಾರೆ. ಇದು ಹಿಂದೂ ಧರ್ಮದ ಭಾಗವಾಗುವುದು ಹೇಗೆ? ಇಂದು ಹಿಂಸೆಯಿಂದ, ಆಕ್ರಮಣಕಾರಿ ಧೋರಣೆಯಿಂದ ಅದನ್ನು ಹತ್ತಿಕ್ಕುವ ಪ್ರಯತ್ನ ನಡೆ-ಯುತ್ತಿದೆ. ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನ ವಿರುದ್ಧ ಪುರೋಹಿತಶಾಹಿ ನಡೆಸಿದ್ದು ಇದನ್ನೇ ತಾನೆ! ಎಡಪಂಥೀಯ ಚಿಂತನೆಯ ಲಿಂಗಾಯತಕ್ಕೂ ಮತ್ತು ಅಸಮಾನತೆಯನ್ನು ಪೋಷಿಸುವ, ತಾರತಮ್ಯವನ್ನು ಒಡಲೊಳಗೆ ಇಟ್ಟುಕೊಂಡಿರುವ **ಪುರೋಹಿಶಾಹಿಗೂ ಎಲ್ಲಿಯ ಸಂಬಂಧ!**

ಲಿಂಗಾಯತವು ಹೊಸ ಧರ್ಮವೇನಲ್ಲ. ಅದಕ್ಕೆ ಎಂಟು ನೂರು ವರ್ಷಗಳ ಚರಿತ್ರೆಯಿದೆ. ಇಂದು ಅದಕ್ಕೆ ಅಲ್ಪಸಂಖ್ಯಾತ ಧರ್ಮದ ಸ್ಥಾನಮಾನವನ್ನು ಒತ್ತಾಯಿಸಲಾಗುತ್ತಿದೆ. ಎಡಪಂಥೀಯ ಮೌಲ್ಯವನ್ನು ಒಳಗೊಂಡಿರುವ ಲಿಂಗಾಯತ ಧರ್ಮದ ಚಳುವಳಿಯನ್ನು ನಾವು ಬೆಂಬಲಿಸಬೇಕಾಗಿದೆ. ಈ ಚಳುವಳಿಯ ಮುಂಚೂಣಿಯಲ್ಲಿರುವ ಮುತ್ಸದ್ದಿಗಳಿಗೆ ಆಸೆ-ಆಮಿಷವೊಡ್ಡಿ, ಉನ್ನತ ಹುದ್ದೆ ನೀಡಿ ಚಳುವಳಿಯನ್ನು ದುರ್ಬಲಗೊಳಿಸುವ ಪ್ರಯತ್ನಗಳು ಇಂದು ನಡೆಯುತ್ತಿವೆ. ಕರ್ನಾಟಕದಲ್ಲಿ ಎಡಪಂಥೀಯ ಚಳುವಳಿಯನ್ನು ದಮನ ಮಾಡಲು ನಡೆಯುತ್ತಿರುವ ಪ್ರಯತ್ನದಲ್ಲಿ ವೀರಶೈವ ಪುರೋಹಿತಶಾಹಿ ಮುಂಚೂಣಿಯಲ್ಲಿದೆ. ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಲಿಂಗಾಯತಕ್ಕೆ ಅಲ್ಪಸಂಖ್ಯಾತ ಧರ್ಮದ ಸ್ಥಾನಮಾನವನ್ನು ಒತ್ತಾಯಿಸುವ ಚಳುವಳಿಯೇನಿದೆ ಅದು ಎಡಪಂಥೀಯ ಚಿಂತನೆಯ ಪರವಾಗಿದೆ. ಈ ಚಳುವಳಿಯ ಮೂಲ ಮಂತ್ರ "ದಯವೇ ಧರ್ಮದ ಮೂಲ". ಇದಕ್ಕೆ ವಿರುದ್ಧವಾದುದೇ ಬಲಪಂಥೀಯ ಚಳುವಳಿ. ದಲಿತರನ್ನು ಒಳಗೊಳ್ಳುವ ಧರ್ಮ ಕರ್ನಾಟಕದಲ್ಲಿ ಯಾವುದಾದರೂ ಇದ್ದರೆ ಅದು ಲಿಂಗಾಯತ ಧರ್ಮ. ನಿಜ, ಇದಕ್ಕೆ ಸಂಬಂಧಿಸಿದಂತೆ ಅಲ್ಲಿ ಅನೇಕ ವಿಕೃತಿಗಳು ಸಂಭವಿಸಿವೆ. ಆದರೆ ಬಸವಣ್ಣ ಪ್ರಣೀತ ಲಿಂಗಾಯತವೇನಿದೆ ಅದು 'ಅಪ್ಪನು ನಮ್ಮ ಮಾದಾರ ಚೆನ್ನಯ್ಯ, ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯ' ಅನ್ನುತ್ತದೆ. ದಲಿತರನ್ನು ಒಳಗೊಳ್ಳುವ, ಸಮಾನತೆಯನ್ನು ಅಡಿಪಾಯವನ್ನಾಗಿ ಮಾಡಿಕೊಂಡಿರುವ, ದಯವನ್ನು ಧರ್ಮದ ಮೂಲವನ್ನಾಗಿ ಮಾಡಿಕೊಂಡಿರುವ, ಎಡಪಂಥೀಯ ಮೌಲ್ಯಗಳನ್ನು ಅಂತರ್ಗತ ಮಾಡಿಕೊಂಡಿರುವ, ಮಹಿಳೆಯರಿಗೆ ಎಲ್ಲ ಧಾರ್ಮಿಕ ಹಕ್ಕುಗಳನ್ನು ನೀಡಿರುವ, ಹಿಂದೂ ಧರ್ಮಕ್ಕೆ ಪ್ರತಿಯಾಗಿರುವ ಲಿಂಗಾಯತಕ್ಕೆ ಅಲ್ಪಸಂಖ್ಯಾತ ಧರ್ಮದ ಸ್ಥಾನಮಾನವನ್ನು ನೀಡುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುವ ಹೋರಾಟಕ್ಕೆ ಬೆಂಬಲ ನೀಡೋಣ ಬನ್ನಿ.



ಡೀಸೆಲ್, ಪೆಟ್ರೋಲ್ ಬೆಲೆಗಳಲ್ಲಿ ಕಡಿತವಾಗಬೇಕು

ಕಚ್ಚಾ ತೈಲದ ಅಂತಾರಾಷ್ಟ್ರೀಯ ಬೆಲೆ ಕಳೆದ ಮೂರು ವರ್ಷಗಳಲ್ಲಿ ಗಣನೀಯ ಪ್ರಮಾಣದಲ್ಲಿ ಕುಸಿದಿದೆ. ಆದರೂ ಪೆಟ್ರೋಲ್–ಡೀಸೆಲ್ ಬೆಲೆಗಳನ್ನು ಇಳಿಸುವ ಬದಲು ಏರಿಕೆ ಏಕೆ? ಅಬಕಾರಿ ಸುಂಕದಲ್ಲಿ ಸತತ ಹಾಗೂ ತೀವ್ರ ಏರಿಕೆ ಮಾಡುವುದು ಯಾವುದೇ ರೀತಿಯಲ್ಲೂ ಅಸಮರ್ಥನೀಯ. ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಸುಂಕಗಳಲ್ಲಿ ಗಣನೀಯ ಕಡಿತ ಮಾಡಬೇಕು ಹಾಗೂ ಕಚ್ಚಾ ತೈಲದ ಬೆಲೆಯಲ್ಲಾದ ಇಳಿಕೆಯ ಪ್ರಯೋಜನ ಗ್ರಾಹಕರಿಗೆ ಸಿಗುವಂತಾಗಬೇಕು.

*** ಪ್ರಕಾಶ್ ಕಾರಟ್**

ಡೀಸೆಲ್ ಮತ್ತು ಪೆಟ್ರೋಲ್‌ನ ಚಿಲ್ಲರೆ ದರಗಳು ಕಳೆದ ಐದು ದಿನಗಳಲ್ಲಿ ಒಂದು ಹೊಸ ಮಟ್ಟದ ಏರಿಕೆಯನ್ನು ತಲುಪಿವೆ. ಅನೇಕ ನಗರಗಳಲ್ಲಿ ಒಂದು ಲೀಟರ್ ಪೆಟ್ರೋಲ್ ಬೆಲೆ ರೂ. 70 ರಿಂದ 79 ಆಗಿದ್ದು ಸರಾಸರಿ ದರ ರೂ.74 ಆಗಿದೆ. ಡೀಸೆಲ್ ಬೆಲೆ ರೂ. 61–62 ಆಗಿದೆ. ಈ ಎರಡೂ ಇಂಧನಗಳ ಬೆಲೆಗಳನ್ನು ಪ್ರತಿದಿನವೂ ಪರಿಷ್ಕರಿಸುವ ನೀತಿಯನ್ನು ಜಾರಿಗೊಳಿಸಿದ ನಂತರ, ಪೆಟ್ರೋಲ್ ಬೆಲೆ ಜುಲೈ 1ರಿಂದೀಚೆಗೆ ರೂ.6.12 ರಷ್ಟು ಏರಿಕೆಯಾಗಿದೆ.

ಭಾರತವು ತನ್ನ ತೈಲ ಅಗತ್ಯಗಳ ಪೂರೈಕೆಗಾಗಿ ಶೇಕಡಾ 85 ರಷ್ಟನ್ನು ಆಮದು ಮಾಡಿಕೊಳ್ಳಬೇಕೆನ್ನುವುದು ಎಲ್ಲರಿಗೂ ತಿಳಿದಿರುವ ಸಂಗತಿ. ಹೀಗಾಗಿ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಭಾರತದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳ ಮೇಲೆ ನೇರ ಪರಿಣಾಮ ಬೀರುತ್ತದೆ. ಕಚ್ಚಾ ತೈಲದ ಅಂತಾರಾಷ್ಟ್ರೀಯ ಬೆಲೆ ಕಳೆದ ಮೂರು ವರ್ಷಗಳಲ್ಲಿ ಗಣನೀಯ ಪ್ರಮಾಣದಲ್ಲಿ ಕುಸಿದಿದೆ. 2012 ಸೆಪ್ಟೆಂಬರ್‌ನಲ್ಲಿ ಒಂದು ಬ್ಯಾರೆಲ್ ಕಚ್ಚಾ ತೈಲದ ಬೆಲೆ 112 ಡಾಲರ್ ಆಗಿತ್ತು. ಆಗ ಭಾರತದಲ್ಲಿ ಒಂದು ಲೀಟರ್ ಪೆಟ್ರೋಲ್‌ಗೆ ಗ್ರಾಹಕರು ತೆರಬೇಕಾಗಿದ್ದದ್ದು 73ರೂ. ಈಗ ಒಂದು ಬ್ಯಾರೆಲ್ ಕಚ್ಚಾ ತೈಲದ ಬೆಲೆ 52 ಡಾಲರ್. ಆದರೂ ಲೀಟರ್ ಪೆಟ್ರೋಲ್ ಬೆಲೆ 74 ರೂ. ಆಗಿದೆ.

ಬೆಲೆಗಳು ಯಾಕೆ ಇಷ್ಟೊಂದು ಜಾಸ್ತಿ? ಆಮದು ಮಾಡಿಕೊಳ್ಳಲಾದ ಕಚ್ಚಾ ತೈಲದ ಬೆಲೆ ಇಳಿದರೂ ಅದರ ಲಾಭವನ್ನು ಗ್ರಾಹಕರಿಗೆ ಯಾಕೆ ವರ್ಗಾಯಿಸುತ್ತಿಲ್ಲ? ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಹೆಚ್ಚು ತೆರಿಗೆಯನ್ನು ಹೇರಿರುವುದೇ ಇದಕ್ಕೆ ಕಾರಣವಾಗಿದೆ. 2014 ನವೆಂಬರ್‌ನಿಂದೀಚೆಗೆ ಮೋದಿ ಸರಕಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು 11 ಬಾರಿ ಏರಿಸಿದೆ. ಇದರಿಂದಾಗಿ ಒಂದು ಲೀಟರ್ ಪೆಟ್ರೋಲ್ ಬೆಲೆಯಲ್ಲಿ 12ರೂ. ಮತ್ತು ಡೀಸೆಲ್ ಬೆಲೆಯಲ್ಲಿ 13ರೂ. ಹೆಚ್ಚಳವಾಗಿದೆ.

ಕಚ್ಚಾ ತೈಲಬೆಲೆಗಳಲ್ಲಿ ಆದ ಎಲ್ಲಾ ಇಳಿಕೆಗಳನ್ನು ಅಬಕಾರಿ ಸುಂಕ ಮತ್ತು ವ್ಯಾಟ್ ಮೂಲಕ ಕೇಂದ್ರ



ಸರಕಾರವೇ ಹೀರಿಕೊಂಡಿದೆ. ಸರಕಾರದ ಅಬಕಾರಿ ಸುಂಕ ವಸೂಲಾತಿ 2014–17ರ ಅವಧಿಯಲ್ಲಿ ರೂ.99,148 ಕೋಟಿಯಿಂದ ರೂ.2,42,691 ಕೋಟಿಗೆ ಏರಿದೆ.


ಈ ರೀತಿಯ ಪರೋಕ್ಷ ತೆರಿಗೆ ಜನ ಸಾಮಾನ್ಯರಿಗೆ ಹೊರೆಯಾಗುತ್ತದೆ. ಡೀಸೆಲ್ ದರಗಳಲ್ಲಿನ ಏರಿಕೆಯಿಂದಾಗಿ ರೈತರು ಮತ್ತು ಸಣ್ಣ ಕೈಗಾರಿಕೆಗಳಿಗೆ ತೊಂದರೆಯಾಗುತ್ತದೆ. ಪೆಟ್ರೋಲ್ ಬೆಲೆಯೇರಿಕೆಯಿಂದ ಸಾರ್ವಜನಿಕ ಮತ್ತು ಖಾಸಗಿ ವಾಹನ ಬಳಕೆದಾರರ ಮೇಲೆ ಪರಿಣಾಮ ಬೀರುತ್ತದೆ.

ಹೆಚ್ಚುವರಿ ತೆರಿಗೆಗಳಿಂದ ಬರುವ ಆದಾಯವು ಮೂಲಸೌಕರ್ಯ ಮತ್ತು ಕಲ್ಯಾಣ ಕಾರ್ಯಕ್ರಮಗಳ ವೆಚ್ಚಕ್ಕೆ ಬೇಕಾಗುತ್ತದೆ ಎನ್ನುವುದು ಸರಕಾರದ ವಾದ. ಆದರೆ ಈ ಅನಿರೀಕ್ಷಿತ ಬೃಹತ್ ಗಳಿಕೆಯನ್ನು ಸರಕಾರ ವ್ಯಯಿಸಿದ ರೀತಿ ಪ್ರಶ್ನಾರ್ಹವಾಗಿದೆ. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಮೂಲ ಸೌಕರ್ಯಗಳ ಅಭಿವೃದ್ಧಿಯ ಯಾವುದೇ ಸುಳಿವು ಕಾಣಿಸುತ್ತಿಲ್ಲ ಮತ್ತು ಸಾರ್ವಜನಿಕ ಶಿಕ್ಷಣ ಹಾಗೂ ಆರೋಗ್ಯ ವ್ಯವಸ್ಥೆಗಳಲ್ಲಿ ನಿರಂತರ ಕುಸಿತ ಕಾಣುತ್ತಿದೆ.

ಬದಲಾಗಿ, ಅಬಕಾರಿ ಸುಂಕವನ್ನು ಇಷ್ಟೊಂದು ತೀಕ್ಷ್ಣವಾಗಿ ಹೆಚ್ಚಿಸದಿದ್ದಿದ್ದರೆ ಗ್ರಾಹಕರ ಕೈಗಳಲ್ಲಿ ಸ್ವಲ್ಪ ಹಣ ಉಳಿಯುತ್ತಿತ್ತು. ಅದರ ಪರಿಣಾಮವಾಗಿ ಜನರ ಖರೀದಿ ಶಕ್ತಿ ಹೆಚ್ಚಾಗುತ್ತಿತ್ತು ಹಾಗೂ ಅನೇಕಾನೇಕ ವಸ್ತುಗಳಿಗೆ ಬೇಡಿಕೆ ಪುನರುಜ್ಜೀವನಗೊಳ್ಳುತ್ತಿತ್ತು. ಅಂತಿಮವಾಗಿ ಅದು ಸರಕಾರದ ಆದಾಯ ಹೆಚ್ಚಳಕ್ಕೆ ಕಾರಣವಾಗಬಹುದಿತ್ತು.

ಕಚ್ಚಾ ತೈಲದ ಅಂತಾರಾಷ್ಟ್ರೀಯ ಬೆಲೆಯಲ್ಲಿ ಕಡಿಮೆಯಾದ ಎಲ್ಲಾ ಹಣವನ್ನು ಗ್ರಾಹಕರಿಗೆ ವರ್ಗಾಯಿಸಬೇಕೆನ್ನುವುದೇನೂ ಈ ವಾದದ ಅರ್ಥವಲ್ಲ. ಸರಕಾರ ಒಂದು ಭಾಗವನ್ನು ತನ್ನ ಆದಾಯವಾಗಿ ಇಟ್ಟುಕೊಳ್ಳಬೇಕು. ಆದರೆ ಅದನ್ನು ನಿರ್ದಿಷ್ಟ ವೆಚ್ಚಗಳಿಗೆಂದು ಗುರುತಿಸಬೇಕು. ಆ ಹಣವನ್ನು 'ಕ್ರೋಡೀಕೃತ ನಿಧಿ'(ಕನ್ಸಾಲಿಡೇಟೆಡ್ ಫಂಡ್)ಗೆ ವರ್ಗಾಯಿಸಬಾರದು. ಯಾಕೆಂದರೆ ಅದನ್ನು ಯಾವ ರೀತಿಯಲ್ಲಿ ಖರ್ಚು ಮಾಡಲಾಯಿತು ಎನ್ನುವುದಕ್ಕೆ ಲೆಕ್ಕವೇ ಇರುವುದಿಲ್ಲ.

ಅಬಕಾರಿ ಸುಂಕದಲ್ಲಿ ಸತತ ಹಾಗೂ ತೀವ್ರ ಏರಿಕೆ ಮಾಡುವುದು ಯಾವುದೇ ರೀತಿಯಲ್ಲೂ ಅಸಮರ್ಥನೀಯ. ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಸುಂಕಗಳಲ್ಲಿ ಗಣನೀಯ ಕಡಿತ ಮಾಡಬೇಕು ಹಾಗೂ ಕಚ್ಚಾ ತೈಲದ ಬೆಲೆಯಲ್ಲಾದ ಇಳಿಕೆಯ ಪ್ರಯೋಜನ ಗ್ರಾಹಕರಿಗೆ ಸಿಗುವಂತಾಗಬೇಕು.



ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಮ್ಸ್ ಆಫ್ ಇಂಡಿಯಾ

ಜೆಎನ್‌ಯುನಲ್ಲಿ ಎಡಶಕ್ತಿಗಳ ಜಯಭೇರಿ–ದಿಲ್ಲಿ ವಿವಿಯಲ್ಲಿ ಬಲಪಂಥಕ್ಕೆ ಮುಖಭಂಗ

ಪುಟ 2 ರಿಂದ

ಜೆಎನ್‌ಯು ಎಡಕೋಟೆಯನ್ನು ಗೆದ್ದುಕೊಂಡೆವು ಎಂದು ಭಾವಿಸಿದ್ದ ಅದು ಕಳೆದ ವರ್ಷ ಅದನ್ನೂ ಕಳಕೊಂಡಿತ್ತು. ಆದರೂ ವಾಜಪೇಯಿ ಇದ್ದಾಗ ಒಂದು ಸ್ಥಾನ ಪಡೆದಿರುವಾಗ ಈಗ ಅವರನ್ನು ಮೀರಿಸುವ ಮೋದಿ ಪ್ರಧಾನ ಮಂತ್ರಿಯಾಗಿರುವಾಗ ಇನ್ನೂ ಹೆಚ್ಚಿನ ಜಯ ಸಾಧ್ಯ ಎಂದು ಅದು ನಿರೀಕ್ಷಿಸಿತ್ತು. ಜತೆಗೆ ಸಂಘ ಪರಿವಾರದ ಮಂತ್ರಿಮಾಗಧರನ್ನೆಲ್ಲ ಕರೆಸಿ ಉಪಕುಲಪತಿಗಳು ವಿವಿ ಆವರಣದಲ್ಲಿ ಯುದ್ಧ ಟ್ಯಾಂಕ್ ಪ್ರತಿಷ್ಠಾಪಿಸಬೇಕು ಎಂದು ಹೇಳಿದ್ದರು. ಆದರೂ ಕೊನೆಗೆ ಅದು ಪಡೆದಿರುವ ಫಲಿತಾಂಶ ಇದು.

ಈ ಬಾರಿ ಅಧ್ಯಕ್ಷರಾಗಿ ಚುನಾಯಿತರಾದ ಗೀತಾಕುಮಾರಿ ಜೆಎನ್‌ಯು ವಿದ್ಯಾರ್ಥಿ ಸಂಘದ ಐದನೇ ಮಹಿಳಾ ಅಧ್ಯಕ್ಷರು. ಈ ಹಿಂದೆ ಎಐಎಸ್‌ಎನ ಮೋನಾ ದಾಸ್ ಎರಡು ಬಾರಿ ಹಾಗೂ ಸುಚೇತಾ ಡೇ ಹಾಗೂ ಎಸ್‌ಎಫ್‌ಐನ ಅಲ್ಬೀನಾ ಶಕೀಲ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು.

ಎಬಿವಿಪಿಗೆ ದಿಲ್ಲಿ ವಿವಿಯಲ್ಲೂ ಮುಖಭಂಗ

ಒಂದು ವಾರದ ನಂತರ ದಿಲ್ಲಿ ವಿಶ್ವವಿದ್ಯಾಲಯದಲ್ಲಿ ನಡೆದ ವಿದ್ಯಾರ್ಥಿ ಸಂಘದ ಚುನಾವಣೆಗಳಲ್ಲಿಯೂ ಎಬಿವಿಪಿ ಕಳೆದ ನಾಲ್ಕು ವರ್ಷಗಳಿಂದ ಹೊಂದಿದ್ದ ಪ್ರಾಬಲ್ಯವನ್ನು ಕಳಕೊಂಡಿದೆ. ದಿಲ್ಲಿ ವಿವಿ ಮೋದಿ ಸರಕಾರ ಬಂದ ಮೇಲೆ ಸಂಘ ಪರಿವಾರದ ಭದ್ರ ಕೋಟೆಯಾಗುತ್ತಿದೆ, 'ರಾಷ್ಟ್ರವಾದಿ' ಪ್ರಾಜೆಕ್ಟುಗಳು ಸೇರಿದಂತೆ ಸಂಘ ಪರಿವಾರದ ಹಲವು ಪ್ರಾಜೆಕ್ಟ್‌ಗಳು ಇಲ್ಲಿ ನಡೆಯುತ್ತಿವೆ. 2014ರಲ್ಲಿ ಮೋದಿ ಸರಕಾರ ಬಂದ ಮೂರು ತಿಂಗಳಲ್ಲಿ ನಡೆದ ಚುನಾವಣೆಗಳಲ್ಲಿ ಅದು ಎಲ್ಲ ನಾಲ್ಕೂ ಪದಾಧಿಕಾರಿಗಳ ಸ್ಥಾನಗಳನ್ನು ಗೆದ್ದುಕೊಂಡಿತು. 2015ರಲ್ಲಿಯೂ ಅದರ ಪುನರಾವರ್ತನೆಯಾಯಿತು. 2016ರಲ್ಲಿ ಜಂಟಿ



ವ್ಯಂಗ್ಯಚಿತ್ರ: ಆರ್.ಪ್ರಸಾದ್

ಕಾರ್ಯದರ್ಶಿಯ ಅಷ್ಟೇನೂ ಮಹತ್ವದಲ್ಲದ ಸ್ಥಾನವನ್ನು ಮಾತ್ರ ಎನ್‌ಎಸ್‌ಯುಐ ಪಡೆಯಿತು, ಉಳಿದ ಮೂರೂ ಅದರ ಪಾಲಾಗಿತ್ತು.

ಆದರೆ ಈ ಬಾರಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಎರಡೂ ಪ್ರಮುಖ ಸ್ಥಾನಗಳಲ್ಲಿ ಅದು ಸೋತಿದೆ, ಅವು ಎನ್‌ಎಸ್‌ಯುಐ ಪಾಲಾಗಿವೆ. ಉಳಿದೆರಡು ಸ್ಥಾನಗಳು ಮಾತ್ರ ಅದರ ಪಾಲಿಗೆ ಬಂದಿದೆ. ವಾಸ್ತವವಾಗಿ ಅದಕ್ಕೆ ದಕ್ಕಿರುವುದು ಒಂದೇ ಸ್ಥಾನ, ಇನ್ನೊಂದರಲ್ಲೂ ತಾನು ಗೆದ್ದಿದ್ದೇನೆ, ಈ ಬಗ್ಗೆ ಕೋರ್ಟಿನಲ್ಲಿ ಪ್ರಶ್ನಿಸುವುದಾಗಿ ಎನ್‌ಎಸ್‌ಯುಐ ಹೇಳಿಕೊಂಡಿದೆ. ಈ ಚುನಾವಣೆ ನಡೆಸುತ್ತಿದ್ದ ಚುನಾವಣಾ ಆಯೋಗದ ಅಧಿಕಾರಿಗಳು ಫಲಿತಾಂಶವನ್ನು ತಿಳಿಸಲು ಹಿಂದೇಟು ಹಾಕುತ್ತಿದ್ದರು, ನೆರೆದಿದ್ದ ಪತ್ರಕರ್ತರು ಗಲಾಟೆ ಮಾಡಿದ ನಂತರವೇ ಫಲಿತಾಂಶ ತಿಳಿಸಿದರಂತೆ.

ವಿಶ್ವವಿದ್ಯಾಲಯಗಳಲ್ಲಿ ಬಲಪಂಥಧ ವಿರುದ್ಧ ವಿದ್ಯಾರ್ಥಿಗಳ ತಿರುಗೇಟು ಆರಂಭವಾದಂತಿದೆ ಎಂದು 'ಫಸ್ಟ್‌ಪೋಸ್ಟ್' ಪತ್ರಿಕೆ ಅಭಿಪ್ರಾಯ ಪಟ್ಟಿದೆ.

ಇದಕ್ಕೆ ಮೊದಲು ಬಲಪಂಥೀಯರ ಮತ್ತೊಂದು ಭದ್ರಕೋಟೆಯಾದ ರಾಜಸ್ತಾನದ ವಿಶ್ವವಿದ್ಯಾಲಯದಲ್ಲಿ ನಾಲ್ಕರಲ್ಲಿ ಮೂರು ಪ್ರಮುಖ ಪದಾಧಿಕಾರಿ ಸ್ಥಾನಗಳನ್ನು ಕಳಕೊಂಡಿದೆ. ಅಧ್ಯಕ್ಷರಾಗಿ ಚುನಾಯಿರಾದವರು ಸ್ವತಂತ್ರ ಅಭ್ಯರ್ಥಿಯಂತೆ, ಈ ಮೊದಲು ಎಬಿವಿಪಿಯಲ್ಲಿದ್ದನಂತೆ.

ರಾಜಸ್ತಾನದ ವಿವಿಧ ಕಾಲೇಜುಗಳ ಚುನಾವಣೆಗಳ ಫಲಿತಾಂಶಗಳೂ ಇದುವರೆಗೆ ಇದ್ದ ಎಬಿವಿಪಿ ಪ್ರಭಾವ ಇಳಿಮುಖವಾಗಿದೆ ಎಂಬುದನ್ನು ತೋರಿಸಿದೆ. ಅಂತಹ 17 ಕಾಲೇಜುಗಳಲ್ಲಿ ಎಸ್‌ಎಫ್‌ಐ ಅಧ್ಯಕ್ಷ ಸ್ಥಾನಗಳಲ್ಲಿ ಗೆದ್ದಿದೆ. 4ರಲ್ಲಿ ಅವಿರೋಧವಾಗಿ ಅಧ್ಯಕ್ಷ ಸ್ಥಾನ ಪಡೆದಿದೆ. ಉಳಿದ ಐದು ಕಾಲೇಜುಗಳಲ್ಲಿ ಪ್ರಧಾನ ಕಾರ್ಯದರ್ಶಿ, ಉಪಾಧ್ಯಕ್ಷ ಸ್ಥಾನಗಳನ್ನು ಪಡೆದಿದೆ.

ಆಮ್ ಆದ್ಮಿ ಪಕ್ಷದ ವಿದ್ಯಾರ್ಥಿ ಸಂಘಟನೆ ಕೂಡ 7 ಕಾಲೇಜುಗಳಲ್ಲಿ ಅಧ್ಯಕ್ಷ ಸ್ಥಾನದ ಚುನಾವಣೆಗಳಲ್ಲಿ ಎಬಿವಿಪಿಯನ್ನು ಸೋಲಿಸಿರುವುದಾಗಿ ಹೇಳಿದೆ.

ಅದಕ್ಕೆ ಮೊದಲು ಕೇರಳದಲ್ಲಿ ಎಬಿವಿಪಿ ಒಂದು 'ಚರಿತ್ರೆ' ಸೃಷ್ಟಿಸಿತ್ತು! ತ್ರಿಶೂರಿನ ಶ್ರೀ ಕೇರಳ ವರ್ಮ ಕಾಲೇಜಿನ ಗಣಿತಶಾಸ್ತ್ರ ಅಸೋಸಿಯೇಶನ್‌ನ ಚುನಾವಣೆಗಳಲ್ಲಿ ಎಬಿವಿಪಿ ಅಭ್ಯರ್ಥಿ ಸೊನ್ನೆ ಮತಗಳನ್ನು ಪಡೆದರು, ಅಂದರೆ ಸ್ವತಃ ಅವರ ಮತವೂ ಬೇರೆ ಅಭ್ಯರ್ಥಿಗೆ ಹೋಗಿದೆ!

ಇತ್ತೀಚೆಗೆ ನಡೆದ ತ್ರಿಪುರಾದಲ್ಲಿನ ವಿದ್ಯಾರ್ಥಿ ಸಂಘಗಳ ಚುನಾವಣೆಗಳಲ್ಲಿ ಎಸ್‌ಎಫ್‌ಐ ಮತ್ತು ಅದರ ಸೋದರ ಸಂಘಟನೆಯಾದ ಟಿಎಸ್‌ಯು(ಬುಡಕಟ್ಟು ವಿದ್ಯಾರ್ಥಿ ಸಂಘ) ಎಲ್ಲ 22 ಸರಕಾರಿ ಕಾಲೇಜುಗಳಲ್ಲಿ ಭಾರೀ ವಿಜಯ ಗಳಿಸಿದೆ, 778 ಸ್ಥಾನಗಳಲ್ಲಿ 751 ರಲ್ಲಿ ಗೆದ್ದಿದೆ. ಬಹಳಷ್ಟು ಸದ್ದು ಮಾಡುತ್ತಿದ್ದ ಎಬಿವಿಪಿಗೆ ಕೇವಲ 27 ಸ್ಥಾನಗಳನ್ನು ಗೆಲ್ಲಲು ಸಾಧ್ಯವಾಗಿದೆ. ಎನ್‌ಎಸ್‌ಯುಐ ಯಾವುದೇ ಸ್ಥಾನವನ್ನು ಪಡೆದಿಲ್ಲ.

ಆಳುವ ವರ್ಗಗಳಿಗೆ ಎಚ್ಚರಿಕೆ 40 ಸಾವಿರ ಕಾರ್ಮಿಕರ ಚಾರಿತ್ರಿಕ ಮಹಾನಡೆ



ಎಸ್. ವರಲಕ್ಷ್ಮಿ

ಕರ್ನಾಟಕ ರಾಜ್ಯದ ಮೂರುವರೆ ಕೋಟಿ ಕಾರ್ಮಿಕರ ಪರವಾಗಿ ಸಿಐಟಿಯು ಸೆಪ್ಟೆಂಬರ್ 14 ರಂದು ಕರೆಯನ್ನು ಕೊಟ್ಟಿತ್ತು. ಈ ಕರೆ–ಯ ಮೇರೆಗೆ ಸಿಐಟಿಯು ಸಂಯೋಜಿತ 178ಕ್ಕೂ ಹೆಚ್ಚು ಸಂಘಟನೆಗಳು ಒಂದು ದಿನದ ಕೆಲಸವನ್ನು ಸ್ಥಗಿತಗೊಳಿಸಿ ಈ ಹೋರಾಟದಲ್ಲಿ ಪಾಲ್ಗೊಂಡಿದ್ದರು. ರಾಜ್ಯದ ಮೂವತ್ತು ಜಿಲ್ಲೆಗಳಿಂದ ಸಂಘಟಿತ, ಅಸಂಘಟಿತ, ಗುತ್ತಿಗೆ ಮತ್ತು ಯೋಜನಾ ಕಾರ್ಮಿಕರು ಹಾಗೂ ಸಾರಿಗೆ ಕಾರ್ಮಿಕರ ವಿಭಾಗಗಳಿಂದ ಸುಮಾರು ನಲವತ್ತು ಸಾವಿರಕ್ಕೂ ಹೆಚ್ಚು ಮಹಿಳೆ ಮತ್ತು ಪುರುಷ ಕಾರ್ಮಿಕರು ಪಾಲ್ಗೊಂಡಿದ್ದರು.

ಸೆ. 14 ರಂದು ಹತ್ತು ಘಂಟೆಯೊಳಗೆ ಮೆಜೆಸ್ಟಿಕ್ ರೈಲು ನಿಲ್ದಾಣದ ಸುತ್ತ ಮುತ್ತ ಜನರಲ್ಲಿ ರ‍್ಯಾಲಿಗೆ ಬಂದವರು ಬೆಳಿಗ್ಗೆ 9 ಘಂಟೆಗೆ ಸೂರ್ಯನ ಕಿರಣಗಳು ಜನರ ಮೇಲೆ ಸಿಟ್ಟಾದಂತೆ ಜನರಿಗೆ ತಾಕುತ್ತಿದ್ದವು. ಆದರೂ ಅವರು ಯಾವುದನ್ನೂ ಗಣನೆಗೆ ತೆಗೆದುಕೊಳ್ಳದೇ ಗುಂಪು ಗುಂಪಾಗಿ ಸೇರುತ್ತಿದ್ದರು. ಬಳ್ಳಾರಿ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಬೀದರ್, ಗುಲ್ಬರ್ಗ, ರಾಯಚೂರು, ಗದಗ, ಬೆಳಗಾವಿ, ಬಾಗಲಕೋಟೆ, ಕೋಲಾರ, ಚಾಮರಾಜ ನಗರ, ಹಾಸನ, ಮೈಸೂರು ಕೊಡಗು, ಮಂಡ್ಯ ಮುಂತಾದ ದೂರದ ಜಿಲ್ಲೆಗಳಿಂದ ಅಂಗನವಾಡಿ, ಬಿಸಿಯೂಟ, ಆಶಾ, ಹಮಾಲಿ, ಕಟ್ಟಡ, ಪ್ಲ್ಯಾಂಟೇಶನ್, ಪಂಚಾಯ್ತಿ, ಟೈಲ್ಸ್, ಗೋಡಂಬಿ, ಮುನ್ಸಿಪಲ್ ಕಾರ್ಮಿಕರು, ಬೆಂಗಳೂರು 3 ಜಿಲ್ಲೆಗಳ, ಮೈಸೂರು, ತುಮಕೂರುಗಳಲ್ಲಿರುವ ವಿವಿಧ ಕೈಗಾರಿಕೆ, ಕಾರ್ಖಾನೆಗಳ ಕಾರ್ಮಿಕರ ದಿನನಿತ್ಯದ ಕೆಲಸ ಸ್ಥಗಿತ ಗೊಳಿಸಿ, ಸಂಬಳ ಕಳೆದುಕೊಂಡು ಸಮವಸ್ತ್ರ ಬ್ಯಾನರ್ ಘೋಷಣೆಗಳೊಂದಿಗೆ ತಮ್ಮ ಆಶೋತ್ತರಗಳನ್ನು ವ್ಯಕ್ತಪಡಿಸಲು ಧಾವಿಸಿದ್ದರು.

ಬೆಳಿಗ್ಗೆ 11.30 ಕ್ಕೆ ಹೊರಟ ಸಹಸ್ರಾರು ಜನರು ಘೋಷಣೆಗಳೊಂದಿಗೆ ಶೇಷಾದ್ರಿ ಜಂಕ್ಷನ್ ಗೆ ಬಂದು ಸೇರಿದರು. ಸಾಕಷ್ಟು ಸ್ಥಳಾವಕಾಶದ ಕೊರತೆ ಇದ್ದುದರಿಂದ ರಸ್ತೆಗಳೆಲ್ಲಾ ಬಂದ್ ಆಗಬೇಕಾದ ಸ್ಥಿತಿ ನಿರ್ಮಾಣವಾಯಿತು.

ಮಹಾನಡೆ ಯಾಕೆ?:

2008ರಿಂದ ರಾಜ್ಯದಲ್ಲಿ ಸಮಾನ ಕನಿಷ್ಟ ವೇತನಕ್ಕಾಗಿ ಇಂತಹ ಚಳುವಳಿಗಳನ್ನು ವಿವಿಧ ಸ್ವರೂಪಗಳಲ್ಲಿ ಮತ್ತು ವಿವಿಧ ಹಂತಗಳಲ್ಲಿ ತೀವ್ರವಾಗಿ ನಡೆಸಿಕೊಂಡು ಬರಲಾಗುತ್ತಿದೆ. 7 ನೇ ವೇತನ ಆಯೋಗ 18000 ಕ್ಕಿಂತ ಕಡಿಮೆ ಹಣಕ್ಕೆ ಯಾರನ್ನೂ ದುಡಿಸಬಾರದೆಂಬ ಶಿಫಾರಸ್ಸನ್ನು ಸರ್ಕಾರಗಳಿಗೆ ನೀಡಿದೆ. ಆದರೆ ಇದೀಗ 2 ವರ್ಷ ಕಳೆದರೂ ರಾಜ್ಯದ ಯಾವುದೇ ಶೆಡ್ಯೂಲ್ ಎಂಪ್ಲೊಯ್ ಮೆಂಟ್ ಮತ್ತು ಇತರ ವಿಭಾಗಗಳಿಗೆ ಜಾರಿ ಮಾಡಿಲ್ಲ. ಜೀವನಾವಶ್ಯಕತೆಯ ಆಧಾರದಲ್ಲಿ ಮೂಲ ವೇತನ 18000, ತುಟ್ಟಿ ಭತ್ಯೆ 1913.40, ಒಟ್ಟು 19913.40 (ಗ್ರಾಹಕ ಬೆಲೆ ಸೂಚ್ಯಂಕದ 6843 ಅಂಶಗಳಿಗೆ ಗಳಿಗೆ) 2017 ಎಪ್ರಿಲ್ ನಿಂದ ನಿಗದಿಯಾಗಬೇಕು.

ಕನಿಷ್ಟ ವೇತನದ ಪರಿಷ್ಕರಣೆ ಕೆಲವು ಉದ್ಯಮಗಳಿಗೆ ಒಂದೊಂದು ಬಾರಿ ವೇತನ ವೇತನ ಪರಿಷ್ಕರಣೆ ಆಗುವುದರಿಂದ ಮಾಲಿಕರು ಸುಲಭವಾಗಿ ಕೋರ್ಟಿಗೆ ಹೋಗಿ ತಡೆಯಾಜ್ಞೆ ತರುವ ಮುಖಾಂತರ 2–3 ವರ್ಷಗಳಾದರೂ ಕಾರ್ಮಿಕರಿಗೆ ನ್ಯಾಯ ಸಿಗುವುದಿಲ್ಲವಾದ್ದರಿಂದ ದೆಹಲಿ ಮಾದರಿಯಲ್ಲಿ ಷೆಡ್ಯೂಲ್ ಎಂಪ್ಲೊಯ್ಮೆಂಟ್ ಪಟ್ಟಿಯಲ್ಲಿರುವ 84 ಕೈಗಾರಿಕೆಗಳಿಗೆ ಏಕಕಾಲದಲ್ಲಿ ಕನಿಷ್ಟ ವೇತನವನ್ನು ಪರಿಷ್ಕರಣೆ ಮಾಡಬೇಕು.

ರಾಜ್ಯದ ಕಾರ್ಖಾನೆಗಳಲ್ಲಿ 2009 ರಿಂದ 2013 ರವರೆಗಿನ 4 ವರ್ಷಗಳ ನಿವ್ವಳ ಮೌಲ್ಯದಲ್ಲಿ ಮಾಲಿಕರ ಲಾಭದ ಪಾಲು 60.40%, ಕಾರ್ಮಿಕರ ಪಾಲು 16.45 ರಷ್ಟು ಮಾತ್ರ. ಇದರಿಂದ ರಾಜ್ಯದ ಆರ್ಥಿಕ ಅಸಮಾನತೆ ಹೆಚ್ಚಿ ಜನರ ಕೊಂಡು ಕೊಳ್ಳುವ ಸಾಮರ್ಥ್ಯ ಕಡಿಮೆಯಾಗುತ್ತಿದೆ. ಇದರಿಂದ ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಮಾರಕವಾಗುತ್ತಿದೆ.

ಕನಿಷ್ಟ ವೇತನವನ್ನು ಹೆಚ್ಚಿಸಿದರೆ ರಾಜ್ಯದಲ್ಲಿ ಬಂಡವಾಳಗಾರರು ಬಂಡವಾಳ ಹೂಡಲು ಹೊಸ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಹಿಂದೇಟು ಹಾಕುತ್ತಾರೆ ಎಂಬ ವಾದಗಳನ್ನು ಆಳುವ ವರ್ಗಗಳು ಮೊದಲಿನಿಂದಲೂ ಮಾಡುತ್ತಲೇ ಬಂದಿದ್ದಾರೆ. ಈಗಲೂ ಮಾಡುತ್ತಿದ್ದಾರೆ. ಆದರೆ ಇದು ಸುಳ್ಳು ಎಂದು ಸಿಐಟಿಯು ವಾದಿಸುತ್ತದೆ.



ಖಾಯಂ ನೌಕರರಿಗೆ ಕೊಡುವ ಸೌಲತ್ತುಗಳನ್ನು ಇಲ್ಲದಂತೆ ಮಾಡಿ, ಅಥವಾ ಸೌಲತ್ತುಗಳಿಂದ ವಂಚಿಸಿ ಉತ್ಪಾದನೆ ಮತ್ತು ಸೇವೆಯನ್ನು ಪಡೆಯಲು ರೂಪಿಸಿರುವ ನೀತಿಯೇ ಗುತ್ತಿಗೆ ಪದ್ಧತಿ. 1970 ರ ನಂತರ ರಾಜ್ಯದಲ್ಲಿ ಗುತ್ತಿಗೆ ಪದ್ಧತಿ ನಿಯಂತ್ರಣ ಮತ್ತು ನಿಷೇಧ ಕಾಯ್ದೆಯ ಎಲ್ಲಾ ನಿಯಮಗಳನ್ನು ಮೀರಿ ಖಾಸಗಿ ಮಾಲಿಕರನ್ನು ಮೀರಿಸುವಂತೆ ಸರ್ಕಾರಗಳು ಸೇರಿದಂತೆ ಎಲ್ಲರೂ ಗುತ್ತಿಗೆ ಕಾರ್ಮಿಕರನ್ನು ಶೋಷಿಸುತ್ತಿವೆ. ಹಾಗೂ ಬಳಸಿ ಬಿಸಾಡುತಿರುವ ನೀತಿಗೆ ತಿಲಾಂಜಲಿ ಇಡಲು ಆಸ್ಸಾಂ ಮತ್ತು ತಮಿಳುನಾಡು ಮಾದರಿಯಲ್ಲಿ ಈ ಕಾರ್ಮಿಕರನ್ನು ಖಾಯಂ ಮಾಡಲು ಕಾನೂನು ರಚಿಸಬೇಕು.

ಅಸಂಘಟಿತ ಕ್ಷೇತ್ರದ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ, ಕೇಂದ್ರ ಸರ್ಕಾರದ ಕಾರ್ಮಿಕ ಕಾನೂನುಗಳ ತಿದ್ದುಪಡಿ ವಿರೋಧಿಸಿ, ಸಂಘಗಳ ಮಾನ್ಯತೆಗೆ ಒತ್ತಾಯಿಸಿ, ಸಾರ್ವಜನಿಕ ಕೈಗಾರಿಕೆಗಳ ಖಾಸಗಿಕರಣ ವಿರೋಧಿಸಿ, ಯೋಜನಾ ಕಾರ್ಮಿಕರನ್ನು ಕನಿಷ್ಟ ವೇತನ ಕಾಯ್ದೆಯಡಿಯಲ್ಲಿ ತರಲು, ಎಲ್ಲಾ ಜಿಲ್ಲೆಗಳಲ್ಲಿ ಕಾರ್ಮಿಕ ನ್ಯಾಯಾಲಯಗಳ ಸ್ಥಾಪನೆಗಾಗಿ, ಕರ್ನಾಟಕ ಲೇಬರ್ ಕಾನ್ಫರೆನ್ಸ್ ಮಾಡಲು, ಉಚಿತ ವಸತಿ ವ್ಯವಸ್ಥೆಗೆ ಒತ್ತಾಯಿಸಿ ಈ ಹೋರಾಟಗಳನ್ನು ನಡೆಸಲಾಗುತ್ತಿದೆ.

2014 ಜನವರಿ 20 ರಂದು ಇಂತಹದೇ ಹೋರಾಟವನ್ನು ನಡೆಸಿದಾಗ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಜನವರಿ 23 ರಂದು ಜಂಟಿ ಸಭೆಯನ್ನು ನಡೆಸಲಾಗಿತ್ತು. ಆ ಸಭೆಯ ನಿರ್ದೇಶನದಂತೆ,

1. ಗುತ್ತಿಗೆ ಕಾರ್ಮಿಕರನ್ನು ಖಾಯಂ ಮಾಡಲು ಆಸ್ಸಾಂ ಹಾಗೂ ತಮಿಳುನಾಡು ಮಾದರಿಯ ಕರಡು ಮಸೂದೆ ಸಿದ್ಧ ಪಡಿಲಾಗಿದೆ.
2. ಕಾರ್ಮಿಕ ಇಲಾಖೆಯು ನಿಯೋಗ ಪಶ್ಚಿಮ ಬಂಗಾಳಕ್ಕೆ ಭೇಟಿ ಕೊಟ್ಟು ರಾಜ್ಯದ 1.25 ಲಕ್ಷ ಜನರಿಗೆ ಭವಿಷ್ಯನಿಧಿಯನ್ನು ಕೊಡಲು ಕರಡು ಮಸೂದೆ ತಯಾರಿಸಲಾಗಿದೆ.
3. ರಾಜ್ಯದಲ್ಲಿ ಖಾಸಗಿ ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ 58 ವರ್ಷಕ್ಕೆ ನಿವೃತ್ತಿ ಮಾಡುವ ವಯಸ್ಸನ್ನು 60ಕ್ಕೇರಿಸಲು ಚರ್ಚಿಸಲಾಗಿತ್ತು.
4. ರಾಜ್ಯದಲ್ಲಿ ಕರ್ನಾಟಕ ಲೇಬರ್ ಕಾನ್ಫರೆಸ್ ನಡೆಸಲು (ಕೆ.ಎಲ್.ಸಿ) ಸಂಘಗಳಿಗೆ ಮಾನ್ಯತೆ ಕೊಡಲು,
5. ಶೆಡ್ಯೂಲ್ ಎಂಪ್ಲೊಯ್ ಮೆಂಟ್ ನಲ್ಲಿರುವ ಕಾರ್ಖಾನೆ ಕಾರ್ಮಿಕರಿಗೆ ಏಕಕಾಲದಲ್ಲಿ ಕನಿಷ್ಟ ಕೂಲಿ ಪ್ರಕಟಿಸಲು ಚರ್ಚಿಸಲಾಗಿತ್ತು. ನಂತರದಲ್ಲಿ ಕಾರ್ಮಿಕ ಇಲಾಖೆಯಲ್ಲಿ ಆದಂಥ ಭಾರೀ ಬದಲಾವಣೆಗಳಿಂದ ಹಾಗೂ ಆಳುವ ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದ ಈ ಚರ್ಚೆಗಳು ಮತ್ತೆ ನೆನೆಗುದಿಗೆ ಬಿದ್ದವು.

ಕಾರ್ಮಿಕರ ಸಂಘಟಿತ ಶಕ್ತಿಯನ್ನು ಪ್ರದರ್ಶಿಸಲೇ ಬೇಕೆಂದು ಸಿಐಟಿಯು ರಾಜ್ಯ ಸಮಿತಿ ನಿರ್ಧರಿಸಿ ರಾಜ್ಯಾದ್ಯಂತ ಕಾರ್ಮಿಕರ ಮಧ್ಯೆ ವ್ಯಾಪಕ ಪ್ರಚಾರವನ್ನು ನಡೆಸಲು ತೀರ್ಮಾನಿಸಿ ರಾಜ್ಯ, ಜಿಲ್ಲಾ ಮಟ್ಟದ ಕಾರ್ಯಾಗಾರಗಳು, ರಾಜ್ಯ ಮತ್ತು ಜಿಲ್ಲಾ ಮಟ್ಟದ ಜಾಥಾಗಳನ್ನು ನಡಿಸಿ ಸೆ. 14 ರಂದು ಕೆಲಸವನ್ನು ಸ್ಥಗಿತಗೊಳಿಸಿ ಕಾರ್ಮಿಕರು ಈ ಪ್ರತಿಭಟನೆಗೆ ಬಂದಿದ್ದರು. ಆಳುವ ಪ್ರಭುಗಳ ಬಂಡವಾಳಗಾರರ ಗಮನಸೆಳೆಯುವುದೇ ಅತ್ಯಂತ ದೊಡ್ಡ ಸವಾಲಾಗಿತ್ತು. ಆದ್ದರಿಂದಲೇ ಶೇಷಾದ್ರಿ ಜಂಕ್ಷನ್ ನ್ನು ಮತ್ತೆ ತಡೆಯಬೇಕಾಯಿತು. ಆ ಜಂಕ್ಷನ್ ನ್ನು ತಡೆಯುವ ಮುಖಾಂತರ ಕಾರ್ಮಿಕರ ಒಗ್ಗಟ್ಟಿನ ಶಕ್ತಿಯನ್ನು

ಪುಟ 15 ಕ್ಕೆ







'ನಾವೆಲ್ಲ ಗೌರಿ' ಮೊಳಗಿಸಿದ ಫ್ಯಾಸಿಸ್ಟ್–ವಿರೋಧಿ ಶಕ್ತಿಗಳ ಮಹಾಸಂಗಮ

ಗೌರಿ ಲಂಕೇಶ್ ಹತ್ಯೆಯ ಮರುದಿನವೇ ರೂಪತಳೆದ "ಗೌರಿ ಲಂಕೇಶ್ ಹತ್ಯಾ ವಿರೋಧಿ ವೇದಿಕೆ" ಕೆಲವೇ ದಿನಗಳ ತಯಾರಿಯ ನಂತರ ಸೆಪ್ಟೆಂಬರ್ 12ರಂದು (ಹತ್ಯೆಯ ಒಂದು ವಾರದಲ್ಲೇ) ಬೆಂಗಳೂರಿನಲ್ಲಿ ಏರ್ಪಡಿಸಿದ "ಖಂಡನೆ–ಪ್ರತಿರೋಧ ಸಮಾವೇಶ" ಗೌರಿಯ ಹಂತಕರ ಮತ್ತು ಅವರ ಪ್ರಾಯೋಜಕರ ನಿರೀಕ್ಷೆಗಳನ್ನೆಲ್ಲಾ ಹುಸಿ ಮಾಡಿರಬೇಕು. ಹತ್ತು ಸಾವಿರಕ್ಕೂ ಹೆಚ್ಚು ಜನರು ಬೆಂಗಳೂರಿನ ಕೇಂದ್ರೀಯ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಸೆಂಟ್ರಲ್ ಕಾಲೇಜು ಮೈದಾನದ ವರೆಗೆ 2 ಕಿ.ಮಿ. ಮೆರವಣಿಗೆಯಲ್ಲಿ ಭಾಗವಹಿಸಿದರು. ಮೆರವಣಿಗೆ ಮತ್ತು ಆ ನಂತರದ ಸಮಾವೇಶದ ಉದ್ದಕ್ಕೂ ಗೌರಿ ಲಂಕೇಶ್ ಹತ್ಯೆಯ ವಿರುದ್ಧ ರೋಶ ಮತ್ತು ಪ್ರತಿರೋಧದ ಕೆಚ್ಚು ವ್ಯಕ್ತವಾಯಿತು. ಅದೊಂದು ಶೋಕಸಭೆಯಾಗಿರಲಿಲ್ಲ. ಸಂಕಲ್ಪ ಸಭೆಯಾಗಿತ್ತು. ರೋಷ ಮತ್ತು ಗಟ್ಟಿ ಪ್ರತಿರೋಧಗಳ, ಗೌರಿಯ ಜೀವನ ಮೌಲ್ಯಗಳನ್ನು ಎತ್ತಿ ಹಿಡಿಯುವ, ಅವರ ಅಪೂರ್ಣ ಕೆಲಸವನ್ನು ಮುನ್ನಡೆಸುವ ಧೃಢ ನಿರ್ಧಾರ ಕಂಡು ಬಂತು. "ಗೌರಿ ಲಂಕೇಶ್ ಹತ್ಯಾ ವಿರೋಧಿ ವೇದಿಕೆ" ಪತ್ರಕರ್ತರ, ಸಾಹಿತಿ–ಕಲಾವಿದರ, ವಿದ್ಯಾರ್ಥಿಗಳ, ಸಾಮಾಜಿಕ ಹೋರಾಟಗಾರರ, ಚಿಂತಕರ, ಪ್ರಗತಿಪರರ, ಸಾಮಾಜಿಕ ಚಳುವಳಿಗಳ, ಎಡಪಂಥೀಯ ವ್ಯಕ್ತಿಗಳ ಸಂಘಟನೆಗಳ ಪಕ್ಷಗಳ ಮಹಾಸಂಗಮವಾದ್ದರಿಂದ ಇದು ಸಾಧ್ಯವಾಗಿದೆ.

ಮೆರವಣಿಗೆಯಲ್ಲಿ "ನಾನೂ ಗೌರಿ – ನಾವೆಲ್ಲ ಗೌರಿ" ಎಂಬ ಘೋಷಣೆ ಮುಗಿಲು ಮುಟ್ಟಿದ್ದಲ್ಲದೆ, ಆ ಘೋಷಣೆ ಹೊತ್ತ ಭಿತ್ತಿಪತ್ರಗಳು, ಹೆಡ್ ಬ್ಯಾಂಡ್ ಗಳು ಸಾವಿರಾರು ಸಂಖ್ಯೆಯಲ್ಲಿ ಕಂಡು ಬಂದವು. "ನಾವೆಲ್ಲ ಗೌರಿ, ನಮಗೆ ಗುಂಡಿಕ್ಕಿ", "ಗೌರಿ ಲಂಕೇಶರನ್ನು ಕೊಲ್ಲಬಹುದು, ಅವರ ವಿಚಾರಗಳನ್ನಲ್ಲ", "ಗೌರಿ ಹತ್ಯೆ ವ್ಯಕ್ತಿಯ ಹತ್ಯೆಯಲ್ಲ, ವಿಚಾರಗಳ ಹತ್ಯೆ", "ಗೌರಿ ಅಮರ್ ರಹೇ" ಮುಂತಾದ ಘೋಷಣೆಗಳು ಕೇಳಿ ಬಂದವು. ವಿವಿಧ ಸಾಂಸ್ಕೃತಿಕ ಸಂಘಟನೆಗಳು, ಜಾನಪದ ಕಲಾತಂಡಗಳು, ಭಜನೆ, ಹೋರಾಟದ ಹಾಡುಗಳು, ಕ್ರಾಂತಿಗೀತೆಗಳನ್ನು ಹಾಡುತ್ತಾ, ಗೌರಿಯ ಬಗ್ಗೆ ಗೀತರೂಪಕ ಪ್ರದರ್ಶಿಸುತ್ತಾ ಮೆರವಣಿಗೆಯಲ್ಲಿ ಸಾಗಿದರು. ಸಮಾವೇಶದಲ್ಲೂ ಕೊಡೆಗಳಿಂದ ಮಾಡಿದ ಕಲಾಕೃತಿಯ ಮತ್ತು ಗೌರಿ ಹತ್ಯೆ ಬಗ್ಗೆ ಕಾರ್ಟೂನುಗಳ ಪ್ರದರ್ಶನವೂ ಇತ್ತು.

ಸಮಾವೇಶ ಆರಂಭದಲ್ಲಿ ನೆರೆದ ಸಾವಿರಾರು "ಗೌರಿ"ಯರು ಎದ್ದು ನಿಂತು "ನಾನೂ ಗೌರಿ, ವಿಶ್ವಾಸದ ಗೌರಿ, ಬದ್ಧತೆಯ ಗೌರಿ, ಮಕ್ಕಳ ಗೌರಿ, ರೈತರ ಗೌರಿ, ಮಹಿಳೆಯರ ಗೌರಿ, ಕಾರ್ಮಿಕರ ಗೌರಿ, ಜನರ ಗೌರಿ" ಎಂಬ ಘೋಷಣೆ ಮೊಳಗಿಸಿದರು. ಸಮಾವೇಶದಲ್ಲಿ



ಪಾಲುಗೊಂಡ ವಿವಿಧ ವಿಚಾರಧಾರೆಗಳ ವ್ಯಕ್ತಿಗಳ, ಶಕ್ತಿಗಳ ಸಂಘಟನೆಗಳನ್ನು ಪ್ರತಿನಿಧಿಸುವ ದೇಶದ ವಿವಿಧ ಭಾಗಗಳಿಂದ ಬಂದ 30ರಷ್ಟು ಪ್ರಸಿದ್ಧರು ವೇದಿಕೆಯಲ್ಲಿದ್ದು ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು. ಭಾಷಣಗಳ ಮಧ್ಯೆ ಗೌರಿ ಜೀವನ, ವಿಚಾರಗಳನ್ನು ಪ್ರಸ್ತುತಪಡಿಸುವ ಹಾಡುಗಳು, ರೂಪಕಗಳು ಮತ್ತಿತರ ಸಾಂಸ್ಕೃತಿಕ ಪ್ರದರ್ಶನಗಳೂ ಇದ್ದವು.

ಹಿರಿಯ ಲೇಖಕ ದೇವನೂರು ಮಹಾದೇವ, ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ, ನರ್ಮದಾ ಬಚಾವೋ ಆಂದೋಲನದ ಮೇಧಾ ಪಾಟ್ಕರ್, ಸ್ವಾಮಿ ಅಗ್ನಿವೇಶ್, ಕೋಮು ಸೌಹಾರ್ದ ಹೋರಾಟಗಾರ್ತಿ ತೀಸ್ತಾ ಸೆಟಲ್ ವಾಡ, ಸುಪ್ರೀಂ ಕೋರ್ಟಿನ ವಕೀಲ ಸಾಮಾಜಿಕ ಕಾರ್ಯಕರ್ತ ಪ್ರಶಾಂತ ಭೂಷಣ್, ಲೇಖಕ/ಚಿಂತಕ ಪ್ರೊ. ಚಂದ್ರಶೇಖರ ಪಾಟೀಲ, ನಿಡುಮಾಮಿಡಿ ಸ್ವಾಮಿಜಿ, ಭಾಷಾ ವಿಜ್ಞಾನಿ ಪ್ರೊ. ಗಣೇಶ ದೇವಿ, ಹಿರಿಯ ಪತ್ರಕರ್ತರಾದ ಪಿ ಸಾಯಿನಾಥ್, ಸಿದ್ಧಾರ್ಥ ವರದರಾಜನ್, ಸಾಗರಿಕಾ ಘೋಷ್, ಮಹಿಳಾ ಹೋರಾಟಗಾರ್ತಿ ಕೆ ನೀಲಾ, ಗುಜರಾತಿನ ದಲಿತ ನಾಯಕ ಜಿಗ್ನೇಶ್ ಮೇವಾನಿ, ಚಿತ್ರನಟ ಚೇತನ್, ಇತರ ಹಲವು ಪ್ರಗತಿಪರ ಸ್ವಾಮೀಜಿಗಳು ಮಾತನಾಡಿದರು.



ಗಾಂಧಿವಾದಿ ಎಸ್.ಎಸ್. ದೊರೆಸ್ವಾಮಿ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು. "ಗೌರಿ ಲಂಕೇಶ್ ಪತ್ರಿಕೆ"ಯ ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡುವ ಮೂಲಕ ಸಮಾವೇಶಕ್ಕೆ ಚಾಲನೆ ನೀಡಿದ್ದು ಸಹ ಗೌರಿ ಹತ್ಯೆಯ ಮೂಲಕ ಬಲಪಂಥೀಯರಿಗೆ ಫ್ಯಾಸಿಸ್ಟರಿಗೆ ಸಿಂಹಸ್ವಪ್ನವಾಗಿದ್ದ ಪತ್ರಿಕೆಯನ್ನು ಶಾಶ್ವತವಾಗಿ ಬಂದ್ ಮಾಡಬಹುದು ಎಂಬ ಹತ್ಯೆಯ ಪ್ರಾಯೋಜಕರ ಕನಸನ್ನು ಮಣ್ಣುಗೂಡಿಸಿದೆ. ಬಿಡುಗಡೆಯಾದ ವಿಶೇಷ ಸಂಚಿಕೆಯ ಮುಖಪುಟದಲ್ಲಿ ಗೌರಿ ಅವರ ಪೂರ್ಣ ಪುಟದ ಚಿತ್ರದೊಂದಿಗೆ "ನನ್ನ ದನಿ ಅಡಗುವುದಿಲ್ಲ" ಎಂಬ ತಲೆಬರಹ ಮತ್ತು ಒಳಗಿನ ಗೌರಿಯ ಜೀವನ, ವಿಚಾರಗಳ ಬಗೆಗಿನ ಸ್ಮರಣ ಲೇಖನಗಳು ಪ್ರತಿರೋಧವನ್ನು ಗಟ್ಟಿಯಾಗಿ ವ್ಯಕ್ತಪಡಿಸುತ್ತಿದ್ದವು.

ಸೀತಾರಾಂ ಯೆಚುರಿ ಅವರು ತಮ್ಮ ಭಾಷಣದ ಮೂಲಕ ಸಮಾವೇಶದ ಭಾವವನ್ನು ಸೆಟ್ ಮಾಡಿದರು. ದೇಶದ ನಾಲ್ಕು ಜನ ಪ್ರಸಿದ್ಧ ವಿಚಾರವಾದಿಗಳು ಮತ್ತು ಪತ್ರಕರ್ತರ ಕೊಲೆ ನಡೆಯುವಂತಹ ದ್ವೇಷ ಮತ್ತು ಹಿಂಸೆಯ ವಾತಾವರಣದ ಕಾರಣಕರ್ತರು ಸಂಘ ಪರಿವಾರದವರು ಎಂದು ಅವರು ಆಪಾದಿಸಿದರು. ಈ ದ್ವೇಷ ಮತ್ತು ಹಿಂಸೆಯ ವಾತಾವರಣದಲ್ಲಿ ನಾಲ್ಕು ಸಾರ್ವಜನಿಕ ಬುದ್ಧಿಜೀವಿಗಳ ಕೊಲೆ ಮಾತ್ರ ಆಗಿಲ್ಲ. ಗೋಹತ್ಯೆ, ಗೋಮಾಂಸ ಸೇವನೆ, ರಾಷ್ಟ್ರಧ್ವಜ–ರಾಷ್ಟ್ರಗೀತೆಗೆ ಗೌರವ ತೋರಿಸದಿರುವುದು, ಅವರ ಜಾತಿ–ಧರ್ಮ, ಕೆಲಸ, ಉಡುಗೆ, ಆಚಾರ–ವಿಚಾರಗಳ ಕಾರಣಗಳ ವಿವಿಧ ನೆಪಗಳ ಆಧಾರದ ಮೇಲೆ ದಲಿತರ ಮುಸ್ಲಿಮರ ಮೇಲೆ ಗುಂಪು ದಾಳಿಗಳು ಕೊಲೆಗಳು ನಡೆದಿವೆ. ನೈತಿಕ ಪೋಲಿಸ್ ಗಿರಿಯ ಹೆಸರಲ್ಲಿ ವಿಭಿನ್ನ–ಕೋಮುಗಳ ಯುವ ಜೋಡಿಗಳ ಮೇಲೆ ದಾಳಿಗಳು ನಡೆಯುತ್ತಿವೆ. ಇವೆಲ್ಲವನ್ನು "ಪ್ರೈವೇಟ್ ಸೇನೆ"ಗಳು ನಡೆಸುತ್ತಿದ್ದು ಅವುಗಳಿಗೆ ದೇಶದ ಅತ್ಯಂತ ಉನ್ನತ ಮಟ್ಟದಲ್ಲಿ ಬೆಂಬಲ ಇದೆ ಎಂದು ಅವರು ಆಪಾದಿಸಿದರು.

"ನಾನು ಇಲ್ಲಿ ರಾಜಕೀಯ ಪಕ್ಷವೊಂದರ ಪ್ರತಿನಿಧಿಯಾಗಿ ಮಾತ್ರ ಬಂದಿಲ್ಲ. ನಾನು ಭಾರತದ ಪ್ರಜಾಪ್ರಭುತ್ವದ ಸಂವಿಧಾನದ ಭಾರತದ ಪರಿಕಲ್ಪನೆಯ ಕಾಲಾಳುವಾಗಿ ಬಂದಿದ್ದೇನೆ" ಎಂದೆ ಅವರು ತಮ್ಮ ಭಾಷಣ ಆರಂಭಿಸಿದರು. ಈ ಭಾರತದ ಪರಿಕಲ್ಪನೆ ಅಮೂರ್ತವಾದದ್ದು ಅಲ್ಲ. ಭಾರತದ ಬಹುತ್ವವನ್ನು ರಕ್ಷಿಸಬೇಕಾದರೆ ಎಲ್ಲರಿಗೂ ಸಮಾನ ಅವಕಾಶ, ಅಭಿಪ್ರಾಯ ವ್ಯಕ್ತ ಪಡಿಸಲು, ದೇಶವನ್ನು ಹೇಗೆ ಕಟ್ಟಬೇಕು, ಹೇಗೆ ಉತ್ತಮಪಡಿಸಬೇಕು ಎಂದು ಚರ್ಚಿಸಲು, ಭಿನ್ನಮತ ಹೊಂದಲು ಸಾಧ್ಯವಾಗಬೇಕು. ನನ್ನ ಕಲ್ಪನೆಯ ಭಾರತ ಭಿನ್ನ ವಿಚಾರಧಾರೆಗಳ ಸಂಘರ್ಷದ ಭಾರತ. ಈ ಸಂಘರ್ಷದಲ್ಲಿ ಗುಂಡುಗಳ ಪ್ರವೇಶವಾದರೆ ಅದು ನನ್ನ ಭಾರತದ ಕೊನೆ. ನನ್ನ ಕಲ್ಪನೆಯ ಭಾರತ ರಕ್ಷಿಸಲು ನಾನು ಇಲ್ಲಿ ಬಂದಿದ್ದೇನೆ ಎಂದರು. ನಮಗೆ ಮಾಡಲು ಬಹಳ ಕೆಲಸವಿದೆ. ಜಾತಿ ವಿನಾಶ, ಅಲ್ಪಸಂಖ್ಯಾತರಿಗೆ ರಕ್ಷಣೆ, ಯುವಶಕ್ತಿಯ ಸದುಪಯೋಗ ಇತ್ಯಾದಿ. ಆದರೆ ಇವ್ಯಾವುದನ್ನು ಮಾಡಬೇಕಾದರೂ ನಮ್ಮ ಕಲ್ಪನೆಯ ಭಾರತವನ್ನು ಮೊದಲು ಐಕ್ಯ ಹೋರಾಟದೊಂದಿಗೆ ರಕ್ಷಿಸಬೇಕಾಗಿದೆ ಎಂದರು. ಸೆಕ್ಯುಲರ್ ಪ್ರಜಾಸತ್ತಾತ್ಮಕ ರಿಪಬ್ಲಿಕ್ ಭಾರತದ ಪರಿಕಲ್ಪನೆಗೆ 70 ವರ್ಷದ ಹಿಂದೆಯೂ ಈಗಲೂ ವಿರುದ್ಧವಾಗಿದ್ದ ಶಕ್ತಿಗಳೂ ಸಂಘಟನೆಗಳೂ ಅವೇ ಎಂದು ಯೆಚುರಿ ಹೇಳಿದರು.

ಸಮಾವೇಶದ ಹಿಂದಿನ ದಿನವೇ ಇತಿಹಾಸಕಾರ ಲೇಖಕ ರಾಮಚಂದ್ರ ಗುಹಾ ಅವರಿಗೆ ಗೌರಿ ಹತ್ಯೆಯಲ್ಲಿ ಬಿಜೆಪಿ–ಆರೆಸೆಸ್ ಹೆಸರಿಸಿದ್ದಕ್ಕೆ ಲಾಯರ್ ನೋಟೀಸ್ ಕೊಟ್ಟಿದ್ದಕ್ಕೆ ತೀಕ್ಷ್ಣ ಪ್ರತಿಕ್ರಿಯೆ ವ್ಯಕ್ತವಾಯಿತು. ಸೀತಾರಾಂ ಯೆಚುರಿ, ಸ್ವಾಮಿ ಅಗ್ನಿವೇಶ್, ನಿಡುಮಾಮಿಡಿ ಸ್ವಾಮಿಜಿ, ನೀಲಾ ಅವರುಗಳೂ ಈ ಸಂಘಟನೆಗಳು ಹತ್ಯೆಗೆ ಜವಾಬ್ದಾರ ಎಂದು ಹೇಳಿ ಎಷ್ಟು ಜನರಿಗೆ ನೋಟೀಸು ಕೊಡುತ್ತೀರಿ ಎಂದು ಸವಾಲು ಹಾಕಿದರು.

ತನಿಖೆ ತೀವ್ರಗೊಳಿಸಿ ಹಂತಕರನ್ನು ಹಾಗೂ ಅವರ ಹಿಂದೆ ಇರುವ ಶಕ್ತಿಗಳನ್ನು ಶೀಘ್ರವಾಗಿ ಪತ್ತೆ ಹಚ್ಚಬೇಕು; ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯುವ ವಿಚಾರವಾದಿಗಳ ಸರಣಿ ಕೊಲೆಗಳ ಆಂಯಾವುವನ್ನು ವಿಶೇಷವಾಗಿ ಪರಿಗಣಿಸಬೇಕು; ಹತ್ಯೆಗಳನ್ನು ಸಂಭ್ರಮಿಸುವ ಅಮಾನವೀಯ ನಡವಳಿಕೆಯ ಮನಸ್ಥಿತಿಯನ್ನು ಇಲ್ಲವಾಗಿಸುವ ನಿಟ್ಟಿನಲ್ಲಿ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು; – ಎಂದು ಒತ್ತಾಯಿಸುವ, ಹಾಗೂ ಕೋಮುವಾದಿ ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧದ ಎಲ್ಲಾ ಸಂಘಟನೆಗಳು, ಪಕ್ಷಗಳು, ಗುಂಪುಗಳು, ಮತ್ತು ನಾಗರಿಕರು ಒಟ್ಟಾಗಿ ಐಕ್ಯ ಹೋರಾಟವನ್ನು ನಡೆಸಲು ಪಣ ತೊಡುವ, ನಿರ್ಣಯವನ್ನು ಸಮಾವೇಶ ಅಂಗೀಕರಿಸಿತು. ದೆಹಲಿಯಲ್ಲಿ ಮತ್ತು ಇತರ ರಾಜ್ಯ ರಾಜಧಾನಿಗಳಲ್ಲಿ ಇಂತಹುದೇ ಖಂಡನಾ–ಪ್ರತಿರೋಧದ ಸಮಾವೇಶಗಳನ್ನು ಸಂಘಟಿಸುವ ಬಗ್ಗೆ ತಿಳಿಸಲಾಯಿತು. ಪತ್ರಕರ್ತರ ಸಂಘಟನೆಗಳು ದೇಶದಾದ್ಯಂತ ಗಾಂಧಿ ಪ್ರತಿಮೆಗಳ

ಪುಟ 10 ಕ್ಕೆ

'ನಾವೆಲ್ಲ ಗೌರಿ'....... ಪುಟ 9 ರಿಂದ

ಎದುರು ಅಕ್ಟೋಬರ್ 2 ರಂದು ಪ್ರತಿಭಟನೆಗಳನ್ನು ಹಮ್ಮಿಕೊಳ್ಳಲು ನಿರ್ಧರಿಸಿವೆ ಎಂದೂ ಸಮಾವೇಶದಲ್ಲಿ ಘೋಷಿಸಲಾಯಿತು. ಕರ್ನಾಟಕದಲ್ಲೂ ಮೈಸೂರು, ಶಿವಮೊಗ್ಗ ಮುಂತಾದ ಕಡೆ ಇಂತಹ ಸಮಾವೇಶಗಳು ನಡೆದಿವೆ. ಇನ್ನೂ ಹಲವು ನಡೆಯಲಿವೆ.

ಆಕ್ರೋಶದ ದನಿಗಳು

ಪಕ್ಷವೊಂದರ ಪ್ರತಿನಿಧಿಯಾಗಿ ಮಾತ್ರವಲ್ಲ, ಇಂಡಿಯಾದ ಪರಿಕಲ್ಪನೆಯ ಸಂವಿಧಾನದ ಒಬ್ಬ ಕಾಲಾಳುವಾಗಿ ಇಲ್ಲಿ ಪಾಲುಗೊಂಡಿದ್ದೇನೆ. ನಾವೆಲ್ಲರೂ ಒಟ್ಟಾಗಿ ದೇಶವನ್ನು ಉತ್ತಮಗೊಳಿಸಲು ಶ್ರಮಿಸಬೇಕಾಗಿದೆ. ಗೌರಿ ಹತ್ಯೆಯ ಹಿನ್ನೆಲೆಯಲ್ಲಿ ನಾವು ನಿರ್ದಿಷ್ಟ ಸಂಘಟನೆಯನ್ನು ಆರೋಪಿಸಿದರೆ ಅವರು ನೋಟೀಸ್ ಕಳಿಸುತ್ತಾರೆ. ಯಾರು ಈ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲುಗೊಳ್ಳಲಿಲ್ಲವೋ, ಯಾರು ಈ ದೇಶದಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಯಾಗಲೆಂದು ಆಶಿಸಿರಲಿಲ್ಲವೋ ಅವರಿಂದ ಮತ್ತೇನು ನಿರೀಕ್ಷಿಸಲು ಸಾಧ್ಯ?!

– ಸೀತಾರಾಂ ಯೆಚುರಿ

ಇದು ಶೋಕಸಭೆಯಲ್ಲ. ಈ ಸಮಾಜವನ್ನು ಬದಲಾಯಿಸುವ, ಈ ಅನ್ಯಾಯಗಳನ್ನು ಕೊನೆಗೊಳಿಸುವ, ಸಂಕಲ್ಪ ತೊಡಲಿಕ್ಕಾಗಿ ಬಂದಿದ್ದೇವೆ. ನಾವು ದ್ವೇಷ ಬಿತ್ತುವ ಧರ್ಮ ಮತ್ತು ರಾಜಕಾರಣ ಎರಡನ್ನೂ ತಿರಸ್ಕರಿಸಬೇಕು.

– ಎಚ್.ಎಸ್. ದೊರೆಸ್ವಾಮಿ

ಬಹುತ್ವವೇ ಭಾರತೀಯತೆ. ಬಹುತ್ವವೇ ನಮ್ಮ ಧರ್ಮ. ಬಹುತ್ವ ಪ್ರೀತಿ, ಸಹನೆಯನ್ನು ಉಳಿಸುತ್ತದೆ. ಸಹನೆ, ಪ್ರೀತಿ ಇದ್ದಲ್ಲಿ ಸಮಾನತೆ ಇರುತ್ತದೆ. ಈ ಬಹುತ್ವದ ನಾಶಕ್ಕೆ ತೊಡರುಗಾಲಾದ ಗೌರಿ ಮತ್ತು ಗೌರಿಯಂತಹ ಇನ್ನಿತರರು ಬಲಿಯಾಗುತ್ತಾ ಇದ್ದಾರೆ. ಆದ್ದರಿಂದ ಬಹುತ್ವದ ಚಿಂತನೆಯವರು ಉದಾರವೂ ವಿಶಾಲವೂ ಆಗಿ ಒಟ್ಟಾಗಬೇಕಾಗಿದೆ.

–ದೇವನೂರ ಮಹಾದೇವ

ಬಲಪಂಥೀಯ ಹಿಂದುತ್ವ ಸಂಘಟನೆಗಳಿಂದ ಹಲವು ವಿಧದ ಕೊಲೆಗಳು ನಡೆಯುತ್ತವೆ. ಜಾತಿ–ಧರ್ಮಗಳ ಹೆಸರಲ್ಲಿ ಮಾತ್ರವಲ್ಲ, ಅಭಿವೃದ್ಧಿಯ ಹೆಸರಲ್ಲೂ ಕೊಲೆಗಳು ನಡೆಯುತ್ತವೆ.

–ಮೇಧಾ ಪಾಟ್ಕರ್

ದೇಶದಲ್ಲಿ ನಡೆಯುತ್ತಿರುವ ಬಲಪಂಥೀಯ ಹಿಂಸಾಚಾರದ ಹಿಂದೆ ಸ್ಪಷ್ಟ ರಣನೀತಿ ಇದೆ. ಇದರ ಬಗ್ಗೆ ಸಂದೇಹವೇ ಬೇಡ. ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಜಂಗುಳಿ ಹತ್ಯೆಗಳು (ಮೊಬ್ ಲಿಂಚಿಂಗ್), ಕಾಂಗ್ರೆಸ್ ಆಡಳಿತದ ರಾಜ್ಯಗಳಲ್ಲಿ ವ್ಯಕ್ತಿಗಳ ಹತ್ಯೆಗಳು, ಬಿಜೆಪಿ–ಕಾಂಗ್ರೆಸೇತರ ರಾಜ್ಯಗಳಲ್ಲಿ ಕೋಮುದಂಗೆಗಳು.

–ಪಿ ಸಾಯಿನಾಥ

ನಾನೂ ಗೌರಿ ನಾವೆಲ್ಲ ಗೌರಿ ಎಂದು ಹೇಳುವ ಮೂಲಕ ಎಲ್ಲ ಜೀವಪರ ಶಕ್ತಿಗಳು ಒಂದಾಗಿದ್ದೇವೆ. ಇಂದು ನೆರೆದಿರುವುದು ಐಕ್ಯತೆ–ಯ ಮಹಾಸಂಗಮ. ಈ ಮಹಾಸಂಗಮದಲ್ಲಿ ತೊಡಗಿರುವ ಎಲ್ಲ ಸಮಸ್ತರೂ ಭಯಮುಕ್ತ ಭಾರತವನ್ನೂ ಭವಿಷ್ಯವನ್ನು ರೂಪಿಸುವ ಪಣ ತೊಟ್ಟಿದ್ದೇವೆ.

–ಕೆ. ನೀಲಾ

ಕೆಲ ವರ್ಷಗಳ ಹಿಂದೆ ನಾನು ದಾಬೋಲ್ಕರ್ ಆಗಿದ್ದೆ, ನಂತರ ಪಾನ್ಸರೆಯಾಗಿದ್ದೆ. ಎರಡು ವರ್ಷಗಳ ಹಿಂದೆ ಕಲಬುರ್ಗಿಯಾದೆ. ಈಗ ನಾನು ಗೌರಿಯಾಗಿದ್ದೇನೆ.

–ಚಂದ್ರಶೇಖರ ಪಾಟೀಲ

ಈ ಸಾವಿನಲ್ಲಿ ಸಹ್ಯವಾಗಿರುವುದು ಒಂದೇ – ಅದು ಉಂಟು ಮಾಡಿರುವ ಐಕ್ಯತೆ ಮತ್ತು ಭ್ರಾತೃತ್ವ. ಈ ಐಕ್ಯತೆ ವ್ಯರ್ಥವಾಗಬಾರದು. ನಾವು ಈ ಸಾವು ವ್ಯರ್ಥವಾಗಲು ಬಿಡಬಾರದು.

–ತೀಸ್ತಾ ಸೆಟಲ್ ವಾಡ್

ನಜೀಬ್ ತಾಯಿ, ರೋಹಿತನ ತಾಯಿ, ಮತ್ತೀಗ ಗೌರಿಯ ತಾಯಿ ಈ ಮೂವರೊಂದಿಗೆ ಈ ದೇಶದ ಸ್ತ್ರೀವಾದಿ ಸಂಘಟನೆಗಳ ಎಲ್ಲರೂ ಒಗ್ಗೂಡಿ ಮೋದಿಯ ತಾಯಿಯನ್ನು ಭೇಟಿ ಮಾಡಿ ಮಗನಿಗೆ ಬುದ್ಧಿ ಹೇಳುವಂತೆ ಕೇಳಿಕೊಳ್ಳೋಣ

–ಜಿಗ್ನೇಶ್ ಮೇವಾನಿ



ನಾನು ಅನೇಕ ಗೌರಿಯರನ್ನು ಇಲ್ಲಿ ನೋಡುತ್ತಿದ್ದೇನೆ. ಮಗಳ ಬಗ್ಗೆ ಹೆಮ್ಮೆ ಆಗುತ್ತಿದೆ. ನೀವೆಲ್ಲ ನನ್ನ ಗೌರಿಯರು

–ಇಂದಿರಾ ಲಂಕೇಶ್

ಬೇಟಿ ಪಡಾವೊ, ಬೇಟಿ ಬಚಾವೊ. ಅಗರ್ ಬೇಟಿ ಜ್ಯಾದಾ ಪಡಿ, ಜ್ಯಾದಾ ಬೋಲಿ ತೊ..ಬೇಟಿ ಕೊ ಗೋಲಿ ಸೆ ಉಡಾ ದೊ

–ಸಾಗರಿಕಾ ಘೋಷ್

ಗೌರಿಯನ್ನು ಕೊಂದ ವ್ಯಕ್ತಿ ಯಾರೆ–ಂದು ನಮಗೆ ಗೊತ್ತಿಲ್ಲದಿರಬಹುದು. ಆದರೆ ಅದನ್ನು ಸಂಭ್ರಮಿಸುತ್ತಿರುವವರು ಯಾರು ಎಂದು ಗೊತ್ತಿದೆ. ಇಂತಹವರನ್ನು ಟ್ವಿಟರ್ ನಲ್ಲಿ ಫಾಲೋ ಮಾಡುತ್ತಿರುವವರು ಯಾರು ಎನ್ನುವುದೂ ನಮಗೆ ಗೊತ್ತಿದೆ.


–ಪ್ರಶಾಂತ ಭೂಷಣ್

ಹಿಂದುತ್ವದ ಭಯೋತ್ಪಾದಕರಿಂದ ಗೌರಿಯವರ ಹತ್ಯೆ ನಡೆದಿದೆ. ಅದರ ಪ್ರಾಯೋಜ–ಕರು ಕರ್ನಾಟಕದಲ್ಲೇ ಇದ್ದಾರೆ. ಇದೊಂದು ರಾಜಕೀಯ ಹತ್ಯೆ.

–ನಿಡುಮಾಮಿಡಿ ಸ್ವಾಮಿಜಿ

ಪ್ರಧಾನಿ ಯಾವಾಗಲೂ ಮನದ ಮಾತು ಆಡುತ್ತಾರೆ. ಆದರೆ ಅವರು ಗೌರಿ ಹತ್ಯೆಯ ಬಗ್ಗೆ ಚಕಾರವೆತ್ತಿಲ್ಲ. ವಿಶ್ವಸಂಸ್ಥೆಯು ಗೌರಿ ಹತ್ಯೆಯನ್ನು ಖಂಡಿಸಿದೆ. ವಿಶ್ವದ ಎಲ್ಲಾ ದೇಶಗಳಲ್ಲೂ ಖಂಡನೆ ನಡೆಯುತ್ತಿದೆ. ಮೋದಿಯವರೇ, ನಿಮ್ಮ ನಾಲಿಗೆಯೂ ಖಂಡನೆಯ ಮಾತು ನುಡಿಯಲಿ.

–ಸ್ವಾಮಿ ಅಗ್ನಿವೇಶ್



ಗೌರಿ ಹತ್ಯೆ ಬಗ್ಗೆ ಇತಿಹಾಸಕಾರ ರಾಮಚಂದ್ರ ಗುಹಾ ಅವರು ಹೇಳಿದ ಮಾತಿಗೆ ದೂರು ದಾಖಲಿಸಿದ್ದೀರಿ, ನಿಮ್ಮದೇ ಶಾಸಕ ಜೀವರಾಜ್ ಮೇಲೆ ಯಾವಾಗ ದೂರು ದಾಖಲಿಸುತ್ತೀರಿ?

–ಕವಿತಾ ಕೃಷ್ಣನ್

ಕಲಬುರ್ಗಿ, ಗೌರಿ ಹತ್ಯೆಗೆ ಸಂಭ್ರಮಿಸಿದವರು ಸಮಾಜಕ್ಕೆ ಕಪ್ಪು ಚು–ಕ್ಕೆ. ಪುರೋಹಿತಶಾಹಿಯನ್ನು ಭಾರತದಿಂದ ಓಡಿಸುವ ಸಂಕಲ್ಪವನ್ನು ನಾವು ಮಾಡಬೇಕು.

–ಜಯಮೃತ್ಯುಂಜಯ ಸ್ವಾಮಿ, ಕೂಡಲ ಸಂಗಮ ಪಂಚಸಾಲಿ ಮಠ

ಟ್ರೋಲ್ ಸೇನಾನಿ ವಿಶ್ವೇಶ್ವರ ಭಟ.......... ಪುಟ 3 ರಿಂದ

ಮನರೇಗಾ ಕಾಯ್ದೆ, ಕೂಲಿ, ಗುಳೆ, ಕೆರೆ, ನೀರು, ಅಂತರ್ಜಲ ಮುಂತಾದ ವಿಷಯಗಳ ಬಗ್ಗೆ ನೀವು ಇವರಿಂದ ಪಾಠ ಹೇಳಿಸಿಕೊಳ್ಳಬಹುದು. ಯಾವಾಗ ಸಮಯ ಕೊಡುತ್ತೀರಿ ಹೇಳಿ? ಈ ಅನಕ್ಷರಸ್ಥ ಸಂಪನ್ಮೂಲ ವ್ಯಕ್ತಿಗಳು ಎಲ್ಲ ಸಮಯಕ್ಕೂ ರೆಡಿ. ಆಗಲಾದರೂ ಶ್ರಮಿಕ ವಿರೋಧಿಯಾದ ನಿಮ್ಮ ಉಲ್ಟಾ ತಿಳುವಳಿಕೆ ಸೀದಾ ಆಗಬಹುದೇನೊ.

ಸುರೇಶ್ ಅವರೇ ಈ ಬರಹ ಓದುತ್ತಿರುವಿರೆಂದು ಭಾವಿಸುತ್ತೇನೆ. ಈ ತಾಯಂದಿರು ಪ್ಲೇಕಾರ್ಡ್ ಉಲ್ಟಾ ಹಿಡಿದಿರುವುದಕ್ಕಾಗಿಯೇ ಹಂಗಿಸುವ ನಿಮ್ಮ ಮನೋಭಾವಕ್ಕೆ ಮನಸ್ಸು ಧಿಕ್ಕಾರ ಹೇಳಿದರೂ ನಿಮ್ಮ ಬಗ್ಗೆ ಕರುಣೆ ಬರುತ್ತಿದೆ. ನಮಗೆ ಅಕ್ಷರ ದಕ್ಕದಂತೆ ಮಾಡಿದ ವೈದಿಕಶಾಹಿ ವ್ಯವಸ್ಥೆಯ ವಕ್ತಾರರಾಗಿ ನೀವು ನಡೆದುಕೊಳ್ಳುತ್ತಿರುವುದು ದುರಂತವೇ ಹೌದು. ನಾಡಿನ ಎಲ್ಲಿಯೇ ಮಹಿಳೆ, ದಲಿತ, ಶ್ರಮಿಕರ ಮೇಲೆ ಅನ್ಯಾಯ ನಡೆದಲ್ಲಿ ಹೋರಾಟಕ್ಕೆ ನುಗ್ಗುವ ಮನೋಭಾವವುಳ್ಳ ಈ ತಾಯಂದಿರರ ಬಗ್ಗೆ ವ್ಯಂಗ್ಯದಿಂದ ಪೋಸ್ಟ್ ಹಾಕಿದ್ದು ನಿಮ್ಮೊಳಗಿನ ವಿಕೃತ ಮನಸಿನ ಅನಾವರಣವಲ್ಲದೆ ಮತ್ತೇನು?

ಈಗ ಇದೇ ತಾಯಂದಿರರು ಗೌರಿಯಕ್ಕನ ಕೊಲೆಯಾಗಿದೆ ಎಂಬ ಸುದ್ದಿ ತಿಳಿದಿದ್ದೆ ತಡ ಸಭೆಯೊಂದನ್ನು ಮಾಡಿಕೊಂಡು ಒಂದಿಷ್ಟು ರೊಟ್ಟಿ ಘುಂಡಿಪಲ್ಯ ಕಟ್ಟಿಕೊಂಡು, ಎದೆಯ ಮೇಲೆ 'ನಾನು ಗೌರಿ – ನಾವೆಲ್ಲರೂ ಗೌರಿ– ಚಲೋ ಬೆಂಗಳೂರು' ಎಂಬ ಬ್ಯಾಡ್ಜ್ ಧರಿಸಿಕೊಂಡು, ಸಿಕ್ಕಾಪಟ್ಟೆ ರಶ್ಶಿರುವ ಟ್ರೇನ್ ಬೋಗಿಗಳಲ್ಲಿ ರಾತ್ರಿಯೆಲ್ಲ ಸೀಟಿಲ್ಲದೆ ನಿದ್ದೆಗೆ–ಟ್ಟು, ವಯಸ್ಸಿನ ಖದರು ಇಲ್ಲದೆ ಹಸಿವಿನ ಚಿಂತೆ ಮಾಡದೆ ಈ ಬೆಂಗಳೂರು ಎಂಬ ಮಹಾನಗರ(!)ಕ್ಕೆ ತಮ್ಮ ಹೆಜ್ಜೆಯೂರುತ್ತ ಬಂದು ನಿಮ್ಮ ಕೊಲೆಗಡುಕ ಸಂಸ್ಕೃತಿಯನ್ನು ಪ್ರಶ್ನಿಸಿದ್ದಾರೆ. ಧಿಕ್ಕರಿಸಿದ್ದಾರೆ. ಅದಕ್ಕಾಗಿ ನಿಮಗೆ ಸಿಟ್ಟೇ ಸುರೇಶ ಅವರೆ? ಅವರ ಬೆವರ ಹೆಜ್ಜೆಗಳಲ್ಲಿ ಸಂಕಟದ ಗಾಥೆಯಿದೆ. ಅವರ ಎರಡು ಕೈಗಳು ಈ ಲೋಕ ನಿರ್ಮಿಸಿವೆ. ಚೆಂದಗೊಳಿಸಿ ನಿಮಗೆ ಧಾರೆಯೆರೆದಿವೆ. ಅವರು ಬಿತ್ತಿ ಬೆಳೆದು ಕೊಟ್ಟಿರುವುದನ್ನು ಉಂಡು ಮೈ ಬೆಳೆಸಿಕೊಂಡಿರುವಿರಿ. ಅದನ್ನರಿವ ತಾಖತ್ತಿಲ್ಲದ–ಮನಸಿಲ್ಲದ ನೀವು ಮನುಸ್ಮೃತಿಯ ಅಜೆಂಡಾದಂತೆ ಈ ತಾಯಂದಿರನ್ನು ಅಪಮಾನಿಸುತ್ತಿರುವಿರಿ.

ನಿಮಗೆ ಸಿಟ್ಟೇಕೆಂದು ನನಗೆ ಗೊತ್ತು ಸುರೇಶ. ದಲಿತ, ಹಿಂದುಳಿದ, ಅನಕ್ಷರಸ್ಥ, ಗ್ರಾಮೀಣ, ಸ್ಲಂನಲ್ಲಿ ವಾಸ ಮಾಡುತ್ತಿರುವ ಮಹಿಳೆಯರು ಮನುಸ್ಮೃತಿಯ ಆದೇಶ ಪಾಲಿಸಿಕೊಂಡು ಬಿದ್ದಿರುವ ಬದಲಿಗೆ ಅದನ್ನು ಪ್ರಶ್ನಿಸಿ ಧಿಕ್ಕರಿಸಿ ದಹಿಸಿ ಮುನ್ನುಗ್ಗಿ ಸಮತೆಯ ನಾಡಿಗಾಗಿ ಕನಸುವುದು ನಿಮಗೆ ಬೇಕಿಲ್ಲ. ಅದಕ್ಕಾಗಿಯೇ ವ್ಯಂಗ್ಯದ ಪೋಸ್ಟ್ ಹಾಕಿರುವಿರಿ. ನಿಮ್ಮ ಪಕ್ಷ ಇವರ ಮತಗಳು ಕೇಳುವಾಗ ನಿಮ್ಮಲ್ಲಿ ಖಂಡಿತ ಉತ್ತರವಿಲ್ಲ. ಆದರೆ ಸುರೇಶ್, ನೀವು ಇಂತಹ ಪೋಸ್ಟ್ ಹಾಕುವ ಮೂಲಕ ಹೋರಾಟವೇ ಬದುಕಾಗಿರುವ ಈ ತಾಯಂದಿರನ್ನು ಅಪಮಾನ ಮಾಡಿರುವಿರಿ. ನಿಮ್ಮ ಪೋಸ್ಟು ನೋಡಿ ನನ್ನೊಳಗೆ ಸಂಕಟ–ಸಿಟ್ಟು ಧಗ್ಗೆಂದಿದೆ. ಇನ್ನೆಷ್ಟು ಜನ ಗೌರಿಯರನ್ನು ನಿಂದಿಸುವಿರಿ? ಲೋಕವೆಲ್ಲ ಗೌರಿಮಯ.. 'ಎನ್ನ ದೇವ ಚೆನ್ನಮಲ್ಲಿಕಾರ್ಜುನನೆಂಬ ಗರುವಂಗೆ ಜಗವೆಲ್ಲ ಹೆಣ್ಣು ನೋಡ' ಎನ್ನುತ್ತಾಳೆ ಅಕ್ಕಮಹಾದೇವಿ. ಹಾಗೆಯೇ ಜಗವೆಲ್ಲ ಗೌರಿಮಯ.. ವ್ಯಂಗ್ಯಕ್ಕೆ ಬೆದರಿಕೆಗೆ, ಲಾಠಿಗೆ–ಗುಂಡಿಗೆ ಹೆದರದ ದಂಡು ಗೌರಿದಂಡು.

ಈಗ ಈ ಗೌರಿಯರ ಕ್ಷಮೆ ಕೇಳಬೇಕೆಂದು ನಿಮಗೆ ನಾನು ಹೇಳಬೇಕೇ?

ಪರೀಕ್ಷಾ ಮಾಧ್ಯಮ ಗೊಂದಲದ ಆದೇಶ ವಾಪಸ್ ಪಡೆಯಲು SFI ಆಗ್ರಹ

ಪದವಿ ಪೂರ್ವ ವ್ಯಾಸಂಗದಲ್ಲಿ ಶಿಕ್ಷಣ ಮಾಧ್ಯಮದ ಕುರಿತು ಇಲಾಖೆಯು ಹೊರಡಿಸಿರುವ ಆದೇಶವನ್ನು ವಾಪಸ್ಸ ಪಡೆಯಬೇಕು ಎಂದು SFI ಆಗ್ರಹಿಸಿದೆ.

ಪರೀಕ್ಷೆಗಳನ್ನು ಕನ್ನಡ ಇಲ್ಲವೇ ಇಂಗ್ಲೀಷ ಮಾಧ್ಯಮಗಳಲ್ಲಿ ಬರೆಯಬೇಕು ಎಂದು ಸೂಚಿಸಲಾಗಿದೆ. ಕಲಾ ಮತ್ತು ವಿಜ್ಞಾನ ವಿಭಾಗಕ್ಕೆ ಯಾವುದೇ ಸಮಸ್ಯೆಗಳಾಗುವುದಿಲ್ಲ. ಆದರೆ ವಾಣಿಜ್ಯ ವಿಭಾಗಕ್ಕೆ ಇದು ತೀವ್ರ ತೊಂದರೆಯಾಗುತ್ತದೆ. ವಾಣಿಜ್ಯ ವಿಭಾಗದಲ್ಲಿ ಕನ್ನಡ ಮತ್ತು ಇಂಗ್ಲೀಷ ಭಾಷೆ ಎರಡರಲ್ಲೂ ವಿದ್ಯಾರ್ಥಿಗಳು ಅಧ್ಯಯನ ನಡೆಸುತ್ತಿದ್ದಾರೆ. ಅರ್ಥಶಾಸ್ತ್ರ, ಭೂಗೋಳ ಶಾಸ್ತ್ರ, ವಾಣಿಜ್ಯ ಶಾಸ್ತ್ರವನ್ನು ಕನ್ನಡದಲ್ಲಿ ಸಂಖ್ಯಾಶಾಸ್ತ್ರವನ್ನು ಇಂಗ್ಲೀಷ ಭಾಷೆಯಲ್ಲಿ ಅಧ್ಯಯನ ನಡೆಸುತ್ತಿದ್ದಾರೆ. ಇವರನ್ನು ನೀವು ಯಾವ ಮಾಧ್ಯಮದಲ್ಲಿ ಪರೀಕ್ಷೆ ಬರೆಯಿಸುತ್ತೀರಿ? ಹಾಗಾಗಿ ಈ ಬಾರಿ ಈ ಪ್ರಯೋಗವನ್ನು ನಿಲ್ಲಿಸಬೇಕು ಎಂದು SFI ಆಗ್ರಹಿಸಿದೆ.

ವಾಣಿಜ್ಯ ವಿಭಾಗದಲ್ಲಿ ಉಪನ್ಯಾಸಕರ ಕೊರತೆ, ಪುಸ್ತಕಗಳ ಕೊರತೆ ಎದ್ದು ಕಾಣುತ್ತಿದೆ. ಆ ಸಮಸ್ಯೆಯನ್ನು ಪರಿಹರಿಸದೆ ಈ ರೀತಿಯ ಪ್ರಯತ್ನ ನಡೆಸುವುದು ವಿದ್ಯಾರ್ಥಿಗಳನ್ನು ಗೊಂದಲಕ್ಕೀಡು ಮಾಡಿದಂತಾಗುತ್ತದೆ.

ಪರೀಕ್ಷಾ ಮಾಧ್ಯಮದ ಕುರಿತು ಶಿಕ್ಷಣ ತಜ್ಞರ, ವಿದ್ಯಾರ್ಥಿ ಸಂಘಟನೆಗಳ, ಉಪನ್ಯಾಸಕರ ಅಭಿಪ್ರಾಯವನ್ನು ಪಡೆಯುವುದಕ್ಕಾಗಿ ಕೂಡಲೆ ಸಭೆಯನ್ನು ನಿಗದಿ ಮಾಡಬೇಕು ಎಂದು SFI ರಾಜ್ಯಾಧ್ಯಕ್ಷ ವಿ.ಅಂಬರೀಶ್, ರಾಜ್ಯ ಕಾರ್ಯದರ್ಶಿ ಗುರುರಾಜ್ ದೇಸಾಯಿ ಒತ್ತಾಯಿಸಿದ್ದಾರೆ.

ಈಗಿನ ಭಾರತದಲ್ಲಿ 'ಬಾಬಾ'ಗಳು ಮತ್ತು ಅವರ ಕೋಟ್ಯಂತರ ಅನುಯಾಯಿಗಳು



ಡೇರಾ ಸಚ್ಚಾ ಸೌದಾ ವಿದ್ಯಮಾನದ ಮತ್ತೊಂದು ಆಯಾಮ

'ಡೇರಾ ಸಾಚಾ ಸೌದಾ'ದ ಮುಖ್ಯಸ್ಥನ ಹೀನಕೃತ್ಯಗಳಿಗೆ ಕೊನೆಗೂ ಶಿಕ್ಷೆ ವಿಧಿಸಿದ್ದರ ವಿರುದ್ಧ ನಡೆದಿರುವ ಹಿಂಸಾಚಾರದಲ್ಲಿ 38 ಜನರ ಬಲಿಯಾಗಿರುವುದು ಬಾಬಾ–ಸಂತ–ಸ್ವಾಮಿಗಳ ಹೊಲಸು ವಿಲಾಸೀ ಅಟ್ಟಹಾಸಗಳ ಆಳುವ ವರ್ಗಗಳ ಕೃಪಾಪೋಷಿತ ವಿದ್ಯಮಾನದ ಇನ್ನೊಂದು ಆಯಾಮದತ್ತವೂ, ಧಾರ್ಮಿಕ ಯಜಮಾನಿಕೆಗೆ ಪ್ರತಿರೋಧದ ಆಯಾಮವನ್ನೂ ಸಾಮಾಜಿಕ ಬದಲಾವಣೆಗಾಗಿ ಹೋರಾಡುತ್ತಿರುವವರ ಗಮನ ಸೆಳೆಯಬೇಕಾಗಿದೆ, ಕಂದಾಚಾರ, ಜಾತಿವಾದ, ಕೋಮುವಾದ ಇತ್ಯಾದಿಗಳ ವಿರುದ್ಧ ಹಾಗೂ ವಿಚಾರವಾದ, ಮತ್ತು ಸಾಮರಸ್ಯದ ಮೌಲ್ಯಗಳತ್ತ ಜಾಗೃತಿಯನ್ನು ಮೂಡಿಸಬೇಕಾದ ಸಾಮಾಜಿಕ ಆಂದೋಲನ ವರ್ಗಹೋರಾಟದ ಅನಿವಾರ್ಯ ಭಾಗವಾಗಬೇಕು ಎಂಬುದನ್ನು ಇದು ತೋರಿಸುತ್ತದೆ ಎನ್ನುತ್ತಾರೆ ಹರ್ಯಾಣದ ಹಿರಿಯ ಸಿಪಿಐ(ಎಂ) ಮುಂಖಡರಾದ **ಇಂದರ್ಜಿತ್ ಸಿಂಗ್**.

ಕೊನೆಗೂ ಒಬ್ಬ ದೊಡ್ಡ 'ಬಾಬಾ'ನಿಗೆ ಶಿಕ್ಷೆಯಾಗಿದೆ. 'ಡೇರಾ ಸಚ್ಚಾ ಸೌದಾ' ಎಂಬ ಒಂದು ಪಂಥದ ಮುಖ್ಯಸ್ಥ ಗುರ್ಮೀತ್ ಸಿಂಗ್‌ಗೆ ಆತನ 'ಆಶ್ರಮ'ದಲ್ಲಿದ್ದ ಇಬ್ಬರು 'ಸಾಧ್ವಿ'ಗಳ ಮೇಲೆ ಅತ್ಯಾಚಾರ ನಡೆಸಿದ್ದಕ್ಕಾಗಿ 15 ವರ್ಷಗಳ ಕಾನೂನು ಹೋರಾಟದ ನಂತರ 20ವರ್ಷಗಳ ಶಿಕ್ಷೆಯಾಗಿದೆ. ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವ ಬಾಬಾಗಳು, ಗುರುಗಳು, ಸ್ವಾಮಿಗಳ ವಿಲಾಸೀ ಅಟ್ಟಹಾಸಗಳಿಂದ, ಮತ್ತು ಅವರಿಗೆ ಆಳುವ ವರ್ಗಗಳ ರಾಜಕಾರಣಿಗಳ ಬೆಂಬಲದಿಂದ ಆತಂಕಿತ ರಾಗಿರುವವರಿಗೆ ಇದರಿಂದ ತುಸು ಸಮಾಧಾನವಾಗಿದೆ.

ಆದರೆ ಹೈಕೋರ್ಟ್ ಕೂಡ ಛೀಮಾರಿ ಹಾಕಿದ ಆಳುವ ಪಕ್ಷದ 'ವೋಟ್ ಬ್ಯಾಂಕ್' ರಾಜಕಾರಣದ ಪ್ರಕ್ರಿಯೆಯಲ್ಲಿ 38 ಜನರ ಬಲಿಯಾಗಿರುವುದು ಈ ವಿದ್ಯಮಾನದ ಇನ್ನೊಂದು ಆಯಾಮದತ್ತವೂ ಗಮನ ಹರಿಸುವಂತೆ ಮಾಡಿದೆ. ಇವರಲ್ಲಿ ಹೆಚ್ಚಿನವರು ಬಡ ಸಾಮಾನ್ಯ ಜನಗಳು, ಬಹುಶಃ ತಾವು ಅಖಂಡವಾಗಿ ನಂಬಿರುವ ದೇವರು ಇಂತಹ ಹೊಲಸು ಕೃತ್ಯ ಖಂಡಿತ ಮಾಡಿರಲಿಕ್ಕಿಲ್ಲ ಎಂದು ಬಲವಾಗಿ ನಂಬಿದ್ದವರು.

ಈ 'ಡೇರಾ' ಮುಖ್ಯವಾಗಿ ಹರ್ಯಾಣ, ಪಂಜಾಬ್ ಮತ್ತು ರಾಜಸ್ತಾನದ ಎರಡು ಜಿಲ್ಲೆಗಳು ಮಾತ್ರವಲ್ಲ, ಒಟ್ಟು 14 ರಾಜ್ಯಗಳಲ್ಲಿ ಕೋಟ್ಯಂತರ ಮಂದಿ ಅನುಯಾಯಿಗಳು ಮತ್ತು 2000ಕ್ಕೂ ಹೆಚ್ಚು ಶಾಖೆಗಳನ್ನು ಹೊಂದಿದೆ ಎನ್ನಲಾಗಿದೆ. ಏಕೆ ಈ ಕೋಟ್ಯಂತರ ಮಂದಿ ಈ ರೀತಿ ಕಣ್ಣು ಮುಚ್ಚಿ ಈ ಬಾಬಾಗಳನ್ನು ಸಂತರನ್ನು, ಸ್ವಾಮಿಗಳನ್ನು ನಂಬುತ್ತಾರೆ? ಇವರೆಲ್ಲ ಯಾವ ಸಾಮಾಜಿಕ ಗುಂಪುಗಳಿಗೆ ಸೇರಿದವರು? ಇವರು ಈ ಬಾಬಾ ಇತ್ಯಾದಿಗಳ ಆಶ್ರಯಕ್ಕೆ ಧಾವಿಸುವಂತೆ ಮಾಡುವ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಅಂಶಗಳೇನು? ಒಂದು ಉತ್ತಮ ಭಾರತಕ್ಕಾಗಿ ಬದಲಾವಣೆಗಾಗಿ ಹೋರಾಡುತ್ತಿರುವವರು ಇವನ್ನೆಲ್ಲ ಗಂಭೀರವಾಗಿ ಪರಿಶೀಲಿಸಬೇಕಾಗಿದೆ ಎನ್ನುತ್ತಾರೆ ಹರ್ಯಾಣದ ಹಿರಿಯ ಸಿಪಿಐ(ಎಂ) ಮುಖಂಡ ಇಂದರ್ಜಿತ್ ಸಿಂಗ್ ಈ ಕುರಿತು ಬರೆದಿರುವ ಒಂದು ಲೇಖನದಲ್ಲಿ.

ಪ್ರತಿರೋಧ ಆಂದೋಲನ

ಡೇರಾ ಸಚ್ಚಾ ಸೌದಾದ ಸ್ಥಾಪನೆಯಾದದ್ದು 1948ರಲ್ಲಿ, ಮಸ್ತಾನಾ ಬಲೂಚಿಸ್ತಾನಿ ಎಂಬೊಬ್ಬ ಫಕೀರನಿಂದ, ಇದು ಸಿಖ್, ಹಿಂದೂ ಮತ್ತು ಇಸ್ಲಾಮ್ ಧರ್ಮಗಳ ಯಜಮಾನಿಕೆಗೆ ಪ್ರತಿರೋಧವಾಗಿ ಮೂಡಿ ಬಂದದ್ದು ಎನ್ನಲಾಗಿದೆ. ಈ ಧರ್ಮಗಳ ಕರ್ಮಕಾಂಡಗಳನ್ನು ದೂರಮಾಡಿ ಸರಳ ಆಚರಣೆಗಳನ್ನು ಬೋಧಿಸಿದ ಇದರ ಹಿಂಬಾಲಕರಲ್ಲಿ ಬಹುಪಾಲು, ಸುಮಾರು 70% ದಷ್ಟು ದಲಿತರು, ಈ ಪಂಥದ 'ಡೇರಾ–ಸತ್ಸಂಗ'ಗಳಲ್ಲಿ ಈ ಸಮುದಾಯಗಳ ಮಹಿಳೆಯರೂ ದೊಡ್ಡ ಸಂಖ್ಯೆಯಲ್ಲಿ ಪಾಲುಗೊಳ್ಳಲು ಅವಕಾಶವಾಗಿದೆ.

ಪಂಜಾಬಿನ ಜನಸಂಖ್ಯೆಯಲ್ಲಿ 30% ದಷ್ಟು ಮತ್ತು ಹರ್ಯಾಣದ ಜನಸಂಖ್ಯೆಯಲ್ಲಿ 20% ದಷ್ಟು ದಲಿತರು ಎಂಬುದನ್ನು ಗಮನಿಸಬೇಕು. ಇವರೆಲ್ಲ ಕೃಷಿ ಕೂಲಿಕಾರರು. ಜಾತಿ ಮತ್ತು ವರ್ಗವ್ಯವಸ್ಥೆಯಲ್ಲಿ ಅತ್ಯಂತ ಶೋಷಿತರಾಗಿರುವ, ಶ್ರೇಣಿ ವ್ಯವಸ್ಥೆಯಲ್ಲಿ ಅತ್ಯಂತ ಕೆಳಗಿರುವ ಇವರಿಗೆ ಒಂದು ಗೌರವದ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಸ್ತಿತ್ವವನ್ನು ಕೊಡಲು ಮುಂದಾದ ಒಂದು ಪಂಥ ಇದು ಎಂಬುದನ್ನು ಗಮನಿಸಬೇಕು. ದಲಿತರು ಮತ್ತು ಇತರ ಹಿಂದುಳಿದ ವರ್ಗಗಳ ಕೃಷಿ ಕೂಲಿಕಾರರು ಸರಾಸರಿಗಿಂತ ಹೆಚ್ಚಿರುವ ಹರ್ಯಾಣ ಮತ್ತು ಪಂಜಾಬಿನ ಪ್ರದೇಶಗಳಲ್ಲಿ ಇದು ಹೆಚ್ಚು ಪ್ರಭಾವ ಹೊಂದಿದೆ.

ಈಗ ಇದರ ಅನುಯಾಯಿಗಳಲ್ಲಿ ಸಿಖ್ ದಲಿತರು ಮಾತ್ರವಲ್ಲ, ಹಿಂದೂ, ಇಸ್ಲಾಮ್ ಮತ್ತು ಕ್ರೈಸ್ತ ಧರ್ಮಗಳ, ಹಿಂದುಳಿದ ವರ್ಗಗಳಿಗೆ ಸೇರಿದ ಬಡಜನರೂ ಇದ್ದಾರೆ. ಇವರೆಲ್ಲ ಬಹುಪಾಲು 1960ರ ದಶಕದಲ್ಲಿ ಹಸಿರು ಕ್ರಾಂತಿಯನ್ನು ಕಂಡ ಪ್ರದೇಶಗಳವರು ಎಂಬ ಸಂಗತಿಯತ್ತ ಕಾಂ. ಇಂದರ್ಜಿತ್ ಗಮನ ಸೆಳೆಯುತ್ತಾರೆ. ಈ ಹಸಿರು ಕ್ರಾಂತಿ ಒಂದೆಡೆಯಲ್ಲಿ ರೈತರ ನಡುವೆ ಒಂದು ನವಶ್ರೀಮಂತ ವರ್ಗ ಮೂಡಿ ಬರುವಂತೆ ಮಾಡಿದರೆ, ಇನ್ನೊಂದೆಡೆಯಲ್ಲಿ ಈ ಹೊಸ ವರ್ಗ ಮತ್ತು ಭೂಹೀನ ವಿಭಾಗಗಳ ನಡುವಿನ ಅಂತರವನ್ನೂ, ಅಸಮಾನತೆಯನ್ನೂ ಹೆಚ್ಚಿಸಿತು.

ಧರ್ಮದ ವ್ಯಾಪಾರೀಕರಣ, ರಾಜಕೀಯಕರಣ ಮತ್ತು ಅಪರಾಧೀಕರಣದ ಮಾದರಿ

ಈ ಅಸಮಾನತೆ ನವ–ಉದಾರೀಕರಣದ ಕಳೆದ ಮೂರು ದಶಕಗಳಲ್ಲಿ ಮತ್ತಷ್ಟು ತೀಕ್ಷ್ಣಗೊಂಡಿದೆ. ಇನ್ನೊಂದೆಡೆಯಲ್ಲಿ ಇದು ಈ ವಿಭಾಗಗಳಲ್ಲಿ ಶಿಕ್ಷಣ ಮತ್ತು ಸಾಮಾಜಿಕ ನ್ಯಾಯದ ಬಗ್ಗೆ ಜಾಗೃತಿಯ ಭಾವನೆಯನ್ನು ಉಂಟು ಮಾಡಿದ್ದರೆ ಆಶ್ಚರ್ಯವೇನಿಲ್ಲ. ಇಂತಹ ಸನ್ನಿವೇಶದಲ್ಲಿ ಸಾಂಪ್ರದಾಯಿಕ ಧರ್ಮಗಳ ಹಿಡಿತದ ಹೊರಗಿರುವ ಪರ್ಯಾಯ ವ್ಯವಸ್ಥೆಗಳಾದ ಈ ಡೇರಾದ 'ನಾಮ್ ಚರ್ಚಾ ಘರ್' ಮತ್ತು 'ಸತ್ಸಂಗ'ಗಳು ಅದೆಷ್ಟೇ ಭ್ರಾಮಕವಾಗಿದ್ದರೂ ಒಂದು ಸಬಲೀಕರಣದ, ಭದ್ರತೆಯ ಭಾವನೆಯನ್ನು ನೀಡಿವೆ ಎನ್ನುತ್ತಾರೆ ಜನಪರ ಚಿಂತಕರು ಕೂಡ.

ಇದರಲ್ಲಿ ಬಹಳ ಮಂದಿ ಕೃಷಿಕೂಲಿಕಾರರು, ಮತ್ತು ದುಡಿಮೆಗಾರರಾಗಿದ್ದರೂ ಕೃಷಿಕೂಲಿಕಾರ ಸಂಘಕ್ಕೆ ಅಥವ ಇತರ ವೃತ್ತಿ ಸಂಘಟನೆಗಳಿಗೆ ಬಂದವರ ಸಂಖ್ಯೆ ಬಹಳ ಕಡಿಮೆ. ಬಹುಪಾಲು ಮಂದಿ ತಮ್ಮ ಆರ್ಥಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಒತ್ತಾಯಗಳಿಂದಾಗಿ ಡೇರಾದ 'ಸತ್ಸಂಗ' ಇತ್ಯಾದಿಗಳತ್ತವೇ ಆಕರ್ಷಿತರಾಗಿದ್ದಾರೆ. ಇದಕ್ಕೆ ಪ್ರಜಾಪ್ರಭುತ್ವವಾದಿ ಆಂದೋಲನದ ದೌರ್ಬಲ್ಯ ಕಾರಣ ಎನ್ನುತ್ತಾರೆ ಕಾಂ. ಇಂದರ್ಜಿತ್. ಪಂಜಾಬಿನಲ್ಲಿ ಉಗ್ರವಾದದ ಅವಧಿಯಲ್ಲಿ ಜನಪರ ಸಾಂಸ್ಕೃತಿಕ ಆಂದೋಲನದ ಪ್ರಭಾವ ಇಳಿಮುಖವಾದದ್ದು ಕೂಡ ಇನ್ನೊಂದು ಕಾರಣ ಎಂದು ಅವರು ಹೇಳುತ್ತಾರೆ. ಇಂತಹ ಅನುಯಾಯಿಗಳ ಒಂದು ನೆಲೆಯನ್ನು ಹೊಂದಿರುವ 'ಬಾಬಾ'ಗಳನ್ನು ಆಳುವ ವರ್ಗಗಳ ರಾಜಕೀಯ ಪಕ್ಷಗಳು ಪೋಷಿಸುತ್ತಿರುವುದನ್ನು ನಾವು ಕಾಣುತ್ತೇವೆ. ಏಕೆಂದರೆ ಈ ಪಕ್ಷಗಳಿಗೆ ಜನಗಳ ಕಾಳಜಿಗಳಿಗಿಂತ ಅಧಿಕಾರ ದಕ್ಕಿಸಿಕೊಳ್ಳುವುದೇ ಮುಖ್ಯವಾಗಿ ಅವರು ಈ 'ಬಾಬಾ'ಗಳು ಒದಗಿಸುವ 'ವೋಟ್ ಬ್ಯಾಂಕು'ಗಳನ್ನು ಆಶ್ರಯಿಸುತ್ತಾರೆ. ಅಲ್ಲದೆ ಈ ಬಾಬಾಗಳನ್ನು ಶೋಷಕ ವ್ಯವಸ್ಥೆಯ ಒಳಕ್ಕೆ ಸೆಳೆದು ಪ್ರತಿರೋಧವನ್ನು ತಗ್ಗಿಸುವ ಕೆಸಲಕ್ಕೂ ನೆರವಾಗುತ್ತದೆ. ಇದು ಆ 'ಬಾಬಾ'ಗಳನ್ನು ಇನ್ನಷ್ಟು ಬಲಶಾಲಿಯಾಗಿಸುತ್ತದೆ. ಧರ್ಮದ ವ್ಯಾಪಾರೀಕರಣ, ರಾಜಕೀಯಕರಣ ಮತ್ತು ಕೊನೆಗೆ ಅಪರಾಧೀಕರಣದ ಪರಿ ಇದು.

ಈಗ ಜೈಲು ಸೇರಿರುವ ಗುರ್ಮಿತ್ ಸಿಂಗ್ ಮತ್ತು ಆತ ಬೆಳೆಸಿದ ವಿಸ್ತಾರವಾದ ಸಾಮ್ರಾಜ್ಯ ಈ ವಿದ್ಯಮಾನಕ್ಕೆ ಒಂದು ಒಳ್ಳೆಯ ಉದಾಹರಣೆ. ಆತನಿಗಿಂತ ಮೊದಲಿದ್ದ ಈ ಡೇರಾದ ಎರಡನೇ ಮುಖ್ಯಸ್ಥ ಶಾಹ ಸತ್ನಾಮ್‌ಜಿಯವರಿಂದ ಈತ ಮುಖ್ಯಸ್ಥನ ಪೀಠ ಪಡೆದದ್ದು 1990ರಲ್ಲಿ, ಅಂ–ದರೆ ಆತ ಈ ಜನಪರ ಪ್ರತಿರೋಧವೊಂದನ್ನು ವಿಕೃತಗೊಳಿಸಿ ವೈಯಕ್ತಿಕ ಸಾಮ್ರಾಜ್ಯವನ್ನು ಕಟ್ಟಿಕೊಳ್ಳಲು ಸಾಧ್ಯವಾದದ್ದು ನವ–ಉದಾರೀಕರಣದ ಅವಧಿಯಲ್ಲಿ, ಅದು ನಿರ್ಮಿಸಿದ ವಾತಾವರಣದಲ್ಲಿಯೇ ಎಂಬುದನ್ನು ಗಮನಿಸಬೇಕು.

ವೈರುಧ್ಯಮಯ ಸನ್ನಿವೇಶ

ಕರ್ಷಕ ಬಿಕ್ಕಟ್ಟು ಉಲ್ಬಣಗೊಂಡಿರುವ ಈ ಅವಧಿಯಲ್ಲಿ ಪಂಜಾಬಿನಲ್ಲಿ ಮತ್ತು ಅದ–ಕ್ಕೆ ಹೊಂದಿಕೊಂಡಿರುವಂತಹ ಹರ್ಯಾಣದ ಪ್ರದೇಶಗಳಲ್ಲಿ ಜಾತಿ ಧ್ರುವೀಕರಣ, ಅಪರಾಧೀಕರಣ, ಮಾದಕ ಪದಾರ್ಥಗಳ ವ್ಯಸನ; ಮಹಿಳೆಯರ ದಮನ ಮುಂತಾದ ಹಲವಾರು ಸಾಮಾಜಿಕ ಪ್ರಶ್ನೆಗಳು ಎದ್ದಿದ್ದು ಈ ಭೀಕರ ವಾತಾವರಣದಲ್ಲಿ ಡೇರಾ ಸಚ್ಚಾ ಸೌದಾದ 'ಸಾಮಾಜಿಕ ಸುಧಾರಣೆ'ಯ ಸ್ವರೂಪ, ಬಡಹೆಣ್ಣುಮಕ್ಕಳ ಮದುವೆಗಳು, ಮಾದಕಪದಾರ್ಥಗಳ ವ್ಯಸನವನ್ನು ಬಿಡಿಸುವುದು, ವೈದ್ಯಕೀಯ ಸೇವೆ, ರಕ್ತದಾನ, ಸ್ವಚ್ಛತಾ ಆಂದೋಲನ, ಜಾತಿ ಬೇಧ–ಭಾವ ನಡೆಸದಿರುವುದು ಇತ್ಯಾದಿಗಳು ಅದಕ್ಕೊಂದು ವಿಶೇಷ ಸ್ಥಾನಮಾನವನ್ನು ಕಲ್ಪಿಸಿವೆ. ಇನ್ನೊಂದೆಡೆಯಲ್ಲಿ ಈ ವಿಭಾಗಗಳು ತಮ್ಮ ಶೋಷಣೆ ಮತ್ತು ದಮನದ ವಿರುದ್ಧ ತಮ್ಮ ಹಕ್ಕುಗಳಿಗಾಗಿ ಹೋರಾಟಕ್ಕೆ ಇಳಿಯದಂತೆ ತಡೆದು, ಅವರ ಧಾರ್ಮಿಕ ಮತ್ತು ಆಧ್ಯಾತ್ಮಿಕ ಭಾವನೆಗಳನ್ನು ದುರುಪಯೋಗ ಪಡಿಸಿಕೊಂಡು ಅವರು ಆಳುವ ವರ್ಗಗಳ ರಾಜಕೀಯ ಪಕ್ಷಗಳ ಹಿಂದೆ ಹೋಗುವಂತಹ ವೈರುಧ್ಯಮಯ ಸನ್ನಿವೇಶವನ್ನೂ ಸೃಷ್ಟಿಸಿವೆ.

ದೇಶದ ಇತರೆಡೆಗಳಲ್ಲಿ ಕಾಣುವಂತೆ ಆರ್ಥಿಕ ಪ್ರಶ್ನೆಗಳಲ್ಲಿ ಪ್ರಜಾಪ್ರಭುತ್ವವಾದಿ ಆಂದೋಲನದಲ್ಲಿ ಭಾಗವಹಿಸುವ, ಕೆಂಬಾವುಟ ಹಿಡಿಯುವ ಮಂದಿ ಕೂಡ ಈ ಡೇರಾಗಳು, ಸತ್ಸಂಗಗಳೊಂದಿಗೆ ತಮ್ಮ ಸಾಮಾಜಿಕ ಮತ್ತು ಆಧ್ಯಾತ್ಮಿಕ ಸಂಬಂಧಗಳನ್ನು ಹಾಗೆಯೇ ಇಟ್ಟುಕೊಂಡಿದ್ದಾರೆ. ಪ್ರಜಾಪ್ರಭುತ್ವವಾದಿ ಸಂಘಟನೆಗಳು ಆರ್ಥಿಕ ಪ್ರಶ್ನೆಗಳ ಮೇಲೆಯೇ ಗಮನ ಕೇಂದ್ರೀಕರಿಸಿ, ಸಾಮಾಜಿಕ ಆಯಾಮಗಳನ್ನು ನಿರ್ಲಕ್ಷಿಸಿರುವುದರ ಪರಿಣಾಮ ಇದು ಎಂದು ಕಾಂ ಇಂದರ್ಜಿತ್ ಹೇಳುತ್ತಾರೆ.

ಇಂತಹ ಸನ್ನಿವೇಶದಲ್ಲಿ ತಕ್ಷಣಕ್ಕೆ ಈ ಕೋಟ್ಯಂತರ ಜನರನ್ನು ಗೊಂದಲ ಮತ್ತು ಕುರುಡು ನಂಬಿಕೆಯ ಸನ್ನಿವೇಶದಿಮದ ಹೊರತರಬೇಕಾಗಿದೆ. ಡೇರಾಗಳು ಪಾರದರ್ಶಕವಾಗಿ ಕೆಲಸ ಮಾಡುವಂತೆ ಮಾಡಬೇಕಾಗಿದೆ. ಅವುಗಳ ಜಮೀನುಗಳ ಮೇಲೆ ಭೂಮಿತಿಗಳನ್ನು ಅನ್ವಯಿಸಬೇಕು. ಅಪರಾಧಿಗಳ ವಿರುದ್ಧ ದೂರು ನೀಡಿರುವ ಮತ್ತು ಸಾಕ್ಷ್ಯ ನೀಡಿರುವ ಎಲ್ಲ ಹುಡುಗಿಯರಿಗೆ ಭದ್ರತೆ ಒದಗಿಸಬೇಕು. ಜನಗಳನ್ನು ಬಿಜೆಪಿಯ ನಾಚಿಕೆಗೇಡಿ ಪಾತ್ರದ ವಿರುದ್ಧ ಅಣಿನೆರೆಸಬೇಕು. ನಿಜವಾದ ಆಪರಾಧಿಗಳಿಗೆ ಶಿಕ್ಷೆಯಾಗುವಂತೆ ಮತ್ತು ಅಮಾಯಕರನ್ನು ಇದರಲ್ಲಿ ಸಿಗಿಸಿ ಹಾಕದಂತೆ ನೋಡಿಕೊಳ್ಳಬೇಕು ಎನ್ನುವ ಕಾಂ. ಇಂದರ್ಜಿತ್ ದೂರಗಾಮೀ ಕಾರ್ಯಕ್ರಮದಲ್ಲಿ, ಸಾಮಾಜಿಕ ಆಂದೋಲನವನ್ನು ಬಲಪಡಿಸಬೇಕು, ಈ ಮೂಲಕ ಕಂದಾಚಾರ, ಅನಕ್ಷರತೆ, ಕುರುಡು ನಂಬಿಕೆ, ಸಂಪ್ರದಾಯಶರಣತೆ, ಜಾತಿವಾದ, ಕೋಮುವಾದ ಇತ್ಯಾದಿಗಳ ವಿರುದ್ಧ ಹಾಗೂ ವಿಚಾರವಾದ, ಮತ್ತು ಸಾಮರಸ್ಯದ ಮೌಲ್ಯಗಳತ್ತ ಜಾಗೃತಿಯನ್ನು ಮೂಡಿಸಬೇಕು, ಇದು ವರ್ಗಹೋರಾಟದ ಅನಿವಾರ್ಯ ಭಾಗವಾಗಬೇಕು ಎನ್ನುತ್ತಾರೆ.

ಹರ್ಯಾಣದ ಮುಖ್ಯಮಂತ್ರಿಗಳೇ, ಈಗೇಕೆ ಬೇರೆ 'ಶುದ್ಧೀಕರಣ' ಕಾರ್ಯಾಚರಣೆ?

"ಡೇರಾ ಸಚ್ಚಾ ಸೌದಾದ ಮುಖ್ಯಾಲಯದಲ್ಲ ಹರ್ಯಾಣದ ಪೋಲೀಸರು ನಡೆಸಿದ 'ಶುದ್ಧೀಕರಣ' ಕಾರ್ಯಾಚರಣೆಯಲ್ಲಿ ಕೇಳಬಂದಿರುವ ಸಂಗತಿಗಳು ಹೌಹಾರುವಂತೆ ಮಾಡಿವೆ–ಶಿಷ್ಯೆಯರ ವಾಸದ ಹಾಸ್ಟೆಲ್‌ಗೆ ಸೇರಿದಂತೆ ಹಲವು ಗುಪ್ತ ಸುರಂಗಗಳು, ಗರ್ಭಪಾತಗಳ ಸಾಕ್ಷ್ಯಗಳು, ಒಂದು ಚರ್ಮ ಬ್ಯಾಂಕ್, ಆಸ್ಪತ್ರೆಗೆ ಅನಾಯಧೇಯ ಶವದಾನಗಳು, ಸ್ಫೋಟಕಗಳ ಕಾರ್ಖಾನೆ, ಮದ್ದು ಗುಂಡುಗಳು, ಎಕೆ–47 ಇತ್ಯಾದಿ ಇತ್ಯಾದಿ.



ಈ 'ಶುದ್ಧೀಕರಣ'ಕ್ಕೆ ತಮ್ಮನ್ನು ಹೃದಯಪೂರ್ವಕ ಅಭಿನಂದಿಸಬೇಕೋ ಬೇಡವೋ ಗೊತ್ತಾಗುತ್ತಿಲ್ಲ .....ಆದರೆ ನನಗಿನ್ನೂ ಮರೆವು ಬಂದಿಲ್ಲ. ನೀವು ಮತ್ತು ನಿಮ್ಮ ಮಂತ್ರಿಗಳು, ಪ್ರಧಾನ ಮಂತ್ರಿ ನರೇಂದ್ರ ಮೋದಿ ಮತ್ತು ಅವರ ಮಂತ್ರಿಗಳೂ ಕೂಡ ಈ ಭಯಾನಕ ಮನುಷ್ಯನನ್ನು ವೋಟುಗಳಿಗಾಗಿ ಒಲಿಸಲು ಪ್ರಯತ್ನಿಸಿದ್ದು, ಅವನನ್ನು ಸನ್ಮಾನಿಸಿದ್ದುದರ ನೆನಪು ಇನ್ನೂ ಹಸಿರಾಗಿಯೇ ಇದೆ,......

ಹೇಳಿ ಮುಖ್ಯಮಂತ್ರಿಗಳೇ, ನಿಮ್ಮ ಆಡಳಿತಕ್ಕೆ, ನಿಮ್ಮ ಪೋಲೀಸಿಗೆ, ಗುಪ್ತಚರ ಪಡೆಗಳಿಗೆ ಇದರ ತುಸುವಾದರೂ ಸುಳಿವೇ ಸಿಕ್ಕಿರಲಿಲ್ಲ ಎಂದು ನಂಬಬೇಕೇ? ನಂಬುತ್ತೇನೆ. ಆದರೆ ಆಗ ನಾನೂ ನೀವು ರಾಜೀನಾಮೆ ಕೊಡಲೇಬೇಕೇ ಎಂದು ಒತ್ತಾಯಿಸುವವರ ಸಾಲಿಗೆ ಸೇರಬೇಕಾಗುತ್ತದೆ. ಏಕೆಂದರೆ ಇಂತಹ ಭೀಕರ ಕ್ರಿಮಿನಲ್ ಚಟುವಟಿಕೆಗಳು ನಡೆಯುತ್ತಿದ್ದರೂ ಗೊತ್ತೇ ಆಗಿರದಿದ್ದರೆ ಸರಕಾರ ನಡೆಸಲು ನೀವು ಲಾಯಖ್ಖಲ್ಲ"

–ದಿಸಿಟಿಝುನ್.ಇನ್ ವೆಬ್ ಪತ್ರಿಕೆಯಲ್ಲಿ (ಸೆಪ್ಟಂಬರ್ 11 ರಂದು) ಪ್ರಕಟವಾದ ಒಂದು ಬಹಿರಂಗ ಪತ್ರದಿಂದ

ಅಚ್ಛೇ ದಿನ್‌ಗಳ ಶೋಚನೀಯ ಅಂಕಿ-ಅಂಶಗಳು: ಎಲ್ಲವೂ ಕೇವಲ 'ತಾಂತ್ರಿಕ'ವಯ್ಯಾ!

ಕೇಂದ್ರ ಸರಕಾರದ ಆರ್ಥಿಕ ಸ್ಥಿತಿಗತಿ ಮೊದಲ ತ್ರೈಮಾಸಿಕದಲ್ಲಿ ಹದಗೆಟ್ಟಿದೆ-ಆರ್‌ಬಿಐ, ಜಿಡಿಪಿ ಸಂಖ್ಯೆಗಳ ಇಳಿಕೆ ನಿಲ್ಲುವ ಸಂಭವ ಇಲ್ಲ-ಎಸ್‌ಬಿಐ, ಕೈಗಾರಿಕಾ ಉತ್ಪಾದನೆ 6.5% ದಿಂದ 1.7% ಕ್ಕೆ ಇಳಿಕೆ, ಆರ್ಥಿಕ ಮಂದಗತಿಯಿಂದಾಗಿ ಮನರೇಗಕ್ಕೆ ವಿಪರೀತ ಬೇಡಿಕೆ, ಆಹಾರದ ಹಣದುಬ್ಬರ ಕಳೆದ 4ತಿಂಗಳ ಗರಿಷ್ಟ ಮಟ್ಟಕ್ಕೆ- ಇವು ಕಳೆದ ವಾರದ ಆರ್ಥಿಕ ಸುದ್ದಿಗಳು.

ಈ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ, ಅಂದರೆ ಎಪ್ರಿಲ್-ಜೂನ್ 2017ರಲ್ಲಿ ರೆವಿನ್ಯೂ ಕೊರತೆ ಮತ್ತು ಹಣಕಾಸು ಕೊರತೆ ಒಟ್ಟು ಮೊತ್ತದಲ್ಲಿಯೂ ಬಜೆಟ್ ಅಂದಾಜಿನ ಶೇಕಡಾವಾರಾಗಿಯೂ ಎಪ್ರಿಲ್-ಜೂನ್ 2016ಕ್ಕೆ ಹೋಲಿಸಿದರೆ ಏರಿದೆ ಎಂದು ಭಾರತೀಯ ರಿಝರ್ವ್ ಬ್ಯಾಂಕ್‌ನ(ಆರ್‌ಬಿಐ) ಇತ್ತೀಚಿನ ವಾರ್ಷಿಕ ವರದಿ ಹೇಳಿದೆ. ಅಂದರೆ ಕೇಂದ್ರ ಸರಕಾರದ ಹಣಕಾಸು ಪರಿಸ್ಥಿತಿ ಹದಗೆಟ್ಟಿದೆ-ಆರ್‌ಬಿಐ ವರದಿ ಇದೇ ಪದವನ್ನು ಬಳಸಿದೆ ಎಂದು ವರದಿಯಾಗಿದೆ.

ಅದರ ಹಿಂದಿನ ದಿನ (ಸಪ್ಟಂಬರ್10) ಪ್ರಕಟವಾದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ)ವರದಿಯೊಂದರ ಪ್ರಕಾರ ಜಿಡಿಪಿ ಬೆಳವಣಿಗೆ ದರ ಮೊದಲ ತ್ರೈಮಾಸಿಕದಲ್ಲಿ 5.7%ಕ್ಕೆ ಇಳಿದಿರುವುದು ಕೇವಲ ಜಿಎಸ್‌ಟಿ ಉಂಟು ಮಾಡಿರುವ ತಾತ್ಕಾಲಿಕ ಕಾರಣಗಳಿಂದಾಗಿ, ಅಥವ ನೋಟುರದ್ಧತಿಯಿಂದಾಗಿ ಮಾತ್ರವೇ ಅಲ್ಲ, ಬದಲಾಗಿ ಆರ್ಥಿಕ ವ್ಯವಸ್ಥೆಯಲ್ಲಿನ ಸಂರಚನಾತ್ಮಕ ಕಾರಣಗಳಿಂದಾಗಿ ಎಂದಿದೆ. ಬಂಡವಾಳ ಸರಕುಗಳು, ಬಳಕೆ ಸರಕುಗಳು ಮತ್ತು ಇಂಜಿನಿಯರಿಂಗ್ ಸರಕುಗಳ ಉತ್ಪಾದನೆಯಂತಹ ಮಹತ್ವದ ವಲಯಗಳಲ್ಲಿ ಪರಿಸ್ಥಿತಿ ಶೋಚನೀಯವಾಗಿದೆ, ಇದರಿಂದಾಗಿ ಮುಂದಿನ ಮೂರು ತ್ರೈಮಾಸಿಕಗಳಲ್ಲಂತೂ ಜಿಡಿಪಿ ಬೆಳವಣಿಗೆ ದರ ಮೊದಲಿನ ಮಟ್ಟಕ್ಕೆ ಬರುವ ಸಾಧ್ಯತೆ ಇಲ್ಲ ಎಂದು ಎಸ್‌ಬಿಐ ವಿಶ್ಲೇಷಣೆ ಹೇಳುತ್ತದೆ.

ಆರ್ಥಿಕ ವ್ಯವಸ್ಥೆಯಲ್ಲಿ ಸರಕು ಉತ್ಪಾದನೆಗಳ ಪ್ರಮಾಣವನ್ನು ತೋರಿಸುವ ಕೈಗಾರಿಕಾ ಉತ್ಪಾದನಾ ಸೂಚ್ಯಂಕ(ಐಐಪಿ) ಜುಲೈ ತಿಂಗಳಲ್ಲಿ 1.2%ಕ್ಕೆ ಇಳಿದಿದೆ. ಇದು ಭಾರೀ ಪ್ರಮಾಣದ ಇಳಿಕೆ-ಜುಲೈ 2016 ರಲ್ಲಿ ಇದು 4.5% ಇತ್ತು. ಎಪ್ರಿಲ್-ಜುಲೈ 2017ರಲ್ಲಿ ಐಐಪಿ ಬೆಳವಣಿಗೆ ದರ 1.7%, ಕಳೆದ ವರ್ಷ ಇದೇ ಅವಧಿಯಲ್ಲಿ ಅದು 6.5% ಇತ್ತು . ಇವೆಲ್ಲ ಸಪ್ಟಂಬರ್ 12ರಂದು ಕೇಂದ್ರೀಯ ಅಂಕ-ಅಂಶಗಳ ಸಂಘಟನೆ(ಸಿಎಸ್‌ಒ) ಪ್ರಕಟಿಸಿರುವ ಮಾಹಿತಿಗಳು.



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ವಿವಿಧ ಕೈಗಾರಿಕಾ ಉತ್ಪನ್ನಗಳು ಈ ಸೂಚ್ಯಂಕದ 77.6% ದಷ್ಟಿವೆ. ಈ ವಲಯದಲ್ಲಿ ಬೆಳವಣಿಗೆ ದರ 5.3% ದಿಂದ ಕೇವಲ 0.1% ಕ್ಕೆ ಇಳಿದಿದೆ. ಬಂಡವಾಳ ಸರಕುಗಳು, ಅಂದರೆ ಮೂಲರಚನೆಗಳಲ್ಲಿ ಹೂಡಿಕೆಯ ಮಟ್ಟ 8.8%ದಿಂದ 1% ಕ್ಕೆ ಇಳಿದಿದೆ. ಉತ್ಪಾದನಾ ವಲಯದ 23 ಉದ್ದಿಮೆಗಳಲ್ಲಿ ಒಟ್ಟು 8 ಮಾತ್ರ ಜುಲೈ 2017ರಲ್ಲಿ ಹಿಂದಿನ ವರ್ಷಕ್ಕಿಂತ ಹೆಚ್ಚಿನ ಬೆಳವಣಿಗೆಯನ್ನು ತೋರಿಸಿವೆ.

ಇವೆಲ್ಲ ಮಾಹಿತಿಗಳಿಗೆ 'ಕಿರೀಟಪ್ರಾಯ'ವಾಗಿ ಸಪ್ಟಂಬರ್ 14ರಂದು ಪ್ರಕಟವಾದ ಸರಕಾರದ ಕೈಗಾರಿಕಾ ಧೋರಣೆ ಮತ್ತು ಉತ್ತೇಜನನಾ ಇಲಾಖೆ(ಡಿಐಪಿಪಿ) ಪ್ರಕಟಿಸಿರುವ ಸಗಟು ಬೆಲೆಗಳ ಕುರಿತ ಅಂಕಿ-ಅಂಶಗಳ ಪ್ರಕಾರ ಸಗಟು ಬೆಲೆಗಳ ಹಣದುಬ್ಬರ ದರ ಆಗಸ್ಟ್ ತಿಂಗಳಲ್ಲಿ 3.24%. ಇದು ಈ ಹಣಕಾಸು ವರ್ಷದ 'ಗರಿಷ್ಟ ಮಟ್ಟ.. ಇದು ಮುಖ್ಯವಾಗಿ ಆಹಾರ ಮತ್ತು ಇಂಧನ ಬೆಲೆಗಳ ಏರಿಕೆಯಿಂದಾಗಿ. ಆಹಾರ ಹಣದುಬ್ಬರವಂತೂ ಜುಲೈನಲ್ಲಿ 2.15% ಇದ್ದದ್ದು, ಆಗಸ್ಟ್‌ನಲ್ಲಿ 5.75%ಕ್ಕೆ ಜಿಗಿದಿದೆ.

ಇನ್ನೊಂದೆಡೆಯಲ್ಲಿ ಗ್ರಾಮಿಣ ಮೂಲದ ಜನಗಳ ಪರಿಸ್ತಿತಿ ಮತ್ತಷ್ಟು ಹದಗೆಟ್ಟಿರುವುದನ್ನು ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯ ಅಂಕಿ-ಅಂಶಗಳು ತೋರಿಸುತ್ತವೆ ಎಂದು ಪರಿಣಿತರು ಹೇಳುತ್ತಿದ್ದಾರೆ. ಈ ಯೋಜನೆಯ ಅಡಿಯಲ್ಲಿ ಉದ್ಯೋಗಕ್ಕೆ ಅರ್ಜಿ ಹಾಕುತ್ತಿರುವವರ ಸಂಖ್ಯೆಯಲ್ಲಿ ಭಾರಿ ಹೆಚ್ಚಳ ಕಾಣುತ್ತಿದೆ, ಇದಕ್ಕೆ ಕಾರಣ ಆರ್ಥಿಕ ಮಂದಗತಿ ಮತ್ತು ಹಲವೆಡೆಗಳಲ್ಲಿ ಬರ ಪರಿಸ್ಥಿತಿ ಎನ್ನಲಾಗುತ್ತಿದೆ. ಗ್ರಾಮೀಣಾಭಿವೃದ್ಧಿ ಇಲಾಖೆ ಇದಕ್ಕಾಗಿ ಪಡೆದಿರುವ ಮೊತ್ತದಲ್ಲಿ ಮುಕ್ಕಾಲು ಪಾಲು ಈಗಾಗಲೇ ಖರ್ಚಾಗಿದ್ದು, ಉಳಿದದ್ದು ಮುಂದಿನ ಎರಡು ತಿಂಗಳಲ್ಲಿ ಖಾಲಿಯಾಗಬಹುದಾದ್ದರಿಂದ ಅದು ಹಣಕಾಸು ಇಲಾಖೆಯಿಂದ ಹೆಚ್ಚಿನ ಹಣ ಕೇಳಿರುವುದಾಗಿ ವರದಿಯಾಗಿದೆ. ಅಂದರೆ ಈವರ್ಷವೂ ಮನರೇಗದಲ್ಲಿ ಕೆಲಸ ಮಾಡಿದವರಿಗೆ ಕೂಲಿ ನೀಡಿಕೆಯಲ್ಲಿ ಮತ್ತಷ್ಟು ವಿಳಂಬ ಸಾಧ್ಯತೆಯೇ ಹೆಚ್ಚು ಎಂದು ಈ ಕ್ಷೇತ್ರದಲ್ಲಿ ಸಕ್ರಿಯರಾಗಿರುವವರು ಹೇಳುತ್ತಿದ್ದಾರೆ.

ಇಂತಹ ಶೋಚನೀಯ ಅಂಕಿ-ಅಂಶಗಳು ಒಂದರ ಮೇಲೊಂದರಂದರಂತೆ ಬರುತ್ತಿರುವಾಗ ಅದನ್ನು ನಿರಾಕರಿಸಲಾಗದೆ ಅಚ್ಚೇದಿನ್‌ವಾಲಾಗಳು ಪೇಚಾಡುತ್ತಿರುವಾಗ ಅವರ ಪಕ್ಷದ ಅಧ್ಯಕ್ಷರು ಈ ಎಲ್ಲ ಇಳಿಕೆಗಳು 'ತಾಂತ್ರಿಕ ಕಾರಣಗಳಿಂದಾಗಿಯಷ್ಟೇ' ಎಂದು ಹೇಳಿ ನಗೆಪಾಟಲಾಗಿದ್ದಾರೆ.





ನ್ಯೂ ಇಂಡಿಯಾ-2022

35 ಎ ಕಲಮು ಮತ್ತು ರೊಹಿಂಗ್ಯ ನಿರಾಶ್ರಿತರ ಪ್ರಶ್ನೆ: ಇಬ್ಬಂದಿತನ 'ನ್ಯೂ ಇಂಡಿಯಾ-2022 ದ ಜೀವಾಳ!

ಜಮ್ಮು-ಕಾಶ್ಮೀತದ ಸ್ವಾಯತ್ತತೆಯ ಅಭಿನ್ನ ಅಂಗವಾದ ಸಂವಿಧಾನದ 35 ಎ ಕಲಮಿನ ಪ್ರಶ್ನೆಯಲ್ಲಿ ಕಾಶ್ಮೀರಗಳ ಭಾವನೆಗಳಿಗೆ ವಿರುದ್ಧವಾಗಿ ಏನೂ ಮಾಡುವುದಿಲ್ಲ ಎಂದು ಕೇಂದ್ರ 'ಗೃಹಮಂತ್ರಿಗಳು ಕಾಶ್ಮೀರದಲ್ಲಿ ಹೇಳಿದ್ದಾರೆ. ಹಾಗಿದ್ದರೆ ಸಂಘ ಪರಿವಾರದ ಒಂದು ಸಂಘಟನೆ ಸುಪ್ರಿಂ ಕೋರ್ಟಿನಲ್ಲಿ ಇದನ್ನು ಪ್ರಶ್ನಿಸಿರುವ ಅರ್ಜಿಯ ವಿಚಾರಣೆಯ ವೇಳೆಗೆ ತಾನೂ ಭಾಗೀದಾರನಾಗಿರುವ ರಾಜ್ಯ ಸರಕಾರ ಬಯಸುವಂತೆ ಅದನ್ನು ವಿರೋಧಿಸುವ ಬದಲು ಅಟಾರ್ನಿ ಜನರಲ್ ಈ ಬಗ್ಗೆ ಚರ್ಚೆ ಬೇಕಾಗಿದೆ ಎಂದಿರುವುದು ಏಕೆ ಎಂಬುದು ವೀಕ್ಷಕರಿಗೆ ಆಗಿರುವ ಗೊಂದಲ. ಶ್ರೀನಗರದಿಂದ ಜಮ್ಮುಗೆ ಹೋದಾಗ, ದಿಲ್ಲಿಗೆ ಮರಳಿದಾಗಲೂ ಕೇಂದ್ರ ಗೃಹಮಂತ್ರಿಗಳ ಅಭಿಪ್ರಾಯ ಇದೇ ಇರುತ್ತದೆಯೇ ಎಂಬ ಸಂದೇಹ ಅವರಿಗೆ.

ರೊಹಿಂಗ್ಯ ನಿರಾಶ್ರಿತರನ್ನು ಹೊರಹಾಕುವ ಯೋಜನೆಯೇನೂ ಸರಕಾರಕ್ಕೆ ಇಲ್ಲ, ಅಕ್ರಮ ವಲಸಿಗರನ್ನು ಗುರುತಿಸಿ ಎಂದಷ್ಟೇ ರಾಜ್ಯಸರಕಾರಗಳಿಗೆ ತಿಳಿಸಲಾಗಿದೆ ಎಂದು ಗೃಹ ರಾಜ್ಯಮಂತ್ರಿಗಳು ಸಪ್ಟಂಬರ್ 11ರಂದು ಹೇಳಿದ್ದಾರೆ. ಆದರೆ ಈ ಹಿಂದೆ ಆಗಸ್ಟ್ 8ರ ಅಧಿಕೃತ ಸೂಚನೆಯಲ್ಲಿ ಗೃಹಮಂತ್ರಾಲಯ ರೊಹಿಂಗ್ಯಗಳನ್ನು ಹೊರಹಾಕಲು ವ್ಯವಸ್ಥೆ ಮಾಡಬೇಕು ಎಂದು ತಿಳಿಸಿದೆ ಎಂದು ವರದಿಯಾಗಿತ್ತು. ಅಲ್ಲದೆ ಸರಕಾರದ ಪರ ವಕೀಲರು ಸುಪ್ರಿಂ ಕೋರ್ಟಿನಲ್ಲಿ ಅವರನ್ನು ಹೊರಕಳಿಸುವುದಿಲ್ಲ ಎಂದು ಹೇಳಲು ಸಿದ್ಧರಾಗಿರಲಿಲ್ಲ. ಗೃಹರಾಜ್ಯಮಂತ್ರಿಗಳು ಈಗಿನ ಹೇಳಿಕೆ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಹೈಕಮಿಶನರ್ ಖೇದದ ನಂತರ ಬಂದಿರುವಂತದ್ದು.

ಹರ್ಯಾಣ ಬಿಜೆಪಿ ಮುಖಂಡನ ಮಗನಿಗೆ ಜಾಮೀನು ನಿರಾಕರಣೆ: ಐಎಎಸ್ ಅಧಿಕಾರಿಯ ಟ್ರಾನ್ಸ್‌ಫರ್

ಚಂಡೀಗಡದಲ್ಲಿ ಐಎಎಸ್ ಅಧಿಕಾರಿ ವಿ ಎಸ್ ಕುಂಡು ಅವರ ಮಗಳನ್ನು ಬೆನ್ನಟ್ಟಿ ಅಪಹರಿಸುವ ಅಪರಾಧದ ಮೇಲೆ ಬಂಧಿಸಲ್ಪಟ್ಟಿರುವ ಹರ್ಯಾಣ ಬಿಜೆಪಿ ಅಧ್ಯಕ್ಷರ ಮಗನಿಗೆ ಜಾಮೀನು ನಿರಾಕರಿಸಿದ ಬೆನ್ನಲ್ಲೇ ಪ್ರವಾಸೋದ್ಯಮ ಇಲಾಖೆಯ ಮುಖ್ಯಸ್ಥರಾಗಿದ್ದ ಈ ಹಿರಿಯ ಅಧಿಕಾರಿ ಕುಂಡು ಅವರನ್ನು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗೆ ಅಡಿಶನಲ್ ಮುಖ್ಯ ಕಾರ್ಯದರ್ಶಿಯಾಗಿ ವರ್ಗಾಯಿಸಲಾಗಿದೆ.

ಪೆಹ್ಲೂ ಖಾನ್‌ರ ಹೊಡೆದು ಸಾಯಿಸಿದ್ದು ನಿಜ, ಆದರೆ ಅಲ್ಲ!

ಇದೀಗ ನವಭಾರತ ನಿರ್ಮಾಣದ ಹೊಸ ತರ್ಕ. ಐದು ತಿಂಗಳ ಹಿಂದೆ ರಾಜಸ್ತಾನದ ಆಳ್ವರ್‌ನಲ್ಲಿ 'ಗೋರಕ್ಷಕ' ಗೂಂಡಾಗಳು ಹೊಡೆದು ಸಾಯಿಸಿದ ಹರ್ಯಾಣದ ರೈತ ಪಹ್ಲೂ ಖಾನ್ ಸಾಯುವ ಮೊದಲು ಹೆಸರಿಸಿದ ಆರು ಮಂದಿಗೆ ರಾಜಸ್ತಾನ ಪೋಲೀಸ್ ಆಧಾರಗಳಿಲ್ಲ ಎಂದು ಹೇಳಿ ಕ್ಲೀನ್ ಚಿಟ್ ನಿಡಿ ಕೇಸನ್ನು ಮುಚ್ಚಿದ್ದಾರೆ ಎಂದು ವರದಿಯಾಗಿದೆ.

ಕಣ್ಣೆದುರೇ ಹೊಡೆದು ಸಾಯಿಸಿದ ಘಟನೆಯನ್ನು ಮುಚ್ಚಿ ಹಾಕವುದೂ ಆ ಕುಕೃತ್ಯದಲ್ಲಿ ಭಾಗಿಯಾದಂತೆಯೇ ಅಲ್ಲವೇ ಎಂದು ಸೀತಾರಾಮ್ ಯೆಚುರೀ ಈ ವಿಷಯದಲ್ಲಿ ಟಿಪ್ಪಣಿ ಮಾಡುತ್ತ ನ್ಯೂಇಂಡಿಯಾವಾಲಾಗಳನ್ನು ಕೇಳಿದ್ದಾರೆ.

ವಂದೇ ಮಾತರಂ ಹೇಳುವ ಮೊದಲ ಹಕ್ಕು
ಚರಂಡಿ ಸ್ವಚ್ಛಗೊಳಿಸುವ ಕಾರ್ಮಿಕರಿಗೆ-ಮೋದಿ



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ಬುಲೆಟ್‌ಟ್ರೇನ್ ಕಾ ಕ್ಯಾ? ಪಹಲೇ ಜೋ ಪಟ್ರಿ ಪರ್ ಹೋ ಉಸ್‌ಕೋ ತೊ ರೋಕ್‌ಲೋ ಯಾರ್!

ಬುಲೆಟ್ ಟ್ರೇನ್ ಅಂತಿರಲಿ! ಹಳಿಯ ಮೇಲೆ ಇರುವುದನ್ನು ಅದರ ಮೇಲೆಯೇ ತಡೆದಿಡಯ್ಯಾ! -ಇದು ಜಪಾನೀ ಪ್ರಧಾನೀ ಜತೆ ನಮ್ಮ ಪ್ರಧಾನಿಗಳು 1.1 ಲಕ್ಷ ಕೋಟಿ ರೂ.ಗಳ 500ಕಿ.ಮೀ. ಉದ್ದದ ಅಹಮದಾಬಾದ್-ಮುಂಬೈ ಬುಲೆಟ್ ಟ್ರೇನ್ ಯೋಜನೆಯನ್ನು ಉದ್ಘಾಟಿಸಿದ ಸುದ್ದಿಗೆ ಸಾಮಾಜಿಕ ಮಾಧ್ಯಮದಲ್ಲಿ ಬಂದಿರುವ ಒಂದು ಪ್ರತಿಕ್ರಿಯೆ.

ರೈಲ್ವೆ ಅಪಘಾತಗಳ ಹಿನ್ನೆಲೆಯಲ್ಲಿ ರೈಲ್ವೆ ಮಂತ್ರಿಗಳನ್ನು ಬದಲಿಸಿದರೂ ರೈಲುಗಾಡಿಗಳು ಹಳಿ ತಪ್ಪುತ್ತಿರುವ ಸುದ್ದಿಗಳು ನಿಂತಿಲ್ಲ. ಬುಲೆಟ್ ಟ್ರೇನ್ ಯೋಜನೆಯನ್ನು ಉದ್ಘಾಟಿಸುವ ಹಿಂದಿನ ದಿನವೇ ನವದೆಹಲಿ ನಿಲ್ದಾಣದಲ್ಲೇ ಜಮ್ಮು ತಾವಿ-ನವದೆಹಲಿ ರಾಜಧಾನಿ ಎಕ್ಸ್‌ಪ್ರೆಸ್ ಹಳಿ ತಪ್ಪಿದ ಸುದ್ದಿ ಬಂದಿದೆ. ಅದೃಷ್ಟವಶಾತ್, ಯಾರೂ ಗಾಯಗೊಂಡಿಲ್ಲ.

1.1 ಲಕ್ಷ ಕೋಟಿ ರೂ. ಬುಲೆಟ್ ಟ್ರೇನ್ ಯೋಜನೆ ಭಾರತದ ಬಡಜನರನ್ನು ಹೀಯಾಳಿಸುವ ಒಂದು ಕ್ರೂರ ಜೋಕ್ ಎಂದು ಈ ಸಂದರ್ಭದಲ್ಲಿ ಒಂದು ಪತ್ರಿಕಾ ಹೇಳಿಕೆ ನೀಡಿರುವ ಪ್ರಸಿದ್ದ ನಿವೃತ್ತ ನ್ಯಾಯಮೂರ್ತಿ ರಾಜಿಂದರ್ ಸಾಚರ್ ಹೇಳಿದ್ದಾರೆ.

ವಿಶ್ವ ಬ್ಯಾಂಕ್ ವರದಿ ಪ್ರಕಾರ 22.4 ಕೋಟಿ ಮಂದಿ ಬಡತನದ ರೇಖೆಯ ಕೆಳಗೆ ಬದುಕು ನಡೆಸಿದ್ದಾರೆ. ಅಂದರೆ ದಿನಕ್ಕೆ 120ರೂ. ಗಿಂತ ಕಡಿಮೆಯಲ್ಲಿ ಬದುಕುತ್ತಿದ್ದಾರೆ. ಈಗಿನ ಮೊದಲ ದರ್ಜೆ ರೈಲು ದರದ ದುಪ್ಪಟ್ಟು ಮತ್ತು ವಿಮಾನ ಪ್ರಯಾಣ ದರದಷ್ಟೇ ಇರಬಹುದಾದ ಬುಲೆಟ್ ಟ್ರೇನ್‌ಗಳು ಯಾರಿಗಾಗಿ ಎಂದು ಪ್ರಶ್ನಿಸಿರುವ ಅವರು ಈ ಯೋಜನೆ 2023 ರ ವೇಳೆಗೆ ಪೂರ್ಣಗೊಳ್ಳುತ್ತದಂತೆ, ಮೋದಿಯವರ ಅಧಿಕಾರಾವಧಿ 2019ರಲ್ಲಿ ಮುಗಿಯುತ್ತದೆ, ಆದ್ದರಿಂದ ಮುಂದಿನ ಸರಕಾರವನ್ನು ಇಂತಹ ಯೋಜನೆಗೆ ಬದ್ಧಗೊಳಿಸುವ ಕಾನೂನು ಅಥವ ನೈತಿಕ ಸಮರ್ಥನೆ ಇಲ್ಲ ಎಂದು ಹೇಳಿದ್ದಾರೆ. ಇದರ ವಿರುದ್ಧ ರಾಜಕೀಯ ಪಕ್ಷಗಳು, ಕಾರ್ಮಿಕ ಸಂಘಗಳು ತಮ್ಮ ಪ್ರತಿಭಟನೆಯನ್ನು ದಾಖಲಿಸಬೇಕು ಎಂದು ಅವರು ಹೇಳಿದ್ದಾರೆ.

ಈ ಯೋಜನೆಯಿಂದ ಭೂಮಿ ಕಳಕೊಳ್ಳುವ ಬಡರೈತರು, ಆದಿವಾಸಿಗಳು ಆಗಲೇ ಇದನ್ನು ಪ್ರತಿಭಟಿಸಿದ್ದಾರೆ. ಎಂದಿನಂತೆ ಕಾನೂನುಪ್ರಕಾರ ಅವರೊಡನೆ ಸಮಾಲೋಚನೆ ನಡೆಸದೆ ಈ ಯೋಜನೆಗೆ ಮತ್ತು ಅದರೊಡನೆ ಸೇರಿಕೊಂಡಿರುವ 'ಮೂಲರಚನೆ' ಯೋಜನೆಗಳಿಗೆ ಭೂಸ್ವಾಧೀನದ ಕೆಲಸಗಳು ನಡೆಯುತ್ತಿವೆ, ಅದಕ್ಕೆ ಪ್ರತಿಭಟನೆಗಳು ಬರುತ್ತಿವೆ ಎಂದೂ ವರದಿಯಾಗಿದೆ.



ಯಾವುದೇ ಕಾಂಡ ಇರಲಿ,
ಅತ್ಯಾಚಾರೀ ಬಾಬಾ,
ಟ್ವಿಟ್‌ವಾಲಾ ಬೈಗುಳ,
ಲಿಂಚಿಂಗ್‌ವಾಲಾಗಳು,
ಈಗ ಈ ಶಾಲೆಯ
ಎಂಡಿ ಸುಮಾರಾಗಿ
ಎಲ್ಲರೊಂದಿಗೂ ನಮ್ಮ
ನೇತಾರರ ಫೋಟೋ
'ಸಬ್ ಕಾ ಸಾಥ್
ಸಬ್ ಕಾ ವಿಕಾಸ್'
ಸಾರ್ಥಕವಾಯಿತು!

ವ್ಯಂಗ್ಯಚಿತ್ರ:
ಶೇಖರ್ ಗುರೇರ

ಬ್ಯಾಂಕಿಂಗ್ ವಲಯದ ಎನ್‌ಪಿಎಗಳು: ನವ-ಉದಾರವಾದೀ ದೃಷ್ಟಿದೋಷದ ದುಷ್ಫಲ

ಸಾರ್ವಜನಿಕ ವಲಯದ ಬ್ಯಾಂಕುಗಳ ಅಪಾರ ಎನ್‌ಪಿಎ ಗಳ ಅಂದರೆ ಹಿಂದಕ್ಕೆ ಬರುವ ನಿರೀಕ್ಷೆಯಿಲ್ಲದ ಸುಸ್ತಿ ಸಾಲಗಳ ಸಮಸ್ಯೆಗೆ ಕಾರಣ ಯಾರು? ಅವನ್ನು ಈಗ ದೂಷಿಸುತ್ತಿರುವ ಸರಕಾರ ಮತ್ತು ಸ್ವತಃ ರೀಝರ್ವ್ ಬ್ಯಾಂಕ್. ಪರಿಹಾರವನ್ನು ಹುಡುಕಲೇ ಬೇಕೆಂದವರಿಗೆ ಪರಿಹಾರ ಏನೆಂಬುದು ಸ್ಪಷ್ಟ. ನಿಜವಾದ ಸಮಸ್ಯೆ ಪರಿಹಾರದ ಕೊರತೆಯಲ್ಲ. ಬದಲಾಗಿ ಕೇಂದ್ರದಲ್ಲಿ ಇರುವ ಸರ್ಕಾರಕ್ಕೆ ಈ ಸಮಸ್ಯೆಗೆ ಪರಿಹಾರವೇ ಬೇಕಿಲ್ಲ ಎಂಬುದೇ ಸಮಸ್ಯೆ. ಎನ್ನುತ್ತಾರೆ ಆರ್ಥಿಕ ವಿಷಯಗಳ ವಿಶ್ಲೇಷಕ **ಬಿ.ಸೃಜನ್**. ನ್ಯೂಸ್‌ಕ್ಲಿಕ್. ಇನ್‌ನಲ್ಲಿ ಪ್ರಕಟವಾದ ಲೇಖನದ **ಅನುವಾದ: ಭಾರತಿ ಗಾಂವ್ಕರ್**

ಬ್ಯಾಂಕಿಂಗ್ ವಲಯದಲ್ಲಿ, ಅದರಲ್ಲೂ ಮುಖ್ಯವಾಗಿ ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿ, ಎನ್‌ಪಿಎ ಅಂದರೆ ಕಾರ್ಯನಿರ್ವಹಿಸದ ಸ್ವತ್ತುಗಳು ಎಂಬುದು ಕಳೆದ ಎರಡು ವರ್ಷಕ್ಕೂ ಹೆಚ್ಚಿನ ಸಮಯದಿಂದ ಮನೆ ಮಾತಾಗಿದೆ. ಮಾರ್ಚ್ 31, 2017ಕ್ಕೆ, ಬ್ಯಾಂಕಿಂಗ್ ವಲಯದಲ್ಲಿ ಇರುವ ಒಟ್ಟು ಎನ್.ಸಿ.ಎ. ಅದರ ಒಟ್ಟು ಸ್ವತ್ತುಗಳ '9.6% ಇದೆ. ಇನ್ನೇನು ಎನ್.ಸಿ.ಎ. ಅಗುವ ಹಂತದಲ್ಲಿರುವ ಸುಸ್ತಿ ಸಾಲಗಳನ್ನು ಪರಿಗಣಿಸಿ ಹೇಳಿದರೆ, ಅ ಸಂಖ್ಯೆ 12% ಕ್ಕೆ ಏರುತ್ತದೆ.

ಇಂತಹ ಸುಸ್ತಿ ಸಾಲಗಳ ಮೇಲಿನ ಆರೋಪವನ್ನು ಸರಕಾರ ಮತ್ತು ಆರ್‌ಬಿಐ ಸಾರ್ವಜನಿಕ ವಲಯದ ಬ್ಯಾಂಕುಗಳ ಹೆಗಲಿಗೆ ಏರಿಸಿದೆ. ಏಕೆಂದರೆ, ಎಷ್ಟೇ ಆದ್ರೂ ಬಹುತೇಕ ಕಾರ್ಯನಿರ್ವಹಿಸದ ಸ್ವತ್ತುಗಳಿರುವುದು ಸಾರ್ವಜನಿಕ ವಲಯದ ಬ್ಯಾಂಕುಗಳ ದಾಖಲೆಗಳಲ್ಲಿ ತಾನೇ.

ಒಮ್ಮೆ ಆರೋಪ ಹೇರಿದ ಮೇಲೆ, ಸಾರ್ವಜನಿಕ ಬ್ಯಾಂಕುಗಳನ್ನು ಖಾಸಗೀಕರಣ ಮಾಡಿ ಎಂಬ ಸಲಹೆ ಮುಂದಿನ ಹೆಜ್ಜೆ.ಯೇ. ರಿಝರ್ವ್ ಬ್ಯಾಂಕ್ ಗವರ್ನರ್ ಮತ್ತು ಇತರ ಅಡಳಿತ ಕಾರ್ಯನಿರ್ವಾಹಕರು ಇತ್ತಿಚೆಗೆ ಕೆಲವು ಆಯ್ದ ಸಾರ್ವಜನಿಕ ವಲಯದ ಬ್ಯಾಂಕುಗಳ ಖಾಸಗೀಕರಣವನ್ನು ಪ್ರತಿಪಾದಿಸುತ್ತಿದ್ದಾರೆ. ಸರಕಾರದ 'ಹಣಕಾಸು ಇತ್ಯರ್ಥಗಳು ಮತ್ತು ಠೇವಣಿ ವಿಮಾ'(FRDI) ಕರಡು ಮಸೂದೆ ಬ್ಯಾಂಕುಗಳ ವಿಲಿನ ಮತ್ತು ಸಂಕಷ್ಟದಲ್ಲಿರುವ ಬ್ಯಾಂಕುಗಳನ್ನು ಖಾಸಗಿ ಸಂಸ್ಥೆಗಳಿಗೆ ವಹಿಸುವ ಅಂಶಗಳನ್ನು ಹೊಂದಿದ್ದು, ಸಾರ್ವಜನಿಕ ವಲಯದ ಬ್ಯಾಂಕುಗಳ ಖಾಸಗೀಕರಣದತ್ತ ಒಮದು ಹೆಜ್ಜೆ ಎಂದು ಅದನ್ನು ಕಾಣಲಾಗುತ್ತಿದೆ.

ಈ ಸನ್ನಿವೇಶದಲ್ಲಿ ಕೇಳಲೇಬೇಕಾದ ಪ್ರಮುಖ ಪ್ರಶ್ನೆ ಎಂದರೆ–ಇಷ್ಟು ಅಪಾರ ಪ್ರಮಾಣದಲ್ಲಿ ಸುಸಿ ಸಾಲಗಳನ್ನು ಸಂಗ್ರಹಿಸಿಟ್ಟು ಕೊಂಡಿರುವುದು ನಿಜವಾಗಿಯೂ ಸಾವರ್ಜನಿಕ ವಲಯದ ಬ್ಯಾಂಕುಗಳ ತಪ್ಪೆ? ನಿಜವಾದ ಅಪರಾಧಿ ಯಾರು?

ಕಾರ್ಯನಿರ್ವಹಿಸಿದ ಸ್ವತ್ತುಗಳು ಮತ್ತು ಮೂಲಸೌಕರ್ಯ ವಲಯ

ಆ ಎರಡು ಪ್ರಶ್ನೆಗಳ ಉತ್ತರಕ್ಕೆ, ಮೊದಲು ಎನ್‌ಪಿಎಗಳಾಗುತ್ತಿರುವ ಸುಸ್ತಿಸಾಲಗಳ ಸ್ವರೂಪವನ್ನು ಗಮನಿಸೋಣ.

ಕ್ರೆಡಿಟ್ ಸ್ಯೂಸೆ, ಹೇಳುವ ಪ್ರಕಾರ ಸುಸ್ತಿ ಸಾಲಗಳು ಪ್ರಮುಖವಾಗಿ ಕೆಲವು ವಲಯಗಳಲ್ಲಿ ಕೇಂದ್ರಿಕೃತವಾಗಿವೆ–ಮೂಲ ಸೌಕರ್ಯ ಮತ್ತು ನಿರ್ಮಾಣ (22%) ವಿದ್ಯುತ್ ಮುಂತಾದ ಪ್ರಯೋಜಕಗಳು(14%) ಉಕ್ಕು ಮತ್ತು ಇತರ ಲೋಹಗಳು(17%) ಮತ್ತು ಟೆಲಿಕಾಂ(20%), ಈ ನಾಲ್ಕನ್ನು ಸೇರಿಸಿದರೆ ಇಲ್ಲಿಯೇ ಬ್ಯಾಂಕಿಂಗ್ ವಲಯದ ಸುಸ್ತಿಸಾಲದ ಪಾಲು 73% ಆಗುತ್ತದೆ.

ಸ್ಪಷ್ಟವಾಗಿ, ಈ ವಲಯಗಳ ಸ್ವರೂಪದಲ್ಲೇ ಸುಸ್ತಿ ಸಾಲಗಳಾಗುವ ಯಾವುದೊ ಒಂದು ಅಂಶ ಅಡಗಿದೆ. ಈ ನಾಲ್ಕು ವಲಯಗಳಲ್ಲಿ 2 ಅಂಶಗಳಲ್ಲಿ ಸಆಮ್ಯತೆ ಇದೆ.

ಒಂದು, ಇವೆಲ್ಲವೂ ಬಂಡವಾಳ ಬಹಳವಾಗಿ ಬೇಕಾಗುವ, ಈ ನಾಲ್ಕು ವಲಯಗಳು ಕಾರ್ಯಪ್ರವೃತ್ತವಾಗಲು ಮತ್ತು ಆದಾಯವನ್ನು ತರಲು ದೀರ್ಘ ಕಾಲ ತಗೊಳ್ಳುವಂತವುಗಳು. ಉದಾಹರಣೆಗೆ: ಒಂದು ತಾಪ ವಿದ್ಯುತ್ ಸ್ಥಾವರ ಅಥವಾ ಉಕ್ಕುಸ್ಥಾವರ ಕೆಲಸ ಆರಂಭಿಸಲು 10 ಅಥವಾ ಅದಕ್ಕಿಂತ ಹೆಚ್ಚಿನ ಸಮಯ ಬೇಕಾದೀತು.. ಹಾಗಾಗಿಯೇ ಈ ವಲಯಗಳಲ್ಲಿ ಬಂಡವಾಳ ವಿನಿಯೋಗಕ್ಕೆ ಹೆಚ್ಚಿನ ಅಪಾಯ ಇರುತ್ತದೆ.

ಎರಡು, ವಿದ್ಯುತ್ ಮತ್ತು ಟೆಲಿಕಾಂ 'ನಂತಹ ವಲಯಗಳು ಸಾರ್ವಜನಿಕ ಸರಕಿನ ಸ್ವರೂಪವನ್ನೂ ಪಡೆದಿವೆ. ನಾಗರಿಕರಿಗೆ ವಿದ್ಯುತ್ ಶಕ್ತಿ ಮತ್ತು ಸಂವಹನ ಸಾಧನಗಳ ಬೆಲೆಯನ್ನು ಪಾವತಿಸಲು ಸಾಧ್ಯವಿದೆಯೇ, ಇಲ್ಲವೋ ಎನ್ನುವುದರ ಹೊರತಾಗಿಯೂ ಅವುಗಳ ಲಭ್ಯತೆ ಜನರಿಗೆ ಅನಿವಾರ್ಯವಾಗಿದೆ. ಇದ-ರಿಂದಾಗಿ ಕಲ್ಯಾಣದ ದೃಷ್ಟಿಯಿಂದ ಇವು ಅತ್ಯಂತ ಪ್ರಮುಖವಾಗುತ್ತದೆ.

ಈ ಕಾರಣಕ್ಕಾಗಿಯೇ, ಸ್ವಾತಂತ್ರ್ಯದ ನಂತರ, ಸಾರ್ವಜನಿಕ ಮಾಲಿಕತ್ವದಲ್ಲಿ ಈ ನಾಲ್ಕು ವಲಯಗಳು ಅಭಿವೃದ್ಧಿಗೊಂಡವು. ಆದರೆ, 1990 ರ ನಂತರ, ಕಾಂಗ್ರೆಸ್ ಮತ್ತು ಬಿ.ಜೆ.ಪಿ.ಗಳ ನವ ಉದಾರವಾದಿ ಸರ್ಕಾರಗಳ ಆಡಳಿತದಡಿಯಲ್ಲಿ ಖಾಸಗೀ ವಲಯಗಳಿಗೆ ಈ ನಾಲ್ಕು ವಲಯಗಳಲ್ಲಿ ಪ್ರವೇಶಕ್ಕೆ ಅನುಕೂಲ, ಉತ್ತೇಜನ ಮಾಡಿಕೊಡಲಾಯಿತು. ಸಾರ್ವಜನಿಕ ವಲಯದ ಹಲವಾರು ಕೈಗಾರಿಕೆಗಳನ್ನು' ಖಾಸಗೀಕರಿಸಲಾಯಿತು ಮತ್ತು ಯಾವೆಲ್ಲ ಕೈಗಾರಿಕೆಗಳು ಖಾಸಗೀಕರಣಗೊಳಿಸಲಿಲ್ಲವೊ ಅವುಗಳನ್ನು ಉದ್ದೇಶಪೂರ್ವಕವಾಗಿ ದುರ್ಬಲಗೊಳಿಸಲಾಯಿತು.

ಹಣಕಾಸು ಖಾಸಗಿ ವಲಯ

ಖಾಸಗೀವಲಯದ ಪರಿಧಿಗೆ ಬಂದಿತೆಂದರೆ, ಮೂಲ ಸೌಕರ್ಯ ಮತ್ತು ಇಂತಹ ಇತರ ಯೋಜನೆಗಳಿಗೆ ಹಣಕಾಸು ಒದಗಿಸುವುದು ಒಂದು ರೀತಿಯಲ್ಲಿ ಉಪಾಯದಿಂದ ನಿರ್ವಹಿಸಬೇಕಾದ ಸಂಗತಿಯಾಗುತ್ತದೆ. ಇಂತಹ ಯೋಜನೆಗಳಿಗೆ ಭಾರಿಪ್ರಮಾಣದ ಸ್ಥಿರ ಬಂಡವಾಳದ ಅಗತ್ಯವಿರುತ್ತದೆ. ಅಂದರೆ ಪ್ರಾಯೋಜಕರು ಹೂಡಿಕೆ ಮಾಡಿದ ಬಂಡವಾಳಕ್ಕಿಂತಲೂ ಹೆಚ್ಚಿನ ಪ್ರಮಾಣದ ಹಂಕಾಸಿನ ಅಗತ್ಯತೆ ಈ ವಲಯಕ್ಕಿರುತ್ತದೆ. ಇದರ ಪರಿಣಾಮವಾಗಿ, ಅವರು ಹಣಕಾಸಿಗಾಗಿ ವಾಣಿಜ್ಯ ಬ್ಯಾಂಕುಗಳತ್ತ ತಿರುಗುತ್ತವೆ.

ಸ್ವಭಾವತಃ, ವಾಣಿಜ್ಯ ಬ್ಯಾಂಕುಗಳು ಮೂಲ ಸೌಕರ್ಯಗಳಿಗೆ ಸಾಲ ನೀಡುವಷ್ಟು ಸನ್ನದ್ಧರಾಗಿರುವುದಿಲ್ಲ. ಮೂಲಸೌಕರ್ಯ ಯೋಜನೆಗಳು ಆದಾಯವನ್ನು ಉತ್ಪಾದಿಸುವ ಮೊದಲು 10 ಅಥವಾ ಅದಕ್ಕಿನ ಹೆಚ್ಚು ವರ್ಷಗಳ ಕಾಲ ನಿರೀಕ್ಷಿಸಬೇಕಾಗುತ್ತದೆ. ಆದರೆ, ಬ್ಯಾಂಕುಗಳ ಬಾದ್ಯತೆಗಳು ಅಂದರೆ ಯಾವ ಠೇವಣಿಗಳ ಸಾಮರ್ಥ್ಯದ ಆಧಾರದ ಮೇಲೆ ಅವರು ಸಾಲ ನೀಡುತ್ತಾರೋ ಅವು ಅಷ್ಟು ಅವಧಿಯವುಗಳು ಆಗಿರುವುದಿಲ್ಲ. ಇದರ ಪರಿಣಾಮವಾಗಿಯೇ ಸ್ವತ್ತು–ಬಾದ್ಯತೆಗಳ ಮಧ್ಯೆ ವಿಷಮ ಸಂಬಂದ ಉಂಟಾಗುತ್ತದೆ. ಭವಿಷ್ಯದಲ್ಲಿ ಮೂಲ ಸೌಕರ್ಯ ಯೋಜನೆಗಳು ಯಶಸ್ಸು ಕಾಣುತ್ತವೆ ಎಂದೇ ಅಂದುಕೊಂಡರೂ ಬ್ಯಾಂಕುಗಳು ತಾವು ಸಾಲ ನೀಡಿದ ಹಣದ ಮರುಪಾವತಿ ಹಾಗೂ ಬಡ್ಡಿ ಪಡೆಯಲು ಅಷ್ಟು ವರ್ಷಗಳ ಕಾಲ ಕಾಯಲು ಸಾಧ್ಯವಾಗುವುದಿಲ್ಲ. ಇದರ ಅರ್ಥ, ಯಶಸ್ಸು ಸಾಧಿಸಲು ಸಂಭಾವ್ಯವುಳ್ಳ ಯೋಜನೆಗಳೂ ಸಹ ಕಾರ್ಯ ನಿರ್ವಹಿಸದ ಸ್ವತ್ತುಗಳಿಗಾಗಿ ಮಾರ್ಪಡುವ ಸಂಭವನೀಯತೆ ಬಂದು ವಾಣಿಜ್ಯ ಬ್ಯಾಂಕಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿರುತ್ತದೆ.

ಈ ಒಂದು ಕಾರಣಕ್ಕಾಗಿಯೇ, ಸ್ವಾತಂತ್ರ್ಯ ನಂತರ, ಮೂಲಸೌಕರ್ಯ ಮತ್ತು ಕೈಗಾರಿಕೆಗಳಿಗೆ ಸಾಲ, ಹಣಕಾಸು ಒದಗಿಸಲು ದೀರ್ಘಾವಧಿ ಹಣಕಾಸು ಸಂಸ್ಥೆಗಳಾದ ಐಡಿಬಿಐ ಮತ್ತು ಐಸಿಐಸಿಐ ಮುಂತಾದವುಗಳನ್ನು ನಿರ್ಮಿಸಲಾಯಿತು. ಆದರೆ ಈ ಸಂಸ್ಥೆಗಳ ಮೂಲ ಉದ್ದೇಶವನ್ನು ನಿರ್ನಾಮ ಮಾಡಿ ಅವನ್ನು ವಾಣಿಜ್ಯ ಬ್ಯಾಂಕುಗಳಾಗಿ ಮಾಡಲಾಯಿತು. ಇಂದು ಮೂಲ ಸೌಕರ್ಯ ಮತ್ತು ಕೈಗಾರಿಕೆಗಳಿಗೆ ಅವು ಧೀರ್ಘಾವಧಿ ಸಾಲವನ್ನು ಕೊಡುವ ಕೆಲಸವನ್ನು ಮಾಡುತ್ತಿರುವುದು ಬಹಳ ಕಡಿಮೆ.

ಖಾಸಗೀ ವಲಯದ ಯೋಜನೆಗಳ ರಕ್ಷಣೆಗೆ ಸಾರ್ವಜನಿಕ ವಲಯ ಬ್ಯಾಂಕುಗಳು

2004ರಿಂದ ಯುಪಿಎ ಸರಕಾರ ಮೂಲಸೌಕರ್ಯ, ವಿದ್ಯುತ್ ಮತ್ತು ಟೆಲಿಕಾಂ ನಂತಹ ಉದ್ದಿಮೆಗಳಲ್ಲಿ, ಖಾಸಗಿ ಉದ್ದಿಮೆದಾರರು ಬರುವಂತೆ ಮಾಡಲಾರಂಭಿಸಿದಾಗ ಇವರಿಗೆ ಹಣಕಾಸು ಒದಗಿಸದುವವರು ಯಾರು? ಎಂಬ ಪ್ರಶ್ನೆ ಉದ್ಭವವಾಯಿತು.

ಕೇವಲ ಲಾಭದ ಉದ್ದೇಶವನ್ನು ಹೊಂದಿರುವ ಖಾಸಗಿ ಬ್ಯಾಂಕುಗಳು, ಇಂತಹ ಯೋಜನೆಗಳಿಗೆ ಸಾಲ ನೀಡಲು ಇಷ್ಟ ಪಡುತ್ತಿರಲಿಲ್ಲ. ಈ ಮೊದಲೇ ಚರ್ಚಿಸಿದಂತೆ, ವಾಣಿಜ್ಯ ಬ್ಯಾಂಕುಗಳಿಗೆ, ಇಂತಹ ಯೋಜನೆಗಳಿಗೆ ಹಣಕಾಸು ಒದಗಿಸುವವುದು ತುಂಬಾ ಗಂಡಾಂತರಕಾರಿಯಾದುದಾಗಿತ್ತು. ಹಾಗಾಗಿ, ಖಾಸಗೀ ವಲಯದ ಕುಳಗಳನ್ನು, ಅದಾನಿ ಮತ್ತು ಅಂಬಾನಿ ಸೋದರರಂತವರ ರಕ್ಷಣೆಗೆ ಸರಕಾರ ಬರಬೇಕಾಯಿತು.

ಇಂದು ಸಾರ್ವಜನಿಕ ವಲಯದ ಬ್ಯಾಂಕುಗಳನ್ನು ದೂರುತ್ತಿರುವ ಇದೇ ಆರ್.ಬಿ.ಐ. ಮತ್ತು ಸರ್ಕಾರ ಅಂದು ಇಂತಹ ಬೃಹತ್ ಯೋಜನೆಗಳಿಗೆ ಸಾಲ ನೀಡುವಂತೆ ಆಗ್ರಹಕ್ಕೆ ಒಳಪಡಿಸಿದವು. ವ್ಯಕ್ತಿಗತ ಕಂಪೆನಿಗಳು ಮತ್ತು ಕಾರ್ಪೊರೇಟ್ ಗುಂಪುಗಳಿಗೆ ಸಾಲ ನೀಡಲು ತೊಡಕಾಗಿದ್ದ ಹಲವು ನಿಯಮಾವಳಿಗಳನ್ನು ಆರ್‌ಬಿಐ ಸಡಿಲಿಸಿತು ಕೂಡ. ಇದರ ಪರಿಣಾಮವಾಗಿ, ಮೂಲ ಸೌಕರ್ಯಕ್ಕೆ ನೀಡಲಾಗುವ ಸಾಲಗಳ ಏರಿಕೆ ವಾರ್ಷಿಕವಾಗಿ 40% ದಷ್ಟಾಯಿತು. 2016 ಮಾರ್ಚ್ ವೇಳೆಗೆ ಇದು 9.8 ಲಕ್ಷ ಕೋಟಿ ರೂಪಾಯಿ ತಲುಪಿತು.

ಕಳೆದ ದಶಕದಲ್ಲಿ ಭಾರತದಲ್ಲಿ ಉನ್ನತ ಆರ್ಥಿಕ ಬೆಳವಣಿಗೆ ತರುವಲ್ಲಿ ಸಾರ್ವಜನಿಕ ವಲಯದ ಬ್ಯಾಂಕುಗಳು ಮೂಲಸೌಕರ್ಯ ಹೂಡಿಕೆಗೆ ಹಣಕಾಸು ಒದಗಿಸಿದ್ದೂ ಒಂದು ಪ್ರಮುಖ ಕಾರಣ ಎಂದರೆ ಅತಿಶಯೋಕ್ತಿ ಆಗಲಾರದು.

ಈ ಆರ್ಥಿಕ ಬೆಳವಣಿಗೆಯ ಹೆಗ್ಗಳಿಕೆಯನ್ನು ತನ್ನದಾಗಿಸಿಕೊಳ್ಳುವ ಸರಕಾರ, ಇದರಿಂದಾಗಿ ಆಗಿರುವ ಎನ್‌ಪಿಎಗಳಿಗೆ ಮಾತ್ರ ಕಾರ್ಯ ಸಾರ್ವಜನಿಕ ವಲಯದ ಬ್ಯಾಂಕುಗಳನ್ನು ದೂಷಿಸುತ್ತಿದೆ.

ಇಂತಹ ಒಂದು ಸನ್ನಿವೇಶದಲ್ಲಿ ಸಾರ್ವಜನಿಕ ಬ್ಯಾಂಕ್‌ಗಳ ಮುಂದಿರುವ ಆಯ್ಕೆಗಳೇನು? ಇವು ಸರ್ಕಾರದ ನಿರ್ದೇಶನಗಳ ವಿರುದ್ಧ ಹೋಗಿ ಮೂಲ ಸೌಕರ್ಯ ಯೋಜನೆಗಳಿಗೆ ಸಾಲ ನೀಡಲು ನಿರಾಕರಿಸಬಹುದಿತ್ತು. ಆ ಮೂಲಕ ಭವಿಷ್ಯದಲ್ಲಿ ನಾಗರಿಕರಿಗೆ ವಿದ್ಯುತ್ ಶಕ್ತಿ, ಸಂವಹನ ಸಾಧನ, ರಸ್ತೆ ಮುಂತಾದ ಮೂಲ ಸೌಕರ್ಯ ಒದಗಿಸಬೇಕಾಗಿದ್ದ ಯೋಜನೆಗಳನ್ನು ಇಕ್ಕಟ್ಟಿಗೆ ಸಿಲುಕಿಸಬಹುದಿತ್ತು. ಇಲ್ಲವೇ, ತಮ್ಮ ಬ್ಯಾಲಂಸ್ ಶೀಟುಗಳಿಗೆ ಕುತ್ತು ತಂದುಕೊಂಡು ಈ ಯೋಜನೆಗಳಿಗೆ ಸಾಲ ಕೊಡಬೇಕಾಗಿತ್ತು.

ಸಾರ್ವಜನಿಕ ವಲಯ ಬ್ಯಾಂಕುಗಳು ಎರಡನೇ ಆಯ್ಕೆ ಮಾಡಿಕೊಂಡವು. ಹಾಗೆ ಮಾಡುವುದರ ಮೂಲಕ ಅವು ತಮಗೆ ವಿಧಿಸಿದ ಉದ್ದೇಶದಂತೆ ನಡೆದವು, ಅಂದರೆ ಕೇವಲ ಲಾಭಗಳಿಕೆಯ ಸಂಸ್ಥೆಗಳಾಗದೆ ಸಾರ್ವಜನಿಕ ಒಳಿತಿನ ಸಂಸ್ಥೆಗಳಾಗಿ ಉಳಿದವು.

ನಿಜವಾದ ಅಪರಾಧಿ

ಏರುತ್ತಲೇ ಇರುವ ಎನ್‌ಪಿಎ ಗಳ ಹಿಂದಿರುವ ನಿಜವಾದ ಅಪರಾಧಿ ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲ, ಬದಲಾಗಿ ಅ ಒಂದಾದಮೇಲೆ ಒಂದು ಅಧಿಕಾರಕ್ಕೆ ಬರುತ್ತಿರುವ ಕಾಂಗ್ರೆಸ್ ಅಥವ ಬಿಜೆಪಿ ಸರಕಾರಗಳ ನವ–ಉದರವಾದಿ ಮಂದದೃಷ್ಟಿ. ಮೂಲಸೌಕರ್ಯ ವಲಯವನ್ನು ಒಳಗೊಂಡು ಕಣ್ಣಿಗೆ ಕಾಣುವ ಎಲ್ಲದನ್ನು ಖಾಸಗೀಕರಣಗೊಳಿಸುವ ಅದರ ಬೇಜವಾಬ್ದಾರಿ ಧಾವಂತವೇ ಇಂದಿನ ವಿಪತ್ತಿಗೆ ನೇರ ಹೊಣೆ.

ಖಾಸಗೀಕರಣಕ್ಕೂ ಸುಸ್ತಿ ಸಾಲಗಳಿಗೂ ಏನು ಸಂಬಂಧ ಎಂದು ಯಾರಾದರೂ ಪ್ರಶ್ನೆ ಕೇಳಬಹುದು. ಅದರ ತರ್ಕ ನೇರವಾಗಿದೆ, ಮಾಲಿಕತ್ವಕ್ಕೆ ಸಂಬಂಧಿಸಿದ ರಿಸ್ಕ್‌ಗಳು ಮತ್ತು ಮೂಲಸೌಕರ್ಯ ಯೋಜನೆಗಳನ್ನು ನಿಭಾಯಿಸಲು ಸಾರ್ವಜನಿಕ ವಲಯವೇ ಅತ್ಯುತ್ತಮ. ಖಾಸಗಿ ವಲಯ ಲಾಭ ಮತ್ತು ಸಾಲದ ಮರುಪಾವತಿಗಾಗಿ, ಖಾಸಗಿ ಮೂಲಸೌರ್ಕರ್ಯ ಯೋಜನೆಗಳು ತರುವ ಆದಾಯಗಳ ಮೇಲೆಯೇ ನೇರವಾಗಿ ಅವಲಂಬಿಸುತ್ತವೆ. ಅದರೆ ಸಾರ್ವಜನಿಕ ವಲಯದ ಉದ್ಯಮದಲ್ಲಿ ಹಾಗಾಗುವುದಿಲ್ಲ. ಸಾರ್ವಜನಿಕ ವಲಯ ಯೋಜನೆಗಳಲ್ಲಿ ಲಾಭದ ಕೊರತೆ ಉಂಟಾದರೂ, ಅದನ್ನು ಸರ್ಕಾರಕ್ಕೆ ಪರೋಕ್ಷ ಆದಾಯವನ್ನು ಉತ್ಪತ್ತಿ ಮಾಡಿಕೊಡುವುದರ ಮೂಲಕ ತುಂಬಿಕೊಡಬಹುದು. ಮೂಲ ಸೌಕರ್ಯ ಯೊಜನೆಗಳಿಂದ ನೇರವಾಗಿ ಉಂಟಾಗುವ ಆರ್ಥಿಕ ಬೆಳವಣಿಗೆ ಸರ್ಕಾರದ ಆದಾಯವನ್ನು ಹೆಚ್ಚಿಸುತ್ತದೆ.

ಉದಾಹರಣೆಗಾಗಿ, ಸರ್ಕಾರ ಕೈಗೊಳ್ಳುವ ವಿದ್ಯುತ್ ರೋಜನೆಯನ್ನು ನೋಡೋಣ, ಈ ಯೋಜನೆಯಿಂದಾಗಿ, ಉದ್ಯೋಗ ಮತ್ತು ಬೆವಣಿಗೆ ಉಂಟಾಗುತ್ತದೆ. ಪೂರಕ ಮತ್ತು ಇತರ ಸಂಬಂದಿತ ಕೈಗಾರಿಕೆಗಳಬೆಳವಣಿಗಗೆ ನೆರವಾಗುತ್ತದೆ. ಇದೇ ತೆರಿಗೆ ಮತ್ತು ಇತರ ವಿಧಾನಗಳಿಮದ ಸರಕಾರದ ಆದಾಯವನ್ನು ಹೆಚ್ಚಿಸುತ್ತದೆ. ಈ ಮೂಲಕ ಈ ಯೋಜನೆಗಳಲ್ಲಿ ವೆಚ್ಚವಾದ ಮೊತ್ತವನ್ನು ಪೂರ್ಣ ಅಥವಾ ಭಾಗಶಃ ಭರ್ತಿ ಮಾಡಿ ಕೊಡುತ್ತವೆ. ಹೀಗೆ ಈ ಯೋಜನೆಗಳು ಲಾಭಗಳ ಉತ್ಪತ್ತಿಯನ್ನು ಮಾಡಲು ಆರಂಭಿಸುವ ಮೊದಲೇ ಬ್ಯಾಂಕುಗಳಿಮದ ಇವಕ್ಕಾಗಿ ಪಡೆದಿರಬಹುದಾದ ಸಾಲಗಳನ್ನು ಬೇಗನೇ ತಿರಿಸಲು ಸರಕಾರಕ್ಕೆ ಸಾಧ್ಯವಾಗುತ್ತದೆ.

ಇದರ ಪರಿಣಾಮವಾಗಿ, ಬ್ಯಾಂಕುಗಳು ಸಾರ್ವಜನಿಕ ವಲಯ ಮೂಲ ಸೌಕರ್ಯ ಯೋಜನೆಗಳಿಗೆ ಹಣಕಾಸು ಒದಗಿಸುವದು, ಖಾಸಗೀ ವಲಯ ಮೂಲ ಸೌಕರ್ಯ ಯೋಜನೆಗಳಿಗೆ ಹಣಕಾಸು ಒದಗಿಸುವದಕ್ಕಿಂತ ಕಡಿಮೆ ಅಪಾಯಕಾರಿ ಆಗಿರುತ್ತದೆ. ವಿವಿಧ ಆರ್ಥಿಕ ಕ್ಷೇತ್ರಗಳಲ್ಲಿ ಸರ್ಕಾರದ ಉಪಸ್ಥಿತಿ ಮತ್ತು ಅದರ ಆದಾಯ ಮೂಲಗಳಲ್ಲಿರುವ ವೈವಿಧ್ಯತೆಯಿಂದಾಗಿ, ಮೂಲ ಸೌಕರ್ಯಕ್ಕೆ ಪಡೆದ ಸಾಲವನ್ನು ಮರು ಪಾವತಿಸುವಲ್ಲಿ ಅದು ಖಾಸಗಿಯವರಿಗಿಂತ ಉತ್ತಮ ಸ್ಥಿತಿಯಲ್ಲಿರುತ್ತದೆ. ಖಾಸಗೀ ಯೋಜನೆಗಳ ವಿಷಯದಲ್ಲಿ, ಸಂಬಂಧಪಟ್ಟ ಕಾರ್ಪೊರೇಟ್ ಸಮೂಹಕ್ಕೆ ವಿಭಿನ್ನ ವಲಯಗಳಲ್ಲಿದ್ದರೂ ತನ್ನ ಸಮೂಹದ ಒಂದು ಕಂಪನಿಯ ಸಾಲ ಮರುಪಾವತಿಸುವ ಸಂಪೂರ್ಣ ಜವಾಬ್ದಾರಿಯನ್ನು ಅದು ತೆಗೆದುಕೊಳ್ಳುವದಿಲ್ಲ.

ಉದಾಹರಣೆಗೆ: ಅದಾನಿ ಅಥವಾ ಅಂಬಾನಿ ಗುಂಪಿನಲ್ಲಿರುವ ಯಾವುದೊ ಒಂದು ನಿರ್ಧಿಷ್ಟ ಕಂಪನಿ ಸಾಲವನ್ನು ಮರುಪಾವತಿ ಮಾಡದೇ ಸುಸ್ತಿದಾರನಾಗಬಹುದು. ಆದರೆ ಕಾನೂನಾತ್ಮಕ ತೊಡಕುಗಳ ಕಾರಣದಿಂದ ಆ ಸಮೂಹ ಒಟ್ಟಾರೆ-ಯಾಗಿ ಲಾಭಮಾಡುತ್ತಿದ್ದರೂ ಸಾಲ ಮರುಪಾವತಿ ಮಾಡಬೇಕೆಂದು ಪೋಷಕ ಕಾರ್ಪೊರೇಟನ್ನು ಒತ್ತಾಯಿಸುವದು ಕಷ್ಟಸಾಧ್ಯ.

ನಿಜವಾದ ಪರಿಹಾರ–ನಿಜವಾದ ಉದ್ದೇಶ

ಪರಿಹಾರವನ್ನು ಹುಡುಕಲೇ ಬೇಕೆಂದವರಿಗೆ ಪರಿಹಾರ ಏನೆಂಬುದು ಸ್ಪಷ್ಟ. ಸಾವರ್ಜನಿಕ ಕಲ್ಯಾಣಕ್ಕೆ ಅಗತ್ಯವಾಗಿರುವ ಕೈಗಾರಿಕೆಗಳನ್ನು ಸರ್ಕಾರ ತನ್ನ ನಿಯಂತ್ರಣಕ್ಕೆ ಪಡೆಯಬೇಕು. ಸಾರ್ವಜನಿಕ ಕಲ್ಯಾಣಕ್ಕೆ ನಿರ್ಣಾಯಕವಾದ, ಮೂಲಸೌಕರ್ಯ ಯೋಜನೆಗಳನ್ನು ಸರ್ಕಾರ ರಾಷ್ಟ್ರೀಕರಣಗೊಳಿಸಬೇಕು. ಆ ಮೂಲಕವೇ ಆ ಯೋಜನೆಗಳಿಗೆ ಒಂದು ಆಶಾಕಿರಣ ಕಾಣುತ್ತದೆ. ಎನ್‌ಪಿಎ ಎಂದು ಪರಿಗಣಿಸಿರುವ ಅವುಗಳ ಸಾಲಗಳನ್ನು ದೀಘಾವಧಿ ಸಾಲಗಳೆಂದು ಪರಿಗಣಿಸಬೇಕು. ಸರಕಾರದ ಸಾಲಗಳಲ್ಲಿ ಬ್ಯಾಂಕುಗಳಿಗೆ ಇರುವ ಅಪಾಯ ಬಹಳ ಕಡಿಮೆ ತಾನೇ?

ನಿಜವಾದ ಸಮಸ್ಯೆ ಪರಿಹಾರದ ಕೊರತೆಯಲ್ಲ. ಬದಲಾಗಿ ಕೇಂದ್ರದಲ್ಲಿ ಇರುವ ಸರ್ಕಾರಕ್ಕೆ ಈ ಸಮಸ್ಯೆಗೆ ಪರಿಹಾರವೇ ಬೇಕಿಲ್ಲ. ಎನ್‌ಪಿಎಗಳ ನೆಪದಲಿ ಸಾರ್ವಜನಿಕ ವಲಯ ಬ್ಯಾಂಕುಗಳನ್ನು ಖಾಸಗೀಯವರ ಕೈಗೆ ಒಪ್ಪಿಸುವುದೇ ಸರಕಾರಕ್ಕೆ ನಿಜವಾಗಿಯೂ ಬೇಕಾಗಿರುವಂತದ್ದು. ಬ್ಯಾಂಕಿಂಗ್ ವಲಯದ ಸಂಪೂರ್ಣ ಖಾಸಗೀಕರಣ ಮಾಡುವುದರೊಂದಿಗೆ 1991 ರಲ್ಲಿ ಕಾಂಗ್ರೆಸ್ ಸರ್ಕಾರ ಆರಂಭಿಸಿದ್ದ ನವ–ಉದಾರವಾದಿ ಪ್ರಾಜೆಕ್ಟನ್ನು ಪೂರ್ಣಗೊಳಿಸುವುದೇ ಮೋದಿ ಸರ್ಕಾರದ ಆಶಯ. ●







3 ತಿಂಗಳ ಹೋರಾಟ, 13 ದಿನಗಳ 'ಮಹಾಪಡಾವ್' 3 ದಿನಗಳ 'ಚಕ್ಕಾಜಾಮ್'

ಪುಟ 2ರಿಂದ

ಜೂನ್ 16, 2017: ಜುಲೈ 17 ರಂದು ಕಿಸಾನ್ ಕರ್ಫ್ಯೂ ಗೆ ಕರೆ. ಸಿಕಾರ್ ಜಿಲ್ಲೆಯ 1000ಕ್ಕೂ ಹೆಚ್ಚು ಹಳ್ಳಿಗಳಲ್ಲಿ, 343 ಪಂಚಾಯತುಗಳಲ್ಲಿ ಪ್ರಚಾರ

ಜುಲೈ 17: ಸುಮಾರು 40 ಕಡೆಗಳಲ್ಲಿ ರೈತರು ನೆರೆದು 'ಕಿಸಾನ್ ಚೌಕಿ'ಗಳ ರಚನೆ, ಬೆಳಿಗ್ಯೆ 8ಗಂಟೆಯಿಂದ ಮಧ್ಯಾಹ್ನ 12 ಗಂಟೆಯ ವರೆಗೆ ಯಶಸ್ವಿ **ಕಿಸಾನ್ ಕರ್ಫ್ಯೂ**–ಸರಕಾರೀ ಅಧಿಕಾರಿಗಳ ಚಲನ ವಲನಕ್ಕೆ ತಡೆ. ಹತ್ತು ದಿನಗಳೊಳಗೆ ರೈತರೊಂದಿಗೆ ಮಾತುಕತೆ ಆರಂಭಿಸದಿದ್ದರೆ ಚಳುವಳಿ ತೀವ್ರಗೊಳಿಸುವ ಎಚ್ಚರಿ–ಕೆ

ಜುಲೈ 27: ಆಗಸ್ಟ್ 9ರ ಚಲೇಜಾವ್ ದಿನದಂದು ರಾಜ್ಯಾದ್ಯಂತ ಸ್ಥಳೀಯ ಅಥವ ತಹಸೀಲು ಮುಖ್ಯಾಲಯಗಳಲ್ಲಿ ಜೈಲ್ ಭರೋ ನಡೆಸಲು ಕಿಸಾನ್ ಸಭಾ ರಾಜ್ಯ ಸಮಿತಿ ಕರೆ

ಆಗಸ್ಟ್ 9: ಸಿಕಾರ್‌ನಲ್ಲೇ 1000ಕ್ಕೂ ಹೆಚ್ಚು ರೈತರ ಜೈಲ್ ಭರೋ. ರೈತರೊಂದಿಗೆ ಮುಖಂಡರ ಸಮಾಲೋಚನೆಗಳು

ಆಗಸ್ಟ್ 18: ಜಿಲ್ಲಾ ಮುಖ್ಯಾಲಯಗಳಲ್ಲಿ ಸಪ್ಟಂಬರ್ 1ರಿಂದ ಮಹಾಪಡಾವ್ ಗೆ ಕಿಸಾನ್ ಸಭಾ ರಾಜ್ಯ ಸಮಿತಿಯ ಕರೆ

ರಾಜ್ಯಾದ್ಯಂತ ಇನ್ನೊಂದು ಪ್ರಚಾರಾಂದೋಲನದ ಆರಂಭ. ಈ ಬಾರಿ ಕಿಸಾನ್ ಸಭಾದ ಗ್ರಾಮ ಸಮಿತಿಗಳಿಂದ ಪ್ರಚಾರಾಂದೋಲನ. ಎಲ್ಲಾ ಹಳ್ಳಿಗಳಲ್ಲಿ ಎಲ್ಲಾ ಮನೆಗಳಿಗೆ ಭೇಟಿ– ಜನರಿಂದ ಹಣ ಮತ್ತು ಗೋದಿ ಸಂಗ್ರಹ, ಇತರ ಪಕ್ಷಗಳ, ಸಂಘಟನೆಗಳ ಮುಖಂಡರಿಂದಲೂ ನೆರವು–**'ಹರ್ ಕುಂಏಸೆ ಗೆಹೂಕಾ ಪೀಪಾ'**(ಪ್ರತಿ ಬಾವಿಯಿಂದ ಗೋದಿಯ ಪೀಪಾಯಿ)

ಸಪ್ಟಂಬರ್ 1: ಆಹಾರ ಮತ್ತು ಇತರ ಅಗತ್ಯ ಸಾಮಾನುಗಳೊಂದಿಗೆ ಟ್ರಾಕ್ಟರುಗಳಲ್ಲಿ ಜಿಲ್ಲಾ ಮುಖ್ಯಾಲಯಗಳಲ್ಲಿ ನೆರೆದ ರೈತರು.

ಸಿಕಾರ್‌ನಲ್ಲಿ ಉಪಜ್ ಮಂಡಿ(ಕೃಷಿ ಉತ್ಪನ್ನಗಳ ಮಂಡಿ)ಯಿಂದ ಕಲೆಕ್ಟರ್ ಕಚೇರಿಯತ್ತ 15000 ರೈತರ ಶಾಂತಿಯುತ ಮೆರವಣಿಗೆ. ಜಿಲ್ಲಾ ಕಲೆಕ್ಟರ್ ಮೂಲಕ ಮುಖ್ಯಮತ್ರಿಗಳಿಗೆ ಮನವಿ ಪತ್ರ ಸಲ್ಲಿಕೆ, ಮತ್ತೆ ಉಪಜ್ ಮಂಡಿಗೆ ಹಿಂದಿರುಗಿ **ಮಹಾ ಧರಣಿ ಆರಂಭ**

ಸಪ್ಟಂಬರ್ 2: ಬೆಳಿಗ್ಯೆ 11.30ರಿಂದ ಸಂಜೆ 5ರ ವರೆಗೆ ಸಾರ್ವಜನಿಕ ಸಭೆ–ರೈತ ಮುಖಂಡರ ಭಾಷಣಗಳು. ನಂತರ ರೈತರೊಂದಿಗೆ ಸಮಾಲೋಚನೆಯ ಸಣ್ಣ –ಸಣ್ಣ ಸಭೆಗಳು.

ರಾತ್ರಿ 9ಗಂಟೆಗೆ ಕಲೆಕ್ಟರ್ ನಿವಾಸದತ್ತ ಶಾಂತಿಯುತ ಮೆರವಣಿಗೆ–**'ಪ್ರಶಾಸನ್ ಕೀ ನೀಂದ್ ಹರಾಮ್'** (ಆಡಳಿತ ನಿದ್ದೆ ಮಾಡಲು ಬಿಡುವುದಿಲ್ಲ) ಎಂಬ ಘೋಷಣೆ. ರಾತ್ರ–ಹಗಲು ಧರಣಿಯನ್ನು ಕಡೆಡಿಸಲು ಅನಗತ್ಯವಾಗಿ ಪೋಲಿಸರಿಂದ ಅಂಬುಲೆನ್ಸ್‌ಗಳು

ಕಿಸಾನ್ ಕರ್ಫ್ಯೂ–ಜೈಲ್ ಭರೋ–'ಪ್ರತಿಮನೆಯಿಂದ ಗೋದಿ,ಹಣ–ಆಡಳಿತ ನಿದ್ದೆ ಮಾಡಲು ಬಿಡುವುದಿಲ್ಲ– ಕವಿ ಸಮ್ಮೇಳನ–ಸರಕಾರದ 'ಶವಯಾತ್ರೆ'–ಜನಾಂದೋಲನವಾಗಿ–ಪಂಜಿನ ಮೆರವಣಿಗೆ –ಪಟ್ಟಣ,ಹಳ್ಳಿ, ಕೇರಿ ಬಂದ್–ಬಸ್,ಟೆಂಪೊ, ರಿಕ್ಷಾ, ಅಂಬುಲೆನ್ಸ್ ಮೆರವಣಿಗೆ–ಡಿಜೆ ಯೂನಿಯನ್ ಹಾಡು–ಸಂಗೀತ ಪ್ರಚಾರ–ಸೆಕ್ಷನ್144, ಜಲಫಿರಂಗಿ, ಇಂಟರ್ನೆಟ್ ಕಡಿತ–ವಿಜಯೋತ್ಸವ

ಮತ್ತಿತರ ವಾಹನಗಳ ಸಂಚಾರ– ಅವು ಬಂದ ಕೂಡಲೇ ಅವಕ್ಕೆ ಶಾಂತಿಯುತವಾಗಿ ಜಾಗ ಬಿಟ್ಟು ನಂತರ ಮತ್ತೆ ಧರಣಿ ಮುಂದುವರಿಕೆ– ಮರುದಿನ ಜನರಿಂದ, ಸ್ಥಳೀಯ ಮಾಧ್ಯಮಗಳಿಂದ ಈ ಶಾಂತಿಯುತ ವರ್ತನೆಗೆ ಪ್ರಶಂಸೆ.

ಸಪ್ಟಂಬರ್ 3: ಸಾರ್ವಜನಿಕ ಸಭೆಗಳಲ್ಲದೆ, ಕವಿ ಸಮ್ಮೇಳನ. ಮರುದಿನ ಸರಕಾರದ **'ಶವಯಾತ್ರೆ' ನಿರ್ಧಾರ**–ಹಳ್ಳಿಗಳಿಂದ ಬಂದು ನೆರೆಯಲು ಜನಗಳಿಗೆ ಕರೆ.

ಸಪ್ಟಂಬರ್ 4: ಸಾಂಪ್ರದಾಯಿಕ ಕೆಂಪು ಸೀರೆ ತೊಟ್ಟ 10,000 ಮಹಿಳೆಯರೂ ಸೇರಿದಂತೆ ಒಂದು ಲಕ್ಷಕ್ಕೂ ಹೆಚ್ಚು ಜನರ ವಸುಂಧರರಾಜೇ ನೇತೃತ್ವದ ಸರಕಾರದ **'ಹೆಣ'** ಹೊತ್ತು **ಬೃಹತ್ ಶಾಂತಿಯುತ 'ಶವಯಾತ್ರೆ'**. ಇದರಿಂದ ಪ್ರೇರಿತರಾಗಿ ಇತರ ಜನವಿಭಾಗಗಳಿಂದ, ವ್ಯಾಪಾರಿ–ವರ್ತಕ ವಿಭಾಗಗಳಿಂದಲೂ ಜನಗಳು ಚಳುವಳಿಯನ್ನು ಸೇರಿಕೊಂಡರು– ಈಗ ಜನಾಂದೋಲನವಾದ ರೈತ ಚಳುವಳಿ

ಸಪ್ಟಂಬರ್ 5: ಇತರ ಸಂಘಟನೆಗಳು, ಕಾರ್ಮಿಕಸ ಸಂಘಗಳು ಮತ್ತಿತರ ಜನಸಂಘಟನೆಗಳಿಂದ ಹಣಕಾಸು ನೆರವು– **500ಕ್ಕೂ ಹೆಚ್ಚು ಟ್ರಾಕ್ಟರುಗಳು ಮತ್ತು ಟ್ರಾಲಿಗಳೊಂದಿಗೆ ರೈತರ ಬೆಂಬಲಕ್ಕೆ ಇಳಿದ ಇಟ್ಟಿಗೆ ಗೂಡು ಕಾರ್ಮಿಕರು** .

ಸಪ್ಟಂಬರ್ 6: ವರ್ತಕರು ಮತ್ತು ವ್ಯಾಪಾರಿಗಳಿಂದ ರೈತರಿಗೆ ಆಹಾರದ ವ್ಯವಸ್ಥೆ– ಅಂದಿನಿಂದ **ವಿವಿಧ ವರ್ತಕ ಸಮೂಹಗಳಿಂದ ಆಹಾರ ಪೂರೈಕೆ, ಫಿಲ್ಟರ್ ನೀರು ಪೂರೈಕೆದಾರರ ಸಂಘದಿಂದ ಪುಕ್ಕಟೆ ಕುಡಿಯುವ**



ನೀರು ಪೂರೈಕೆ. ಮರುದಿನ ರೈತರಿಗೆ ಬೆಂಬಲವಾಗಿ ಅಂಗಡಿ ಮುಚ್ಚುವ ಪ್ರಕಟಣೆ. ರೈತರು ಹೇಳುವ ದಿನದಿಂದ ಹಾಲು ಪೂರೈಕೆ ನಿಲ್ಲಿಸುವುದಾಗಿ ಹಾಲು ಸಾಗಾಣಿಕೆ ಸಂಘಗಳ ಘೋಷಣೆ. ರಾತ್ರಿ 8.30ಕ್ಕೆ ಒಂದು ಬೃಹತ್ ಮತ್ತು ಶಾಂತಿಯುತ ಪಂಜಿನ



ಮೆರವಣಿಗೆ– **ಮಶಾಲ್ ಜುಲೂಸ್**.

ಸಪ್ಟಂಬರ್ 7: ಕಿಸಾನ್ ಸಭಾದ ಕರೆ ಅಥವ ಮಧ್ಯಪ್ರವೇಶವಿಲ್ಲದೆ ಸಿಕಾರ್ ನಗರ ಬಂದ್ ಮಾತ್ರವಲ್ಲ, 'ಗಾಂವ್, ಕಸ್ಬೆ ಸಬ್ ಬಂದ್'

ನಗರ ಬಸ್ ಯೂನಿಯನ್‌ನಿಂದ ನೂರಕ್ಕೂ ಹೆಚ್ಚು ಬಸ್‌ಗಳ ಶಾಂತಿಯುತ ಮೆರವಣಿಗೆ, ಅದನ್ನು ಹಿಂಬಾಲಿಸಿ ಅಂಬುಲೆನ್ಸ್ ಸಂಘದಿಂದ ಅಂಬುಲೆನ್ಸ್‌ಗಳ ಮೆರವಣಿಗೆ, ರಿಕ್ಷಾ ಚಾಲಕರ ಸಂಘದಿಂದ ರಿಕ್ಷಾಗಳ ಮೆರವಣಿಗೆ. ರೈತರು ಆದೇಶ ಕೊಟ್ಟ ದಿನ ಟೆಂಪೋ ಬಂದ್ ನಡೆಸುವುದಾಗಿ ಪ್ರಕಟಣೆ.

ಸಪ್ಟಂಬರ್ 8: ಇನ್ನೆರಡು ದಿನಗಳನ್ನು ಕೊಡುತ್ತೇವೆ, ಸಪ್ಟಂಬರ್ 11ರಿಂದ ಎಲ್ಲವನ್ನೂ ಮುಚ್ಚುವುದಾಗಿ ಸಾರ್ವಜನಿಕ ಸಭೆಯಲ್ಲಿ ಆಮ್ರರಾಮ್ ಪ್ರಕಟಣೆ–ಗಂಡಸರು ಕಲೆಕ್ಟರ್ ಕಚೇರಿಯತ್ತ ಮೆರವಣಿಗೆ ನಡೆಸುತ್ತಾರೆ, ಮಹಿಳೆಯರು ಪ್ರತಿ ಹಳ್ಳಿಗೆ ಬರುವ, ಹಳ್ಳಿಯಿಂದ ಹೋಗುವ ಎಲ್ಲ ರಸ್ತೆಗಳನ್ನು ಮುಚ್ಚುತ್ತಾರೆ.

ಸಪ್ಟಂಬರ್ 9: ಸಿಕಾರ್ ಡಿಜೆ ಯೂನಿಯನ್‌ನಿಂದ ಸಿಕಾರ್ ನಗರದ ಎಲ್ಲ ಬೀದಿಗಳಲ್ಲಿ 100 ಡಿಜೆ ಟ್ರಕ್‌ಗಳಲ್ಲಿ ಹಾಡುಗಳು ಮತ್ತು ಸಂಗೀತ ಪ್ರಚಾರ– ಕಿಸಾನ್ ಸಭಾ ಮತ್ತು ರೈತ ಮುಖಂಡರಾದ ಆಮ್ರರಾಮ್ ಮತ್ತು ಪೇಮ್ ರಾಮ್ ಕುರಿತಾಗಿ. ಎಲ್ಲೆಲ್ಲೂ ಸಂಗೀತಕ್ಕೆ ಹೆಜ್ಜೆ ಹಾಕುತ್ತ, ಮೊಬೈಲುಗಳಲ್ಲಿ ರೆಕಾರ್ಡ್ ಮಾಡಿಕೊಳ್ಳುವ ಅಪೂರ್ವ ದೃಶ್ಯಗಳು.

ಸಪ್ಟಂಬರ್ 10: ರೈತರಿಗೆ 50ಕ್ಕೂ ಹೆಚ್ಚು ಸಂಘಟನೆಗಳ ಬೆಂಬಲ ಘೋಷನೆ. ಚಳುವಳಿಯ ಯಶಶಸ್ಸು ಕಂಡು ಇತರ ಪಕ್ಷಗಳ ಹಲವು ಸ್ಥಳೀಯ ಮುಖಂಡರಿಂದ ಬೆಂಬಲ ಮತ್ತು ಸೌಹಾರ್ದದ ಪ್ರಕಟಣೆ. ಸಾರ್ವಜನಿಕ ಸಭೆಯನ್ನುದ್ದೇಶಿಸಿ ಬೆಂಬಲದ ಭಾಷಣಗಳು.

ಕೊನೆಗೂ ಹತ್ತನೇ ದಿನ ಕಲೆಕ್ಟರ್ ಕಚೇರಿಗೆ ಬರಹೇಳಿಕೆ.

ಸಪ್ಟಂಬರ್ 11: ರೈತ ಮುಖಂಡರ ಕರೆ–ಯಂತೆ ಜಿಲ್ಲೆಯಾದ್ಯಂತ 'ಜೇಲಿ'(ಬೇಸಾಯದ ಒಂದುಉಪಕರಣ) ಹಿಡಿದ ಮಹಿಳೆಯರಿಂದ ಚಕ್ಕಾಜಾಮ್, ಅಂದರೆ ರಸ್ತೆ ಬಂದ್. ಸುಮಾರು 300 ಆಯಕಟ್ಟಿನ ಸ್ಥಳಗಳನ್ನು ಗುರುತಿಸಲಾಯಿತು. ಆದರೆ ಜನಗಳು ಈ ಹಿಂದೆಯೂ ಮಾಡಿದಂತೆ ಇನ್ನೂ ಹಲವಾರು ಸ್ಥಳಗಳನ್ನು ತಾವಾಗಿಯೇ ಗುರುತಿಸಿಕೊಂಡು ರಸ್ತೆ ಬಂದ್ ನಡೆಸಿದರು.

ನಗರದಲ್ಲಿ ಮಾತುಕತೆ ನಡೆಯಬೇಕಾದ ಕಲೆಕ್ಟರ್ ಕಚೇರಿಯತ್ತ ಸಾವಿರಾರು ರೈತರು. **ಎಲ್ಲೆಲ್ಲೂ ಪೋಲೀಸರು, ಸೆಕ್ಷನ್ 144 ಜಾರಿ. ಇಂಟರ್ನೆಟ್ ಕಟ್. ಪೋಲೀಸರ ರಸ್ತೆ ತಡೆ! ಜಲಫಿರಂಗಿಗಳೊಂದಿಗೆ.** ಪೋಲೀಸರ ತಡೆಗೋಡೆಗಳನ್ನು ದಾಟದಿರಲು ರೈತರ ಸಹನಾಪೂರ್ಣ ನಿರ್ಧಾರ. ಮಾತುಕತೆ ಆರಂಭಿಸಲಿಲ್ಲ. ಅದುವರೆಗೆ ಗಂಡಸರು ಕೂತಲ್ಲಿಂದ ಏಳುವುದಿಲ್ಲ, ಹೆಂಗಸರು ರಸ್ತೆ ಬಂದ್ ತೆರವುಗೊಳಿಸುವುದಿಲ್ಲ ಎಂದು ದೃಢ ನಿರ್ಧಾರ.

ಸಪ್ಟಂಬರ್ 12: ಸಂಜೆ 5 ಗಂಟೆಗೆ ಮಾತುಕತೆಗೆ ಆಹ್ವಾನ.

ರಾತ್ರಿಯಿಡೀ ಹಾಡುಗಳು, ಘೋಷಣೆಗಳು.ಆರೆಸ್ಸೆಸ್‌ನ ವಿರೋಧ ಮತ್ತು ಬಿಜೆಪಿಯೊಳಗಿನ ಆಂತರಿಕ ಗುಂಪು ರಾಜಕೀಯದಿಂದಾಗಿ ನಾಲ್ಕು ಹಂತಗಳಲ್ಲಿ ರೈತ ಮುಖಂಡರೊಂದಿಗೆ ಮಾತುಕತೆ.


ಸಪ್ಟಂಬರ್ 13: ಮುಂದುವರೆದ ಮಹಾಪಡಾವ್, ಮುಂದುವರೆದ ಚಕ್ಕಾಜಾಮ್. ಮಾತುಕತೆ





ಮುಂದುವರಿಕೆ. ಮುಂಜಾನೆ 1 ಗಂಟೆಯ ವೇಳೆಗೆ ಕೊನೆಗೂ ಒಪ್ಪಂದ. ವಿಜಯೋತ್ಸವದ ವಾತಾವರಣ


ಸಪ್ಟಂಬರ್ 14: ಆಮ್ರರಾಮ್ ರಿಂದ ಸರಕಾರ ಕೊನೆಗೂ ಕಿವಿ ತೆರೆದು, ಕಣ್ಣು ಪಟ್ಟಿ ತೆಗೆದು, ಒಪ್ಪಿಕೊಂಡಿರುವ ಅಂಶಗಳ ವಿವರಣೆ, ಮಹಾಪಡಾವ್ ಮತ್ತು ಚಕ್ಕಾಜಾಮ್ ನಿಲ್ಲಿಸುವ ಪ್ರಕಟಣೆ– ಎಲ್ಲ ರೈತ ಸಂಘಟನೆಗಳು ಮತ್ತು ಜನಸಂಘಟನೆಗಳನ್ನು ಒಂದು ಗೂಡಿಸಿ **ರಾಷ್ಟ್ರಮಟ್ಟಲ್ಲಿ ಹೋರಾಟ ಮುಂದುವರೆಯುತ್ತದೆ, ಸರಕರ ತನ್ನ ಧೋರಣೆಗಳನ್ನು ಬದಲಿಸಬೇಕು ,ಇಲ್ಲವೇ ಸರಕಾರವನ್ನೇ ಬದಲಿಸಬೇಕಾಗುತ್ತದೆ** ಎಂದರು ಎಐಕೆಎಸ್ ಅಧ್ಯಕ್ಷ ಆಮ್ರರಾಮ್.



















ಕಾರ್ಮಿಕರ ಚಾರಿತ್ರಿಕ ಮಹಾನಡೆ.... ಪುಟ 8 ರಿಂದ

ಪ್ರದರ್ಶಿಸಲಾಯಿತು. ಈ ಹೋರಾಟಕ್ಕೆ ಮುಂಚೆ ಸಿಐಟಿಯು ನಿಯೋಗ ಸಂಬಂಧಿಸಿದ ಅಧಿಕಾರಸ್ಥರ ಬಳಿ ಮನವಿ ಕೊಟ್ಟು ಚರ್ಚಿಸಲಾಗಿತ್ತು. ಹೋರಾಟದ ಸ್ಥಳಕ್ಕೆ ಸರ್ಕಾರದ ಪರವಾಗಿ ಕಾರ್ಮಿಕ ಮಂತ್ರಿಗಳು ಆಗಮಿಸಿ ಕಾರ್ಮಿಕರ ಸಮಸ್ಯೆಗಳನ್ನು ಮತ್ತೊಮ್ಮೆ ಆಲಿಸಿದರು.

ಬೇಡಿಕೆಗಳಿಗೆ ಸರ್ಕಾರದ ತಾತ್ವಿಕ ಸ್ಪಂದನೆ:

1) ರಾಜ್ಯದಲ್ಲಿ ಎಲ್ಲಾ ವಿಭಾಗದ ಕಾರ್ಮಿಕರ ಸಮಸ್ಯೆಗಳನ್ನು ಚರ್ಚಿಸಲು ತ್ರಿಪಕ್ಷೀಯ ಸಮಿತಿಯಾದ "ಕರ್ನಾಟಕ ಲೇಬರ್ ಕಾನ್ಫರೆನ್ಸ್" ವೇದಿಕೆಯನ್ನು ರಚಿಸಲು ತಾತ್ವಿಕವಾಗಿ ಒಪ್ಪಿಗೆಯನ್ನು ನೀಡಲಾಗಿದೆ.
2) ಕನಿಷ್ಟ ಕೂಲಿ ಸಲಹಾ ಮಂಡಳಿಯಲ್ಲಿ ಸಿಐಟಿಯು ಪ್ರಾತಿನಿಧ್ಯವನ್ನು ಈ ಬಾರಿ ಕೈಬಿಟ್ಟಿರುವುದನ್ನು ಸರಿಪಡಿಸಿ ಮತ್ತೆ ಹೊಸ ನೊಟಿಫಿಕೇಶನ್ ಹೊರಡಿಸಿ, ಸಿಐಟಿಯು ಗೆ ಪ್ರಾತಿನಿಧ್ಯವನ್ನು ನೀಡಿರುವುದನ್ನು ಗೆಜೆಟ್ ನಲ್ಲಿ ಪ್ರಕಟಿಸಲಾಗಿದೆ.
3) ರಾಜ್ಯದಲ್ಲಿ ವಿವಿಧ ಖಾಸಗಿ ಕಾರ್ಖಾನೆಗಳಲ್ಲಿ ದುಡಿಯುವ ಕಾರ್ಮಿಕರ ನಿವೃತ್ತಿ ವಯಸ್ಸನ್ನು 58 ರಿಂದ 60ಕ್ಕೆ ಹೆಚ್ಚಿಸಲಾಗಿತ್ತು. ಆದರೆ ಜಾರಿಯಾಗಿರಲಿಲ್ಲ. ಸೆ. 21 ರೊಳಗೆ ದೃಢೀಕೃತ ಸ್ಥಾಯೀ ಆದೇಶಗಳಿಗೆ 60 ವರ್ಷ ಕುರಿತು ತಿದ್ದುಪಡಿ ಮಾಡಿ ಆದೇಶ ಹೊರಡಿಸಲು ಸರ್ಟಿಫೈಯಿಂಗ್ ಅಧಿಕಾರಿಗಳಾದ ಡಿ.ಎಲ್.ಸಿ ಗಳಿಗೆ ಆದೇಶಿಸಲಾಗಿದೆ.
4) ಬಿಸಿಯೂಟ ನೌಕರರ ಮುಂದುವರಿದ ಪ್ರತಿಭಟನೆಯಿಂದಾಗಿ ಶಿಕ್ಷಣ ಸಚಿವರೊಂದಿಗೆ 2 ಘಂಟೆಗಳ ಕಾಲ ಜಂಟಿ ಸಭೆ ನಡೆದು ರಾತ್ರಿ 9 ಘಂಟೆಗೆ ಹೋರಾಟದ ಸ್ಥಳಕ್ಕೆ ಬಂದು ಸಂಭಾವನೆ ಹೆಚ್ಚಿಸಲು, ಕ್ಲಷ್ಟರ್ ಮಟ್ಟದ ತರಬೇತಿ ನೀಡಲು ಮತ್ತು ಎಸ್.ಡಿ.ಎಂ.ಸಿ ಗಳ ಕಿರುಕುಳಕ್ಕೆ ಒಳಗಾಗಿ ಕೆಲಸದಿಂದ ತೆಗೆಯುವ ಪದ್ಧತಿಯನ್ನು ನಿಲ್ಲಿಸಲು ಕ್ರಮಕೈಗೊಳ್ಳುವುದಾಗಿ ತಿಳಿಸಿದರು. ಉಳಿದ ಬೇಡಿಕೆಗಳನ್ನು ಪ್ರತ್ಯೇಕವಾಗಿ ಕಾರ್ಮಿಕ ಇಲಾಖೆಯೊಟ್ಟಿಗೆ ಹಾಗೂ ಮುಖ್ಯ ಮಂತ್ರಿಗಳ ಜೊತೆಯಲ್ಲಿನ ಜಂಟಿ ಸಭೆ ನಡೆಸಲು ಮೌಖಿಕವಾಗಿ ಒಪ್ಪಿಗೆಯನ್ನು ಸೂಚಿಸಲಾಯಿತು.

●

ಬೆಂಗಳೂರಿನ ಮಹಾನಡೆ....... ಪುಟ 16 ರಿಂದ

ಸಾರ್ಥಕವಾಗಬೇಕಿದ್ದಲ್ಲಿ ಈ ತ್ರಿವಳಿ ಮಸೂದೆಗಳನ್ನು ಅಂಗೀಕರಿಸಿ ಶಾಸನಗಳಾಗಿಸಬೇಕು, ಎಂಬುದು ಸಿಐಟಿಯು ನ ಒತ್ತಾಯವಾಗಿದೆ.

ಡಿಸೆಂಬರ್ 6 ರಂದು "ಕರ್ನಾಟಕ ಲೇಬರ್ ಕಾನ್ಫರೆನ್ಸ್"

ಆದರೆ 2014'ರ ಸಭೆಯ ನಂತರ ಒಂದೇ ಒಂದು ಸಭೆಯನ್ನು ನಡೆಸದ ಮುಖ್ಯಮಂತ್ರಿ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿನ ನಿಧಿಯನ್ನು ಇತರೆ ಯೋಜನೆಗಳಿಗೆ ಬಳಸಲು ಮುಂದಾಗಿದ್ದಾರೆ. ಅಸಂಘಟಿತ ಕಾರ್ಮಿಕರ ಕಲ್ಯಾಣ ಮಂಡಳಿಗೆ ಹಣ ನೀಡುತ್ತಿಲ್ಲ. ಈ ನಿಟ್ಟಿನಲ್ಲಿ ಸಿಐಟಿಯು ನ ಬೇಡಿಕೆಗಳ ಮೇಲೆ ಸರ್ವಸಮ್ಮತಿ ರೂಪಿಸಲು "ಕರ್ನಾಟಕ ಲೇಬರ್ ಕಾನ್ಫರೆನ್ಸ್" ಅನ್ನು 3 ತಿಂಗಳ ಒಳಗಾಗಿ ನಡೆಸಲು ಕ್ರಮವಹಿಸುವ ಮೂಲಕ ತನ್ನ ಬದ್ಧತೆಯನ್ನು ತೋರಬೇಕಿದೆ ಎಂಬುದು ಮಹಾನಡೆಯ ಒತ್ತಾಯವಾಗಿದೆ. ಅದೇ ವೇಳೆ ಕಾರ್ಮಿಕ ಕಾನೂನುಗಳನ್ನು ಬಂಡವಾಳಗಾರರ ಪರ ಬದಲಾಯಿಸುವ ಕೇಂದ್ರದ ಮೋದಿ ನೇತೃತ್ವದ ಸರ್ಕಾರದ ವಿರುದ್ಧ ಕೇಂದ್ರ ಕಾರ್ಮಿಕ ಸಂಘಟನೆಗಳು (ಜೆಸಿಟಿಯು) ನೇತೃತ್ವದ "ನವೆಂಬರ್ 9 ರಿಂದ 11" ರವರೆಗೆ ದೆಹಲಿ ಚಲೋ "ಮಹಾಪಡಾವ್" ಪೂರ್ವ ಸಿಐಟಿಯು ನ ಸ್ವತಂತ್ರ ಪ್ರಚಾರದ ಬಾಗವಾಗಿ "ಆಗಸ್ಟ್ 14 ರ ಸ್ವಾತಂತ್ರೋತ್ಸವ ಸತ್ಯಾಗ್ರಹದಿಂದ ಸೆಪ್ಟೆಂಬರ್ 14 ಮಹಾನಡೆ ವರೆಗಿನ ಪ್ರಚಾರವನ್ನು ಸಿಐಟಿಯು ರಾಜ್ಯದಲ್ಲಿ ಜೆಸಿಟಿಯು ನ 12 ಅಂಶಗಳ ಬೇಡಿಕೆಗಳಿಗಾಗಿ ನಡೆಸಿದೆ.

2017 ಜನವರಿ 30 ರಿಂದ ಫೆಬ್ರವರಿ 2 ರವರೆಗೆ ಸಿಐಟಿಯು ಬೆಂಗಳೂರಿನಲ್ಲಿ ನಡೆಸಿದ್ದ "ನಿರಂತರ ಧರಣಿ" ವೇಳೆ ಈ ಎಲ್ಲಾ ಬೇಡಿಕೆಗಳ ಬಗ್ಗೆ ಚರ್ಚಿಸಿದ್ದ ಕಾರ್ಮಿಕ ಸಚಿವರು ಅಂದು ಕೊಟ್ಟಿದ್ದ ಮಾತುಗಳನ್ನು ಈಡೇರಿಸಲಾಗದ ಕಾರಣ, ಮಹಾನಡೆಗೆ ಬಂದು ಮನವಿ ಸ್ವೀಕರಿಸಲು ಮೊದಲಿಗೆ ಹಿಂಜರಿದರು. ಆದರೆ ಕೊನೆಗೆ ಬಂದು ಮನವಿ ಸ್ವೀಕರಿಸಿ ತಾತ್ವಿಕವಾಗಿ "ಕರ್ನಾಟಕ ಲೇಬರ್ ಕಾನ್ಫರೆನ್ಸ್" ನಡೆಸಲು ಒಪ್ಪಿದ್ದಾರೆ. ಮುಖ್ಯಮಂತ್ರಿಗಳ ಸಮ್ಮತಿ ಪಡೆದು ದಿನಾಂಕ ಪ್ರಕಟಿಸುವುದಾಗಿ ಘೋಷಿಸಿದ್ದಾರೆ. ಭಾರತದ ಮೊದಲ ಕಾರ್ಮಿಕ ಸಚಿವರಾಗಿದ್ದ ಡಾ॥ ಬಿ.ಆರ್. ಅಂಬೇಡ್ಕರ್‌ರವರು ಕಾರ್ಮಿಕ ಸಚಿವರಾಗಿದ್ದ 75 ನೇ ವರ್ಷಾಚರಣೆ ಸಂದರ್ಭದಲ್ಲಿ, ಇಂಡಿಯನ್ ಲೇಬರ್ ಕಾನ್ಫರೆನ್ಸ್ (ಐಎಲ್‌ಸಿ) ಯ ಅಧ್ಯಕ್ಷತೆ ವಹಿಸಿದ್ದರು ಎಂಬ ಐತಿಹಾಸಿಕ ಸ್ಮರಣೆಯ ಹಿನ್ನೆಲೆಯಲ್ಲಿ ಅವರ ಮಹಾಪರಿನಿರ್ವಾಣ ದಿನವಾದ ಡಿಸೆಂಬರ್ 6 ರಂದು ರಾಜ್ಯದಲ್ಲಿ ಮೊದಲ ಬಾರಿಗೆ "ಕರ್ನಾಟಕ ಲೇಬರ್ ಕಾನ್ಫರೆನ್ಸ್" ನಡೆಸುವ ಮೂಲಕ ಐತಿಹಾಸಿಕ ದಾಖಲೆ ರೂಪಿಸಬೇಕೆಂದು ರಾಜ್ಯ ಸರ್ಕಾರವನ್ನು ಕಾರ್ಮಿಕ ಸಚಿವರ ಮೂಲಕ ಸಿಐಟಿಯು ಮಹಾನಡೆ ಒತ್ತಾಯಿಸಿದೆ.

ಪ್ರಥಮ ಇಂಡಿಯನ್ ಲೇಬರ್ ಕಾನ್ಫರೆನ್ಸ್ ನಡೆಸುವ ಮೂಲಕ ಡಾ॥ ಬಿ.ಆರ್. ಅಂಬೇಡ್ಕರ್ ಹಲವು ಕಾರ್ಮಿಕ ಕಾನೂನುಗಳ ರಚನೆಗೆ ಮುಂದಾದ ಇತಿಹಾಸ ಭಾರತದಾದರೆ, ರಾಜ್ಯದಲ್ಲಿ ಪ್ರಥಮ "ಕರ್ನಾಟಕ ಲೇಬರ್ ಕಾನ್ಫರೆನ್ಸ್" (ಕೆಎಲ್‌ಸಿ) ನಡೆಸುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿ ಮುಂದಡಿ ಇರುವಂತೆ ಮಾಡಿದ ಇತಿಹಾಸ ರಾಜ್ಯದ ಸಿಐಟಿಯು ನ ಸೆಪ್ಟೆಂಬರ್ 14 ಮಹಾನಡೆ ನಿರ್ಮಿಸಲಿದೆ ಎಂಬ ವಿಶ್ವಾಸದೊಂದಿಗೆ, ನವೆಂಬರ್ 9 ರಿಂದ 11 ರ ವರೆಗೆ ದೆಹಲಿಯಲ್ಲಿ ನಡೆಯಲಿರುವ "ಮಹಾ ಪಡಾವ್‌ಗೆ" ಮುನ್ನಡೆಯಲು ಕರೆ ನೀಡುವ ಮೂಲಕ ಮಹಾಪಡಾವ್‌ಗೆ ಮಹಾನಡೆ ಮುನ್ನುಡಿ ಬರೆದಿದೆ.

●



ದೆಹಲಿಯ "ಮಹಾಪಡಾವ್"ಗೆ ಮುನ್ನುಡಿ ಬರೆದ ಬೆಂಗಳೂರಿನ ಮಹಾನಡೆ.......



ಕೆ.ಎನ್. ಉಮೇಶ್

ರಾಜ್ಯದ 178 ಕ್ಕೂ ಹೆಚ್ಚು ಸಂಘಗಳಿಗೆ ಸೇರಿದ್ದ ಸಿಐಟಿಯು ಸೇರ್ಪಡೆ ಸಂಘಗಳ ಕಾರ್ಮಿಕರು ಸೆಪ್ಟೆಂಬರ್ 14 ರಂದು "ನಮ್ಮ ನಡೆ... ಬೆಂಗಳೂರಿನೆಡೆ... ಮಹಾನಡೆ" ಎಂಬ ಘೋಷಣೆಯೊಂದಿಗೆ ಕ್ರಾಂತಿವೀರ ಸಂಗೊಳ್ಳಿರಾಯಣ್ಣ ರೈಲ್ವೆ ನಿಲ್ದಾಣದಿಂದ ಫ್ರೀಡಂ ಪಾರ್ಕ್‌ವರೆಗೆ "ಕೆಂಪು ಪ್ರವಾಹವಾಗಿ" ಸಾವಿರಾರು ಸಂಖ್ಯೆಯಲ್ಲಿ ಹೆಜ್ಜೆ ಹಾಕಿ ಮುನ್ನೆಡೆದರು, ಫ್ರೀಡಂ ಪಾರ್ಕ್ ಪಕ್ಕದ ಕಾಳಿದಾಸ ರಸ್ತೆ ತುಂಬಿ, ಶೇಷಾದ್ರಿ ರಸ್ತೆಯು ಸಾಲದಾಗಿ ನಿಂತ ಕಾರ್ಮಿಕರು ಅನಿವಾರ್ಯವಾಗಿ ರಸ್ತೆಯಲ್ಲಿ ಕುಳಿತು ತಮ್ಮ ಮಹಾನಡೆಯನ್ನು ವಿಧಾನಸೌಧಕ್ಕೆ ಒಂದು ಕಿ.ಮಿ. ಅಂತರದಲ್ಲಿ ಮುಂದುವರಿಸಿದರು. ಪರಿಣಾಮವಾಗಿ ರಾಜಧಾನಿ ಬೆಂಗಳೂರಿನ ಹೃದಯ ಭಾಗವಾದ ಶೇಷಾದ್ರಿ ರಸ್ತೆ ಬೆ. 11.30 ರಿಂದ ಸಂಜೆ 4.30 ರವರೆಗೆ ಸ್ಥಬ್ದವಾಗಿ ನಿಂತು, ಮಹಾನಡೆಗೆ ಸಾಕ್ಷಿಯಾಯಿತು.

ಗೌರಿಗೆ ಮೌನ ಶ್ರದ್ಧಾಂಜಲಿ :

ಕಾರ್ಮಿಕ ನಾಯಕರ ಮಾತುಗಳು ಆರಂಭಕ್ಕೂ ಮುನ್ನ ಇತ್ತೀಚೆಗೆ ಹಂತಕರ ಗುಂಡಿಗೆ ಬಲಿಯಾದ ಗೌರಿ ಲಂಕೇಶ್‌ರವರಿಗೆ ರಸ್ತೆಯಲ್ಲೇ ನಿಂತು 40 ಕ್ಕೂ ಹೆಚ್ಚು ಸಹಸ್ರ ಕಾರ್ಮಿಕರು ಶ್ರದ್ಧಾಂಜಲಿ ಸಲ್ಲಿಸಿದರು. ಮಹಾನಡೆಗೂ ಮುನ್ನ "ಸಮಗ್ರ –ಸೌಹಾರ್ದ–ಸಮೃದ್ದ ಕರ್ನಾಟಕ–ದುಡಿಯುವ ಜನರ ಹಕ್ಕುಗಳ ರಕ್ಷಣೆಗಾಗಿ" ಎಂಬ ಘೋಷವಾಕ್ಯದ ರಾಜ್ಯ ಮಟ್ಟದ ಜಾಗೃತ್ತಿ ಜಾಥಾ ಜುಲೈ 29 ರಿಂದ ಆಗಸ್ಟ್ 13 ರವರೆಗೆ ವಿಧುರಾಶ್ವತದಿಂದ ಕುಂದಾಪುರದವರೆಗೆ ನಡೆದಿತ್ತು. ಅಗಸ್ಟ್ 14 ರ ಸ್ವಾತಂತ್ರೋತ್ಸವ ಸತ್ಯಾಗ್ರಹದಲ್ಲಿ ರಾಜ್ಯದ 105 ಕೇಂದ್ರಗಳಲ್ಲಿ ಅಹೋರಾತ್ರಿ ಪ್ರತಿಧ್ವನಿಸಿತ್ತು. ಆ ನಂತರದ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಸ್ಥಳೀಯ ಜಾಥಾ ಮೂಲಕ ವ್ಯಾಪಕತೆ ಪಡೆದು, ಸೆಪ್ಟೆಂಬರ್ 14'ರ ಮಹಾನಡೆಯಲ್ಲಿ ಸ್ಕೀಂ ನೌಕರರಾದ ಅಂಗನವಾಡಿ, ಬಿಸಿಯೂಟ ನೌಕರರು, ಮುನಸಿಪಾಲ್ – ಪಂಚಾಯತಿ ನೌಕರರು, ಹಮಾಲಿ. ಕಟ್ಟಡ, ಆಟೋ ಚಾಲಕರು, ಬೀದಿಬದಿ ವ್ಯಾಪಾರಿಗಳು, ಮನೆ ಕೆಲಸಗಾರರು, ಮುಂತಾದ ಅಸಂಘಟಿತ ಕಾರ್ಮಿಕರು, ವಿದ್ಯುತ್ ಬಿಎಸ್‌ಎನ್‌ಎಲ್, ವಿವಿಧ ಕಾರ್ಖಾನೆಗಳ ಗುತ್ತಿಗೆ ಕಾರ್ಮಿಕರ ಜೊತೆಯಲ್ಲೆ ಬೆಂಗಳೂರು, ಮೈಸೂರು, ಮಂಡ್ಯ, ತುಮಕೂರು, ರಾಯಚೂರು ಮುಂತಾದೆಡೆಯ ಕೈಗಾರಿಕಾ ಕಾರ್ಮಿಕರು ಸಹಾ ಮುಷ್ಕರ ನಡೆಸಿ ಸಾವಿರಾರು ಸಂಖ್ಯೆಯಲ್ಲಿ ಮಹಾನಡೆಯಲ್ಲಿ ಭಾಗವಹಿಸಿದ್ದರು.



1. ಸರಕಾರ ಕಾರ್ಮಿಕರಿಗೆ ನುಡಿದಂತೆ ನಡೆದಿಲ್ಲ!
2. ಎಲ್ಲಾ ಅನುಸೂಚಿತ ಉದ್ಯೋಗಗಳಿಗೂ ಒಂದೇ ಸಮಾನ ಕನಿಷ್ಟ ರೂ. 18 ಸಾವಿರ ಕೂಲಿಯ ಅಧಿಸೂಚನೆ ಹೊರಡಿಸಬೇಕು.
3. ಗುತ್ತಿಗೆ ಮುಂತಾದ ಕಾಯಮೇತರ ಕಾರ್ಮಿಕರ ಕಾಯಂಗೆ ಶಾಸನ.
4. ಕಾರ್ಮಿಕ ಸಂಘ ಕಡ್ಡಾಯ ಮಾನ್ಯತೆಗೆ ಶಾಸನ.
4. ಸಂಘಟಿತ ಕಾರ್ಮಿಕರಿಗೆ ಭವಿಷ್ಯ ನಿಧಿಗೆ ಶಾಸನ.
5. ಸ್ಕೀಂ ನೌಕರರನ್ನು ಕನಿಷ್ಠ ವೇತನ ವ್ಯಾಪ್ತಿಗೆ ಒಳಪಡಿಸುವಿಕೆ.
6. ಪಂಚಾಯತಿ ಮುಂತಾದ ಸ್ಥಳೀಯ ಸಂಸ್ಥೆ ನೌಕರರ ವೇತನವನ್ನು ರಾಜ್ಯ ಬಜೆಟ್‌ನ ಯೋಜನೇತರ ವೆಚ್ಚ ವ್ಯಾಪ್ತಿಗೆ ಒಳಪಡಿಸುವಿಕೆ.
7. ಬೆಲೆ ಏರಿಕೆ ನಿಯಂತ್ರಣ–ಸಾರ್ವಜನಿಕ ಪಡಿತರ ವ್ಯವಸ್ಥೆ.
8. ಅಸಂಘಟಿತ ಕಾರ್ಮಿಕರಿಗೆ ವಸತಿಯೋಜನೆ–ಕಲ್ಯಾಣ ಯೋಜನೆಗಳಿಗಾಗಿ.
9. ಎಲ್ಲಾ ಜಿಲ್ಲೆಗಳಲ್ಲೂ ಕಾರ್ಮಿಕ ನ್ಯಾಯಾಲಯಗಳ ಸ್ಥಾಪನೆ.
10. ಮೇಲಿನ ನಿರ್ದಿಷ್ಟ ಬೇಡಿಕೆಗಳಿಗಾಗಿ ಎಲ್ಲಾ ಭಾಗಿದಾರರಲ್ಲೂ ಸರ್ವಸಮ್ಮತಿ ಮೂಡಿಸಲು ಇಂಡಿಯನ್ ಲೇಬರ್ ಕಾನ್ಫೆರೆನ್ಸ್ (ಜೆಸಿಸಿ) ಮಾದರಿಯಲ್ಲಿ ತ್ರಿಪಕ್ಷೀಯ 'ಕರ್ನಾಟಕ ಲೇಬರ್ ಕಾನ್ಫರೆನ್ಸ್' (ಕೆಎಲ್‌ಸಿ) ನಡೆಸಬೇಕು.

ಈ ಬೇಡಿಕೆಗಳಿಗಾಗಿ ಸಿಐಟಿಯು 2014 ರಿಂದ ನಿರ್ದಿಷ್ಟವಾಗಿ ಒತ್ತಾಯಿಸುತ್ತಾ ಸಮಾನ ಕನಿಷ್ಠ ವೇತನಕ್ಕಾಗಿ 2008 ರಿಂದ ಹೋರಾಟ ನಡೆಸುತ್ತಾ ಬಂದಿದೆ. 2014 ಜನವರಿ 20 ರಂದು ನಡೆಸಿದ್ದ ವಿಧಾನಸೌಧ ಚಲೋ ನಂತರ ಜನವರಿ 23 ರಂದು ಅಂದಿನ ಕಾರ್ಮಿಕ ಸಚಿವರು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆಸಿದ್ದ ಸಭೆಯ ನಿದೇಶನದಂತೆ ಕಾರ್ಮಿಕ ಇಲಾಖೆಯು ಸಿದ್ದಪಡಿಸಿರುವ ತ್ರಿವಳಿ ಕರಡು ಮಸೂದೆಗಳಾದ ಗುತ್ತಿಗೆ ಮುಂತಾದವರ ಕಾಯಂಗೆ ಶಾಸನದ ಕರಡು, ಸಂಘ ಮಾನ್ಯತೆಗೆ ಶಾಸನ ಕರಡು, ಅಸಂಘಟಿತ ಕಾರ್ಮಿಕರಿಗೆ ಭವಿಷ್ಯ ನಿಧಿ ಶಾಸನದ ಕರಡುಗಳು 4 ವರ್ಷಗಳಾದರು ಅಂಗೀಕಾರವಾಗುತ್ತಿಲ್ಲ. ಸುಪ್ರಿಂ ಕೋರ್ಟ್ ನಿರ್ದೇಶನದ "ಸಮಾನ ಕೆಲಸಕ್ಕೆ – ಸಮಾನ ವೇತನ" ಜಾರಿಗೊಳ್ಳುತ್ತಿಲ್ಲ. ಈ ಎಲ್ಲಾ ಕಾರಣಗಳಿಂದಾಗಿ ರಾಜ್ಯದ ಕಾಂಗ್ರೆಸ್ ಸರ್ಕಾರ "ನುಡಿದಂತೆ ನಡೆದ ಸರ್ಕಾರವಾಗುವುದಿಲ್ಲ" ಸರ್ಕಾರದ ಕಳೆದ ನಾಲ್ಕು ವರ್ಷಗಳು

ಪುಟ 15 ಕ್ಕೆ

JANASHAKTHIKANNADAVARAPATRIKE: Printed, Published by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**